ಸಂಪುಟ: 05 ಸಂಚಿಕೆ: 301 ಪುಟಗಳು: 08 ಬುಧವಾರ 14 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಇತರರಿಗಾಗಿ ನಿಮ್ಮ ಸ್ವಂತಿಕೆಯನ್ನು ಎಂದಿಗೂ ಬಿಟ್ಟುಕೊಡಬೇಡಿ. ಏಕೆಂದರೆ ಈ ಪ್ರಪಂಚದಲ್ಲಿ ನಿಮ್ಮ ಪಾತ್ರವನ್ನು ನಿಮಗಿಂತ ಚೆನ್ನಾಗಿ ಯಾರೂ ನಿಭಾಯಿಸಲು ಸಾಧ್ಯವಿಲ್ಲ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಕಾಮೆಂಟ್

### ಕಿಡಿಗೇಡಿಗಳಿಗೆ ಮೋಟಮ್ಮ ಎಚ್ಚರಿಕೆ

• **ಉದಯವಾಹಿನಿ, ಬೆಂಗಳೂರು**

ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲವಾಗಿ ಕಾಮೆಂಟ್ ಹಾಕಿದ ಕಿಡಿಗೇಡಿಗಳ ವಿರುದ್ಧ ಕಾಂಗ್ರೆಸ್ ಶಾಸಕಿ ನಯನಾ ಮೋಟಮ್ಮ ಕಿಡಿಕಾರಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದ ಫೋಟೋಗಳನ್ನು ನಯನಾ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಇದಕ್ಕೆ ಕೆಲವು ಕಿಡಿಗೇಡಿಗಳು ಕಾಮೆಂಟ್ ಮಾಡಿದ್ದಾರೆ. ಅಶ್ಲೀಲವಾಗಿ ಕಾಮೆಂಟ್ ಹಾಕುವ ಮೂಲಕ ಕೀಳಾಗಿ ನಡೆದುಕೊಂಡಿದ್ದಾರೆ.

ಕಿಡಿಗೇಡಿಗಳ ವರ್ತನೆಗೆ ನಯನಾ ಮೋಟಮ್ಮ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಇದು ಮಹಿಳಾ ವಿರೋಧ ಮನೋಭಾವ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀವು ಇಂತಹದ್ದೇ ಪ್ರಶ್ನೆಯನ್ನು ಪುರುಷ ರಾಜಕಾರಣಿಗಳಿಗೆ ಏಕೆ ಕೇಳುವುದಿಲ್ಲ ಎಂದು ಪ್ರಶ್ನಿಸಿದ್ದಾರೆ.

ನಾವು ಸ್ಲೀವ್ ಲೆಸ್ ಬಟ್ಟೆ, ಜೀನ್ಸ್ ಅಥವಾ ಪ್ಯಾಂಟ್ ಧರಿಸಿದರೆ ನಮ್ಮನ್ನು ಕೆಲಸ ಮಾಡದ ರಾಜಕಾರಣಿ ಎಂದು ಕರೆಯುತ್ತಾರೆ. ನಮ್ಮ ಉಡುಪನ್ನು ಮುಂದಿಟ್ಟುಕೊಂಡು ನಮ್ಮ ಕೆಲಸವನ್ನು ಅಳೆಯುತ್ತಾರೆ. ಇದೇ ಪ್ರಶ್ನೆಯನ್ನು ಪುರುಷ ರಾಜಕಾರಣಿಗಳ ಬಳಿ ಏಕೆ ಕೇಳುವುದಿಲ್ಲ ಎಂದು ಪ್ರಶ್ನಿಸಿದ್ದಾರೆ.

**ಕಾಮೆಂಟ್ ಹಂಚಿಕೊಂಡ ನಯನಾ:**



ಸಾಮಾಜಿಕ ಜಾಲತಾಣಗಳಲ್ಲಿ ಯಾವ ರೀತಿಯಲ್ಲಿ ನಿಂದನೆ ಮಾಡಲಾಗಿದೆ ಎಂಬ ಕಾಮೆಂಟ್‌ಗಳನ್ನು ನಯನಾ ಮೋಟಮ್ಮ ಅವರು ಹಂಚಿಕೊಂಡಿದ್ದಾರೆ. ಕಾಮೆಂಟ್ ಮಾಡಿರುವವರ ಪ್ರೊಫೈಲ್ ಫೋಟೋಗಳು ಇಲ್ಲ, ಕೆಲವರ ಖಾತೆಯಲ್ಲಿ ಒಂದು ಪೋಸ್ಟ್‌ಗಳನ್ನು ಮಾಡಿಲ್ಲ. ಹೀಗೆ ಅನಾಮಧೇಯವಾಗಿ ಒಂದು ಮಹಿಳೆಯರ ಮೇಲೆ ಅಶ್ಲೀಲವಾಗಿ ಕಾಮೆಂಟ್ ಮಾಡುತ್ತಾರೆ ಎಂದು ಅವರು ಕಿಡಿಕಾರಿದ್ದಾರೆ.

**ಏನು ಹೇಳಿದ್ದಾರೆ ನಯನಾ ಮೋಟಮ್ಮ:** ''ನನ್ನ ರಾಜಕೀಯ ಕೆಲಸಕ್ಕೆ ನಾ ಧರಿಸಿದ್ದ ಡ್ರೆಸ್ ಇದು. ಮಹಿಳಾ ರಾಜಕಾರಣಿಯಾಗಿ ಮಹಿಳಾ ವಿರೋಧಿ ಮನೋಭಾವಗಳನ್ನು ಎದುರಿಸುತ್ತಿದ್ದೇನೆ. ನಾ ಈ ರೀತಿ ಡ್ರೆಸ್, ಪ್ಯಾಂಟ್, ಜೀನ್ಸ್ ಅಥವಾ ಸ್ಲೀವ್‌ಲೆಸ್ ಬಟ್ಟೆ ಹಾಕಿಕೊಂಡರೆ, ಕೆಲಸ ಮಾಡದ ರಾಜಕಾರಣಿ, ರಸ್ತೆಗಳ ಗುಂಡಿ ಮುಚ್ಚದ ಶಾಸಕರು, ತೆರಿಗೆದಾರರ ಹಣದಲ್ಲಿ ಬದುಕುವವರು ಎಂದು ಹೇಳುತ್ತಾರೆ. ಇಷ್ಟಕ್ಕೇ ಮುಗಿಸದೇ ನನ್ನನ್ನು ವೇಶ್ಯೆ ಎಂದು ಕರೆಯುವ ಮಟ್ಟಕ್ಕೂ ಇಳಿಯುತ್ತಾರೆ.

ಒಮ್ಮೆ ಯೋಚಿಸಿ ನೋಡಿ ಪುರುಷ ರಾಜಕಾರಣಿಯ ಉಡುಪಿನ ಬಗ್ಗೆ ಎಂದಿಗೂ ಪ್ರಶ್ನೆ ಕೇಳೋದಿಲ್ಲ. ಬಹುಶಃ ಅವರು ಸ್ಲೀವ್‌ಲೆಸ್ ಡ್ರೆಸ್ ಹಾಕಿಕೊಳ್ಳಲು ಸಾಧ್ಯವಿಲ್ಲ ಅನ್ನೋ ಕಾರಣಕ್ಕಾ ಎಷ್ಟು ಬೋರ್ ಅಲ್ವಾ! ಈ ರೀತಿಯ ಕಾಮೆಂಟ್ ಮಾಡುವವರನ್ನು ನೇರವಾಗಿ ಪ್ರಶ್ನೆ ಮಾಡಬೇಕು ಅನ್ನಿಸುತ್ತೆ. ಆದರೆ ಹೆಚ್ಚಿನವರು ಡಿಪಿ ಇಲ್ಲದ ಪ್ರೊಫೈಲ್ ಇಟ್ಟುಕೊಂಡಿದ್ದಾರೆ. ಇನ್ನೂ ಕೆಲವರ ಇನ್‌ಸ್ಟಾಗ್ರಾಂನಲ್ಲಿ ಒಂದು ಪೋಸ್ಟ್ ಕೂಡಾ ಇಲ್ಲದವರಿದ್ದಾರೆ. ಬಹುಶಃ ಒಂದು ದಿನ ನಾನು ಅವರನ್ನು ನೇರವಾಗಿ ಎದುರಿಸುತ್ತೇನೆ. ಆದರೆ ಸದ್ಯಕ್ಕೆ ಈ ಮಹಿಳಾ ವಿರೋಧಿ ಮನೋಭಾವವನ್ನಷ್ಟೇ ಪ್ರಶ್ನಿಸುತ್ತಿದ್ದೇನೆ ಎಂದು ಅವರು ಪೋಸ್ಟ್ ಹಾಕಿ ಬೇಸರ ವ್ಯಕ್ತಪಡಿಸಿದ್ದಾರೆ.

## ಜರ್ಮನ್ ಚಾನ್ಸಲರ್ ಸ್ವಾಗತಕ್ಕೆ ಸಿಎಂ ಗೈರು: ಸುರೇಶ್ ಕುಮಾರ್ ಟೀಕೆ

• **ಉದಯವಾಹಿನಿ, ಬೆಂಗಳೂರು**

ಭಾರತ ಮತ್ತು ಜರ್ಮನಿ ನಡುವಿನ ದ್ವಿಪಕ್ಷೀಯ ಸಂಬಂಧ ಹಾಗೂ ತಾಂತ್ರಿಕ ಸಹಭಾಗಿತ್ವದ ಹಿನ್ನೆಲೆಯಲ್ಲಿ ಜರ್ಮನಿಯ ಫೆಡರಲ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರು ಮಂಗಳವಾರ ರಾಜ್ಯ ರಾಜಧಾನಿ ಬೆಂಗಳೂರಿಗೆ ಆಗಮಿಸಿದರು. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅವರನ್ನು ರಾಜ್ಯ ಸರ್ಕಾರದ ಪರವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ಆತ್ಮೀಯವಾಗಿ ಬರಮಾಡಿಕೊಂಡರು.

ಆದರೆ, ಜಾಗತಿಕ ಮಟ್ಟದಲ್ಲಿರುವ ನಾಯಕರೊಬ್ಬರು ರಾಜ್ಯಕ್ಕೆ ಆಗಮಿಸಿದಾಗ ಮುಖ್ಯಮಂತ್ರಿಗಳು ಖುದ್ದು ಸ್ವಾಗತಿಸದಿರುವುದು ಈಗ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಬಿಜೆಪಿ ಹಿರಿಯ ನಾಯಕ ಸುರೇಶ್ ಕುಮಾರ್ ಅವರು ರಾಜ್ಯ ಸರ್ಕಾರದ ವಿರುದ್ಧ ವ್ಯಂಗ್ಯವಾಡಿದ್ದಾರೆ. ಮಾಜಿ ಸಚಿವರು ಹಾಗೂ ಬಿಜೆಪಿ ನಾಯಕರಾದ ಸುರೇಶ್ ಕುಮಾರ್ ಅವರು ಜರ್ಮನ್ ಚಾನ್ಸಲರ್ ಸ್ವಾಗತದ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡೆಯನ್ನು ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪ್ರಸ್ತಾಪಿಸಿರುವ ಅವರು, ಹಿಂದಿನ ಕಾಂಗ್ರೆಸ್ ಸರ್ಕಾರಗಳ ಮಾದರಿಯನ್ನು ಉಲ್ಲೇಖಿಸಿದ್ದಾರೆ.

## ಕಾಡಾನೆ ದಾಳಿಗೆ ಮತ್ತೊಂದು ಬಲಿ, ಯಶಸ್ವಿ ಆಗ್ತಿಲ್ಲ ಇಲಾಖೆಯ ಕ್ರಮ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಕ್ಕೆ ಕೊನೆ ಇಲ್ಲದಂತಾಗಿದೆ. ಹಾಸನ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಸೇರಿದಂತೆ ಅರಣ್ಯ ಭಾಗದ ಜಿಲ್ಲೆಗಳಲ್ಲಿ ವನ್ಯಜೀವಿಗಳ ಸಮಸ್ಯೆ ವಿಪರೀತಕ್ಕೆ ಹೋಗಿದೆ. ಇದರಿಂದ ರೈತರು, ಅರಣ್ಯದ ಅಂಚಿನಲ್ಲಿ ವಾಸಿಸುವ ಜನರು ಹಾಗೂ ಕೃಷಿ ಕೂಲಿ ಕಾರ್ಮಿಕರು ಸಂಕಷ್ಟ ಅನುಭವಿಸುವಂತಾಗಿದೆ. ಇದನ್ನು ನಿಯಂತ್ರಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅರಣ್ಯ ಇಲಾಖೆ ಹೇಳುತ್ತಿದ್ದರೂ, ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಮೂಗಲಿ ಗ್ರಾಮದಲ್ಲಿ ಕಾಡಾನೆ ದಾಳಿಗೆ 40 ವರ್ಷದ ಮಹಿಳೆ ಮೃತಪಟ್ಟಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ಕಾಡಂಚಿನ ಭಾಗದಲ್ಲಿ ವಾಸವಾಗಿರುವ ಜನರಲ್ಲಿ ಆತಂಕ ಮನೆ ಮಾಡಿದೆ. ಕೂಡಲೇ ಸ್ಥಳಕ್ಕೆ ಧಾವಿಸಿ ಆನೆಯನ್ನು ಮರಳಿ ಕಾಡಿಗೆ ಮರಳಿಸಲು ಅಥವಾ ಆನೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ವನ್ಯಜೀವಿ ವಿಭಾಗದ ಹಿರಿಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

## ಕೋಗಿಲು ಸಂತ್ರಸ್ತರಲ್ಲಿ ಇಲ್ಲ ಬಾಂಗ್ಲಾದೇಶಿಯರು: ಪರಮೇಶ್ವರ್

• **ಉದಯವಾಹಿನಿ, ಮಂಗಳೂರು**


ರಾಜ್ಯದಲ್ಲಿ ಸಾಕಷ್ಟು ವಿವಾದಕ್ಕೆ ಕಾರಣವಾಗಿರುವ ಕೋಗಿಲು ಬಡಾವಣೆಯಲ್ಲಿನ ಸಂತ್ರಸ್ತರ ಪೈಕಿ ಬಾಂಗ್ಲಾದೇಶಿಯರು ಇಲ್ಲ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮಂಗಳವಾರ ಮಾತನಾಡಿದ ಅವರು, ಕೋಗಿಲು ಬಡಾವಣೆಯಲ್ಲಿ ಬಾಂಗ್ಲಾ ದೇಶಿಯರು ನೆಲೆಸಿದ್ದರು ಎಂಬ ಬಿಜೆಪಿ ಸತ್ಯಶೋಧನ ಸಮಿತಿ ಆರೋಪವನ್ನು ನಿರಾಕರಿಸಿದ್ದಾರೆ. ಕೋಗಿಲು ಬಡಾವಣೆಯಲ್ಲಿನ ಸಂತ್ರಸ್ತರು ಹಾಗೂ ವಾಸವಾಗಿದ್ದವರ ಪಟ್ಟಿಯನ್ನು ತರಿಸಿಕೊಂಡು ನೋಡಿದ್ದೇನೆ. ಅಲ್ಲಿ ಯಾವುದೇ ಬಾಂಗ್ಲಾದೇಶಿಯರು ಇಲ್ಲ ಎಂದು ಪರಮೇಶ್ವರ್ ತಿಳಿಸಿದರು. ಕೋಗಿಲು ಕ್ರಾಸ್‌ನಲ್ಲಿ ಅಕ್ರಮವಾಗಿ ಬಾಂಗ್ಲಾ ವಲಸಿಗರು ನೆಲೆಸಿದ್ದಾರೆ ಎಂದು ಬಿಜೆಪಿ ಆರೋಪ ಮಾಡುತ್ತಿದೆ. ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿಕೊಂಡು ಮನೆ ಪಡೆಯಲು ಯತ್ನಿಸುತ್ತಿದ್ದಾರೆ ಎಂಬ ಆರೋಪ ಇದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಶಾಸಕ ಎಸ್ ಆರ್ ವಿಶ್ವನಾಥ್ ಅವರ ನೇತೃತ್ವದಲ್ಲಿ ಸತ್ಯಶೋಧನಾ ಸಮಿತಿ ರಚನೆ ಮಾಡಲಾಗಿತ್ತು. ಸೋಮವಾರ ಈ ಸಮಿತಿ ವರದಿಯನ್ನು ಸಲ್ಲಿಸಿದೆ. ವರದಿಯಲ್ಲಿ ಯಾವ ರೀತಿಯಲ್ಲಿ ಅಕ್ರಮವಾಗಿ ಬಾಂಗ್ಲಾ ವಲಸಿಗರು ನೆಲೆಸಿದ್ದಾರೆ ಎಂಬ ಬಗ್ಗೆ ಉಲ್ಲೇಖ ಮಾಡಲಾಗಿದೆ. ಆದರೆ ಪರಮೇಶ್ವರ್ ಇದನ್ನು ನಿರಾಕರಿಸಿದ್ದಾರೆ.

### ಸಿಎಂ ಬದಲಾವಣೆ: ರಾಹುಲ್ ಗಾಂಧಿ ಜೊತೆ ಸಿದ್ದು- ಡಿಕೆಶಿ 5 ನಿಮಿಷ ಮಾತುಕತೆ

### ಸಿಎಂ , ಡಿಸಿಎಂ ಇಬ್ಬರನ್ನೂ ದೆಹಲಿಗೆ ಕರೆಸಿಕೊಳ್ಳುವ ಭರವಸೆ

## ನಾನೊಂದು ತೀರ ನೀನೊಂದು ತೀರ

## ಮನಸು ಮನಸು ದೂರ...



### ಗೋಲ್ಡನ್ ಚಾನ್ಸ್ ಮಿಸ್

ವಿಶ್ವದ ಮೂರನೇ ಬಲಿಷ್ಠ ಆರ್ಥಿಕ ಶಕ್ತಿ ದೇಶವಾಗಿರುವ ಜರ್ಮನಿ ದೇಶದ ಚಾನ್ಸಲರ್, ಬೆಂಗಳೂರಿಗೆ ಆಗಮಿಸಿದ್ದರು. ಅವರನ್ನು ಸರ್ಕಾರದ ಪರವಾಗಿ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಸ್ವಾಗತಿಸಿದರು. ಚಾನ್ಸಲರ್, ಫೆಡ್ರಿಕ್ ಮೆರ್ಜ್, ಬಾಷ್ ಮತ್ತು ಕ್ಯಾಂಪಸ್‌ಗೆ ಭೇಟಿ ನೀಡುವ ಸಲುವಾಗಿ ನಗರಕ್ಕೆ ಆಗಮಿಸಿದ್ದರು. ಅವರನ್ನು ಸ್ವಾಗತಿಸಲು ಮತ್ತು ರಾಜ್ಯದ ಹೂಡಿಕೆಯ ಬಗ್ಗೆ ಚರ್ಚಿಸಲು ಸಿಎಂ ಆಗಲಿ, ಡಿಸಿಎಂ ಆಗಲಿ ಇಲ್ಲದೇ ಇರುವುದಕ್ಕೆ, ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕ ಆರ್.ಅಶೋಕ, ಸಿಎಂ ಸಿದ್ದರಾಮಯ್ಯನವರ ನಡೆಯನ್ನು ಟೀಕಿಸಿದ್ದಾರೆ.

• **ಉದಯವಾಹಿನಿ, ಮೈಸೂರು**

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ನಮ್ಮಲ್ಲಿ ಯಾವುದೇ ಸಮಸ್ಯೆಯಿಲ್ಲ ಎಂಬ ಬಾಯಿ ಮಾತಿನ ಒಗ್ಗಟ್ಟು ಪ್ರದರ್ಶಿಸಿದರೂ, ಅದು ನಡೆಯಲ್ಲಿ ಗೋಚರಿಸುತ್ತಿಲ್ಲ. ತಮಿಳುನಾಡಿಗೆ ತೆರಳುವ ಮಾರ್ಗಮಧ್ಯೆ ಮೈಸೂರಿಗೆ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ಸಿಎಂ

1. ಸಿಎಂ, ಡಿಸಿಎಂ ಇಬ್ಬರನ್ನೂ ದೆಹಲಿಯಲ್ಲಿ ಭೇಟಿಯಾಗುವ ಭರವಸೆ
2. ಸಿದ್ದು, ಡಿಕೆಶಿರನ್ನು ದೆಹಲಿಗೆ ಕರೆಸಿಕೊಳ್ಳುವ ಭರವಸೆ ಕೊಟ್ಟ ರಾಹುಲ್ ಗಾಂಧಿ
3. ಮೈಸೂರು ಏರ್ ಪೋರ್ಟ್‌ನಲ್ಲಿ ಭೇಟಿಗೆ ಟೈಮ್ ಕೇಳಿದ ಇಬ್ಬರು ನಾಯಕರು

ಮತ್ತು ಡಿಸಿಎಂ ಸೇರಿ ಸ್ವಾಗತಿಸಿದರು. ಕೆಲವೇ ನಿಮಿಷಗಳಲ್ಲಿ ರಾಹುಲ್ ಗಾಂಧಿ ಅಲ್ಲಿಂದ ತೆರಳಿದ್ದಾರೆ. ಇದಾದ ಬಳಿಕ ಡಿಕೆಶಿವಕುಮಾರ್-ಸಿದ್ದರಾಮಯ್ಯ ನಾನೊಂದು ತೀರ, ನೀನೊಂದು ತೀರ ಎಂಬಂತಾಗಿದ್ದಾರೆ.

ಏರ್‌ಪೋರ್ಟ್ ನಿಂದ ಹೊರಗೆ ಬರುತ್ತಿದ್ದಂತೆ ಸಿಎಂ-ಡಿಸಿಎಂ ಒಂದೊಂದು ಮಾರ್ಗದಲ್ಲಿ ತೆರಳಿದ್ದಾರೆ. ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಲು ಸಿಎಂ ಸಿದ್ದರಾಮಯ್ಯ ಆಗಮಿಸಿದರೆ, ಡಿ ಕೆ ಶಿವಕುಮಾರ್ ಅವರು ಸಿಎಂ ಜೊತೆ ಬಾರದೆ ದೂರ ಸಾಗಿ ಕಾರು ಹತ್ತಿ ಹೊರಟೇ ಬಿಟ್ಟರು. ಮಗಳ ಸಬೂಬು ಹೇಳಿದ ಡಿಕೆಶಿ ಅವರು ಸಿದ್ದರಾಮಯ್ಯ ಜೊತೆ ನಿಲ್ಲದೆ ಹೊರಟರು.

ಅಧಿಕಾರ ಹಂಚಿಕೆ ವಿಚಾರ ಊಹಾಪೋಹಗಳ ಬಗ್ಗೆ ಚರ್ಚೆ ಮಾಡುತ್ತಿರುವುದು ಮಾಧ್ಯಮದವರು ಮಾತ್ರ. ನಮ್ಮಲ್ಲಿ ಯಾವ ಗೊಂದಲವೂ ಇಲ್ಲ, ಯಾವ ಸಮಸ್ಯೆಯೂ ಇಲ್ಲ ಎಂದರು. ಯಾರೋ ಶಾಸಕರು ಏನೂ ಗೊತ್ತಿಲ್ಲದೆ ಏನೋ ಹೇಳುತ್ತಾರೆ. ಮಾತನಾಡಬೇಕಿರುವುದು ನಾನು ಮತ್ತು ಡಿ ಕೆ ಶಿವಕುಮಾರ್. ಅವರು ಏನಾದರೂ ಮಾತನಾಡಿದ್ದಾರಾ ನಾನೇನಾದರು ಮಾತನಾಡಿದ್ದೇನಾ ಯಾರೋ ಮಾಹಿತಿ ಇಲ್ಲದ ಎಂಎಲ್‌ಎಗಳು ಹೇಳಿದ್ದನ್ನು ಕೇಳಿದರೆ ಹೇಗೆ. ನಮ್ಮಲ್ಲಿ ಯಾವ ಗೊಂದಲಗಳು ಇಲ್ಲ. ಯಾವ ಬೇರೆ ರೀತಿಯ ಚರ್ಚೆಗಳು ಇಲ್ಲ.







### ಜ.16, 22ಕ್ಕೆ ದೆಹಲಿಯತ್ತ ಡಿಕೆಶಿ ಪಯಣ

ಅಸ್ಸಾಂಗೆ ಎಐಸಿಸಿ ಹಿರಿಯ ವೀಕ್ಷಕರಾಗಿ ನೇಮಕಗೊಂಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಸ್ಸಾಂ ಚುನಾವಣೆ ಪೂರ್ವ ತಯಾರಿ ಸಂಬಂಧದ ಸಭೆಯಲ್ಲಿ ಪಾಲ್ಗೊಳ್ಳಲು ಜ.16ರಂದು ದಿಲ್ಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಈ ವರ್ಷ ನಡೆಯಲಿರುವ ಅಸ್ಸಾಂ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಹೈಕಮಾಂಡ್‌ನಿಂದ ನೇಮಕಗೊಂಡಿರುವ ಮೂವರು ಎಐಸಿಸಿ ಹಿರಿಯ ವೀಕ್ಷಕರಲ್ಲಿ ಡಿ.ಕೆ. ಶಿವಕುಮಾರ್ ಕೂಡ ಒಬ್ಬರು. ಹೀಗಾಗಿ ಜ.16ರಂದು ನಡೆಯುವ ಮೊದಲ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

### ಜ.22ಕ್ಕೂ ದಿಲ್ಲಿಯಲ್ಲಿ ಸಭೆ

ಉದ್ಯೋಗ ಖಾತರಿ ಯೋಜನೆಯ ಹೆಸರು ಹಾಗೂ ಅನುದಾನದ ಸ್ವರೂಪ ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ರಾಷ್ಟ್ರವ್ಯಾಪಿ ಹೋರಾಟ ರೂಪಿಸಲು ಸಿದ್ಧತೆ ಆರಂಭಿಸಿದ್ದು, ಜ.22ರಂದು ದಿಲ್ಲಿಯಲ್ಲಿ ಮಹತ್ವದ ಸಭೆ ನಡೆಯುವ ಸಾಧ್ಯತೆಗಳಿವೆ. ಈ ಸಭೆಗೆ ದೇಶದ ಎಲ್ಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖ್ಯಮಂತ್ರಿಗಳನ್ನು ಆಹ್ವಾನಿಸುವ ಸಾಧ್ಯತೆಗಳಿದ್ದು, ಡಿಕೆಶಿ, ಸಿದ್ದರಾಮಯ್ಯ ಇಬ್ಬರೂ ದಿಲ್ಲಿಗೆ ತೆರಳುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಇರುವುದೆಲ್ಲ ಮಾಧ್ಯಮಗಳಲ್ಲಿ ಎಂದರು.

**ಇಬ್ಬರು ನಾಯಕನ ನಡುವೆ ಮಹತ್ವದ ಚರ್ಚೆ :** ಅದೇನೇ ಆಗಿದ್ರೂ, ನಾಯಕತ್ವ ಬದಲಾವಣೆ ಕುರಿತ ಚರ್ಚೆ ಗರಿಗೆದರಿದ ಸಮಯದಲ್ಲೇ ಪರಮೇಶ್ವರ್ ಹಾಗೂ ಡಿಕೆಶಿ ಭೇಟಿ ಹಾಗೂ ಮಾತುಕತೆ ಮಹತ್ವ ಪಡೆದುಕೊಂಡಿದೆ. ತುಮಕೂರಿನ ಕ್ರೀಡಾಕೂಟಕ್ಕೆ ಆಹ್ವಾನಿಸಿದ ಬಳಿಕ ಇಬ್ಬರು ಚರ್ಚೆ ನಡೆಸಿದ್ದಾರೆ. ಬಳಿಕ ಕಾರಿನವರೆಗೂ ಬಂದು ಪರಮೇಶ್ವರ್‌ನನ್ನ ಡಿಸಿಎಂ ಕಳುಹಿಸಿಕೊಟ್ಟಿದ್ದಾರೆ. ಡಿಸಿಎಂ ಭೇಟಿ ಬಳಿಕ ಮಾಧ್ಯಮಗಳ ಜೊತೆ ಪರಮೇಶ್ವರ್ ಮಾತಾಡಿದ್ದಾರೆ. ಸಿಎಂ-ಡಿಸಿಎಂ ಹಾಗೂ ರಾಹುಲ್ ಗಾಂಧಿ ಭೇಟಿ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಗೃಹ ಸಚಿವರು, ರಾಹುಲ್ ಗಾಂಧಿ ತಮಿಳುನಾಡಿಗೆ ಹೋಗ್ತಿದ್ದಾರೆ. ಹಾಗೇ ಸೌಜನ್ಯಯುತವಾಗಿ ಭೇಟಿ ಆಗ್ತಿದ್ದಾರೆ ಅಷ್ಟೇ ಎಂದು ಪರಮೇಶ್ವರ್ ಹೇಳಿದ್ದಾರೆ. ಡಿಸಿಎಂ ಭೇಟಿ ಬಳಿಕ ಮಾಧ್ಯಮಗಳ ಜೊತೆ ಪರಮೇಶ್ವರ್ ಮಾತಾಡಿದ್ದಾರೆ. ಸಿಎಂ-ಡಿಸಿಎಂ ಹಾಗೂ ರಾಹುಲ್ ಗಾಂಧಿ ಭೇಟಿ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಗೃಹ ಸಚಿವರು, ರಾಹುಲ್ ಗಾಂಧಿ ತಮಿಳುನಾಡಿಗೆ ಹೋಗ್ತಿದ್ದಾರೆ. ಹಾಗೇ ಸೌಜನ್ಯಯುತವಾಗಿ ಭೇಟಿ ಆಗ್ತಿದ್ದಾರೆ ಅಷ್ಟೇ ಎಂದು ಪರಮೇಶ್ವರ್ ಹೇಳಿದ್ದಾರೆ.

## ಫೆಬ್ರವರಿ 13ಕ್ಕೆ ಹಾವೇರಿಯಲ್ಲಿ ಸಾಧನಾ ಸಮಾವೇಶ

• **ಉದಯವಾಹಿನಿ, ಬೆಂಗಳೂರು**


ರಾಜ್ಯ ಕಾಂಗ್ರೆಸ್ ಸರ್ಕಾರ ಎರಡುವರೆ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಫೆಬ್ರವರಿ 13 ಕ್ಕೆ ಹಾವೇರಿಯಲ್ಲಿ ಸಾಧನಾ ಸಮಾವೇಶ ಹಮ್ಮಿಕೊಳ್ಳಲು ತೀರ್ಮಾನ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಮಾರ್ಚ್ ತಿಂಗಳಲ್ಲಿ ಬಜೆಟ್ ಮಂಡನೆ ಮಾಡುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಬಹುತೇಕ ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಮಂಡಿಸಲಾಗುವುದು. ಫೆಬ್ರವರಿ 13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶ ನಡೆಸುವ ಬಗ್ಗೆ ಚಿಂತನೆ ಇದೆ. ಮುಖ್ಯಮಂತ್ರಿಯಾಗಿ ಸಾವಿರ ದಿನಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಫೆಬ್ರವರಿ 13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶವನ್ನು ಆಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

**ರಾಜಕೀಯ ಚರ್ಚೆ ನಡೆಸಿಲ್ಲ:** ಮೈಸೂರಿನಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ರಾಹುಲ್ ಗಾಂಧಿಯವರು ಗೂಡ್ಲೂರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹೋಗುತ್ತಿದ್ದು ಮಾರ್ಗ ಮಧ್ಯೆ ಭೇಟಿ ಮಾಡಲಾಗಿದೆ. ಸಂಜೆ ದೆಹಲಿಗೆ ತೆರಳುವಾಗಲೂ ಬೀಳ್ಕೊಡಲಾಗುವುದು ಎಂದರು.

**ಪಕ್ಷದಲ್ಲಿ ಅಧಿಕಾರ ಹಂಚಿಕೆಯ ಗೊಂದಲವಿಲ್ಲ:** ಪಕ್ಷದಲ್ಲಿ ಅಧಿಕಾರ ಹಂಚಿಕೆಯ ಬಗ್ಗೆ ಗೊಂದಲಗಳಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಇದೆಲ್ಲ ಮಾಧ್ಯಮಗಳ ಸೃಷ್ಟಿ ಎಂದರು. ಪಕ್ಷದ ಶಾಸಕರೇ ಈ ಬಗ್ಗೆ ಮಾತನಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ

> **ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ. ಅಧಿಕಾರ ಹಂಚಿಕೆ ವಿಚಾರದಲ್ಲಿ ಅಂತಿಮವಾಗಿ ಪಕ್ಷದ ವರಿಷ್ಠರ ತೀರ್ಮಾನದಂತೆ ನಡೆದುಕೊಳ್ಳಲಾಗುವುದು. ಶಾಸಕರಿಗಿಂತ ಹೆಚ್ಚಾಗಿ ಮಾಧ್ಯಮಗಳೇ ಈ ಕುರಿತು ಹೆಚ್ಚು ಮಾತನಾಡುತ್ತಿವೆ**
>
> **-ಸಿದ್ದರಾಮಯ್ಯ, ಮುಖ್ಯಮಂತ್ರಿ**



ಶಾಸಕರಿಗೆ ಈ ಕುರಿತು ತಿಳಿದಿರುವುದಿಲ್ಲ. ನಾನು ಅಥವಾ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಬೇಕು ಎಂದರು.

**ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸರ್ಕಾರ ಸಿದ್ಧ:** ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಬಿಜೆಪಿ ಜೆಡಿಎಸ್ ನಿಂದ ಪಾಲಿಕೆ ಚುನಾವಣೆಗಳಲ್ಲಿ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ಮುಖ್ಯಮಂತ್ರಿಗಳು ವಿಶ್ವಾಸ ವ್ಯಕ್ತಪಡಿಸಿದರು.

**ಕುಮಾರಸ್ವಾಮಿ ವರ್ತನೆಯನ್ನು ಗಮನಿಸುವುದಿಲ್ಲ:** ಕೇಂದ್ರ ಸಚಿವ ಎಚ್. ಡಿ ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮರಳುವ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ಈಗ ಆರೋಗ್ಯದಲ್ಲಿ ಚೇತರಿಕೆಯಾಗಿದ್ದು, ಕ್ರಿಯಾಶೀಲರಾಗಿದ್ದಾರೆ. ಅವರ ವರ್ತನೆ, ಹಾವಭಾವ ಇವುಗಳನ್ನು ಮಾಧ್ಯಮಗಳೇ ಗಮನಿಸಬೇಕು ನಾವು ಗಮನಿಸುವುದಿಲ್ಲ ಎಂದರು.

## ಹೋರಾಟಕ್ಕೆ ಆಸಕ್ತಿ ತೋರದವರಿಗೆ ಪಕ್ಷದಿಂದ ಕಿಕ್ ಔಟ್: ಡಿಕೆಶಿ

### ■ ಬಿಜೆಪಿಯವರು ಈ ಹಿಂದೆ ಗಾಂಧೀಜಿ ಅವರನ್ನು ಕೊಂದರು ■ ಈಗ ಅವರ ಹೆಸರನ್ನು ಕೊಂದಿದ್ದಾರೆ

• **ಉದಯವಾಹಿನಿ, ಬೆಂಗಳೂರು**

ಜಿ ರಾಮ್ ಜಿ ವಿರುದ್ಧ ಹೋರಾಟಕ್ಕೆ ಆಸಕ್ತಿ ತೋರದವರಿನ್ನು ಪಕ್ಷದಿಂದ ಕಿತ್ತು ಹಾಕಲಾಗುವುದು ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಖಡಕ್ ಸೂಚನೆ ನೀಡಿದ್ದಾರೆ. ನಗರದ ಅರಮನೆ ಮೈದಾನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕರ್ತರಿಗೆ ಈ ರೀತಿಯಲ್ಲಿ ಎಚ್ಚರಿಕೆ ನೀಡಿದರು.

ಎಐಸಿಸಿಯವರು ಕಾರ್ಯಕಾರಿ ಸಮಿತಿ ಸಭೆ ಮಾಡಿ, ಈ ವಿಚಾರವಾಗಿ ಪಕ್ಷದ ವತಿಯಿಂದ ಯಾವ ರೀತಿ ಹೋರಾಟ ಮಾಡಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಮೊದಲ ಹಂತದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರುಗಳು ಬಂದು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಲಿದ್ದಾರೆ. ತಾಲ್ಲೂಕು ಮಟ್ಟಗಳಲ್ಲಿ ನೀವುಗಳು ಮಾಧ್ಯಮಗೋಷ್ಠಿ ಮಾಡಬೇಕು. ಪರಿಷತ್ ಸದಸ್ಯರು, ಸಂಸದರುಗಳನ್ನು ಶಾಸಕರಿಲ್ಲದ ಕ್ಷೇತ್ರಗಳಿಗೆ ವೀಕ್ಷಕರಾಗಿ ನೇಮಕ ಮಾಡಿದ್ದು, ಎಲ್ಲರೂ ಮಾಧ್ಯಮಗೋಷ್ಠಿ ಮಾಡಬೇಕು. ಎಐಸಿಸಿ ನಿರ್ದೇಶನ ನೀಡಿರುವ ಎಲ್ಲಾ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾಡಲೇಬೇಕು ಎಂದರು.

ಇದನ್ನು ಪಾಲಿಸದ ವೀಕ್ಷಕರು, ಪದಾಧಿಕಾರಿಗಳ ಬಗ್ಗೆ ವರದಿ ನೀಡಿ ಎಂದು ಎಐಸಿಸಿ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದ್ದು, ಇದರಲ್ಲಿ ಆಸಕ್ತಿ ತೋರದವರನ್ನು ಕಿತ್ತುಹಾಕಲಾಗುವುದು. ನೂತನ ಜಿಲ್ಲಾಧ್ಯಕ್ಷರ ನೇಮಕಕ್ಕೆ ಹೊರ ರಾಜ್ಯದಿಂದ ತಂಡ ಆಗಮಿಸುತ್ತಿದೆ. ಈ ಪ್ರಕ್ರಿಯೆಯನ್ನು ನಾವು ಆರಂಭಿಸಿದ್ದೆವು, ಕೆಲವು ದೂರಿನ ಹಿನ್ನೆಲೆಯಲ್ಲಿ ಎಐಸಿಸಿಯೇ ತಂಡವನ್ನು ರವಾನಿಸುತ್ತಿದೆ. ಈ ಸಮಿತಿ ಅನೇಕ ಜಿಲ್ಲಾಧ್ಯಕ್ಷರ ಬದಲಾವಣೆ ಮಾಡಲಿದೆ.

### ಕಾರ್ಯಕರ್ತರಿಗೆ ಖಡಕ್ ಎಚ್ಚರಿಕೆ

ನಿಮಗೆ ಬೇರೆ ಸ್ಥಾನಮಾನ ಸಿಗಬೇಕು ಎಂದರೆ, ನೀವು ಈ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು. ಎಐಸಿಸಿ ಕಾರ್ಯಕ್ರಮಗಳ ವಿವರವನ್ನು ನಿಮಗೆ ರವಾನಿಸಲಾಗುವುದು ಎಂದು ಸಂದೇಶ ನೀಡಿದರು.

**ಮನರೇಗಾ ಬಚಾವ್ ಸಂಗ್ರಾಮ:** ಗ್ರಾಮೀಣ ಭಾಗದ ಅಭಿವೃದ್ಧಿಗೆ ನೆರವಾಗಿದ್ದ ಮನರೇಗಾ ಯೋಜನೆಯನ್ನು ಕೇಂದ್ರ ಬಿಜೆಪಿ ಸರ್ಕಾರ ಕೊಂದಿದೆ'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಆಕ್ರೋಶ ವ್ಯಕ್ತಪಡಿಸಿದರು. ಸೋನಿಯಾ ಗಾಂಧಿ ಅವರು ಮನಮೋಹನ್ ಸಿಂಗ್ ಅವರ ಸರ್ಕಾರದಲ್ಲಿ ಸಂವಿಧಾನದ ಮೂಲಕ ಬಡವರಿಗೆ ಉದ್ಯೋಗ ಖಾತರಿ ಹಕ್ಕನ್ನು ನೀಡಿದ್ದರು. ಇದರಿಂದ ನಮ್ಮ ರಾಜ್ಯದ ಪಂಚಾಯಿತಿ ಹಾಗೂ ಗ್ರಾಮಗಳ ಮಟ್ಟದಲ್ಲಿ ಪ್ರತಿ ವರ್ಷ 6 ಸಾವಿರ ಕೋಟಿ ಮೊತ್ತದ ಕಾಮಗಾರಿಗಳು ನಡೆಯುತ್ತಿದ್ದವು. ಈ ಕೆಲಸಗಳನ್ನು ಸ್ಥಳೀಯ ಪಂಚಾಯಿತಿ ಸದಸ್ಯರು ತೀರ್ಮಾನ ಮಾಡುತ್ತಿದ್ದರು. ನರೇಗಾ ಉದ್ಯೋಗ ಕಾರ್ಡ್ ಹೊಂದಿರುವವರಿಗೆ ಉದ್ಯೋಗ ನೀಡಬೇಕಿತ್ತು, ಉದ್ಯೋಗ ಸಿಗದಿದ್ದರೆ ಕೂಲಿ ನೀಡಲಾಗುತ್ತಿತ್ತು. ಇದರಲ್ಲಿ ದುರ್ಬಳಕೆ ತಡೆಗಟ್ಟಲು ಹೆಬ್ಬೆರಳಚ್ಚು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲಾಗಿತ್ತು ಎಂದು ತಿಳಿಸಿದರು. ಈ ಯೋಜನೆಯಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಯಾಗಿತ್ತು. ನಾವು ಬಳ್ಳಾರಿ ಪಾದಯಾತ್ರೆ ಮಾಡುವ ಸಂದರ್ಭದಲ್ಲಿ ಕೆಲವು ಮಹಿಳೆಯರನ್ನು ವಿಚಾರಿಸಿದೆವು. ಕೆಲವು ಮಹಿಳೆಯರು ಬೇರೆಯವರ ಜಮೀನಿನಲ್ಲಿ ಹೋಗಿ ಕೆಲಸ ಮಾಡಲು ಇಚ್ಚಿಸುವುದಿಲ್ಲ ಎಂದು ಹೇಳಿದ್ದರು. ಆಗ ಕೆಪಿಸಿಸಿ ಕಾರ್ಯಾಧ್ಯಕ್ಷನಾಗಿದ್ದ ನಾನು ದೆಹಲಿಗೆ ಹೋಗಿ, ಈ ಪರಿಸ್ಥಿತಿಯನ್ನು ಸೋನಿಯಾ ಗಾಂಧಿ ಅವರಿಗೆ ತಿಳಿಸಿದೆ. ಅವರು ಸಿ.ಪಿ ಜೋಷಿ ಅವರನ್ನು ಕರೆಸಿ ಈ ವಿಚಾರದ ಬಗ್ಗೆ ಗಮನಹರಿಸಿ ಎಂದು ಸೂಚಿಸಿದರು. ನಂತರ ರೈತರು ತಮ್ಮ ಸ್ವಂತ ಜಮೀನುಗಳಲ್ಲಿ ತಾವೇ ಕೂಲಿ ಮಾಡಿದರೆ, ಜಮೀನು ಮಟ್ಟ, ದನ, ಕುರಿ ಕೊಟ್ಟಿಗೆ, ಇಂಗುಗುಂಡಿ, ಕೃಷಿ ಹೊಂಡ ನಿರ್ಮಾಣಕ್ಕೆ ಕೂಲಿ ನೀಡುವ ವ್ಯವಸ್ಥೆ ತಂದರು. ಇನ್ನು ರೈತರು ತಮ್ಮ ಜಮೀನಿನಲ್ಲಿ ತೋಟಗಾರಿಕಾ ಬೆಳೆ ಬೆಳೆಯಲು ಅವಕಾಶ ಕಲ್ಪಿಸಿಕೊಟ್ಟರು ಎಂದು ವಿವರಿಸಿದರು.



### ಹೊಸ ಕಾಯ್ದೆ ಜಾರಿ ಅಸಾಧ್ಯ

ಈ ಯೋಜನೆಯಿಂದ ರಾಜ್ಯದ ಪ್ರತಿ ಪಂಚಾಯಿತಿಗಳಿಗೆ ಪ್ರತಿ ವರ್ಷ ಕನಿಷ್ಠ 1-2 ಕೋಟಿ ರೂ. ಸರಾಸರಿ ಅನುದಾನ ಸಿಗುತ್ತಿತ್ತು. ಆದರೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ ಜಿ ರಾಮ್ ಜಿ ಕಾಯ್ದೆಯಿಂದ ಇದೆಲ್ಲದಕ್ಕೂ ಕುತ್ತು ಬಂದಿದೆ. ಈ ಹೊಸ ಕಾಯ್ದೆಯಲ್ಲಿ ಗ್ರಾಮಗಳಲ್ಲಿ ಯಾವ ಕಾಮಗಾರಿ ನಡೆಯಬೇಕು ಎಂಬುದನ್ನು ಪಂಚಾಯಿತಿಗಳು ತೀರ್ಮಾನಿಸಲು ಆಗುವುದಿಲ್ಲ. ದೆಹಲಿಯಲ್ಲಿ ಕೂತಿರುವ ಕೇಂದ್ರ ಸರ್ಕಾರ ತೀರ್ಮಾನ ಮಾಡಲಿದೆ.ಇನ್ನು ಈ ಯೋಜನೆಯಲ್ಲಿದ್ದ 90:10 ಅನುಪಾತದ ಅನುದಾನವನ್ನು, 60:40 ಅನುಪಾತಕ್ಕೆ ಬದಲಿಸಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುದಾನ ಹಂಚಿಕೊಳ್ಳಬೇಕಾಗಿದೆ. ಇದರಿಂದ ರಾಜ್ಯ ಸರ್ಕಾರಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳಲಿದೆ. ಕೇಂದ್ರ ಸರ್ಕಾರ ಎಷ್ಟೇ ಪ್ರಯೋಗ ಮಾಡಿದರೂ ಈ ನೂತನ ಕಾಯ್ದೆಯನ್ನು ಬಿಜೆಪಿ ಆಡಳಿತ ರಾಜ್ಯಗಳಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ ಎಂದು ಹೇಳಿದರು.

# ಬೆಂಗಳೂರು ಫ್ಲ್ಯಾಟ್ ಖರೀದಿದಾರರಿಗೆ ಮಹತ್ವದ ಸೂಚನೆ

## ಕಟ್ಟಡದಲ್ಲಿ ದೋಷದ ನೆಪವಿಟ್ಟುಕೊಂಡು ಫ್ಲ್ಯಾಟ್ ಸ್ವಾಧೀನ ವಿಳಂಬ ಮಾಡುವಂತಿಲ್ಲ ಎಂದು ಅಭಿಪ್ರಾಯ

• ಉದಯವಾಹಿನಿ, ಬೆಂಗಳೂರು

ಪೂರ್ಣಗೊಂಡಿರುವ ಕಟ್ಟಡಕ್ಕೆ ಒಮ್ಮೆ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ವಿತರಿಸಿದ ನಂತರ ಗೃಹ ಖರೀದಿದಾರರು ಸ್ವಾಧೀನ ನೀಡುವುದು ವಿಳಂಬವಾಯಿತೆಂದು ಬಡ್ಡಿ ಕೇಳುವ ಹಕ್ಕಿಲ್ಲ ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಮೇಲ್ಮನವಿ ನ್ಯಾಯಮಂಡಳಿ(ಕೆ-ರೀಟ್) ಆದೇಶಿಸಿದೆ.

ಅಲ್ಲದೆ, ಬಿಲ್ಡರ್ ಸಕ್ಷಮ ಪ್ರಾಧಿಕಾರದಿಂದ ಸ್ವಾಧೀನಾನುಭವ ಪ್ರಮಾಣಪತ್ರ ಪಡೆದುಕೊಂಡ ನಂತರ ಕಟ್ಟಡದಲ್ಲಿ ಏನೇ ದೋಷಗಳಿದ್ದರೂ ಅದಕ್ಕೆ ಸೂಕ್ತ ಪರಿಹಾರವನ್ನು ಪಡೆದುಕೊಳ್ಳಲು ಗೃಹ ಖರೀದಿದಾರರಿಗೆ ನ್ಯಾಯಯುತ ಅವಕಾಶವಿದೆ. ಆದರೆ ಅದೇ ಕಾರಣ ಮುಂದಿಟ್ಟುಕೊಂಡು ಫ್ಲ್ಯಾಟ್ ಸ್ವಾಧೀನಪಡಿಸಿಕೊಳ್ಳುವುದು ವಿಳಂಬ ಮಾಡಿ, ಆ ವಿಳಂಬಕ್ಕೆ ಬಿಲ್ಡರ್ ಕಡೆಯಿಂದ ಬಡ್ಡಿ ವಸೂಲು ಮಾಡಲು ಹಕ್ಕು ಮಂಡಿಸಲಾಗದು ಎಂದು ನ್ಯಾಯ ಮಂಡಳಿ ಸ್ಪಷ್ಟಪಡಿಸಿದೆ.

ಜೆ.ಪಿ.ನಗರದ ವೀಣಾ ರವಿಶಂಕರ್ ಅವರ ಪರವಾಗಿ ಕೆ-ರೇರಾ ನೀಡಿದ್ದ ಆದೇಶ ಪ್ರಶ್ನಿಸಿ ಬೆಂಗಳೂರು ನಗರದಲ್ಲಿ


ಉದಯವಾಹಿನಿ ಚಿತ್ರ

**ಬಿಲ್ಡರ್ ಸಂಸ್ಥೆಯ ವಾದಕ್ಕೆ ಮನ್ನಣೆ**

ಪಾರ್ಕ್ ವೆಸ್ಟ್ ವಸತಿ ಯೋಜನೆಯಡಿ ಮೇಪಲ್ ಟವರ್ ನಿರ್ಮಿಸಿದ ರಿಲೇಷನ್‌ಶಿಪ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಮೇಲ್ಮನವಿ ನ್ಯಾಯ ಮಂಡಳಿಯ (ಕೆ-ರೀಟ್) ನ್ಯಾಯಾಂಗ ಸದಸ್ಯ ಸಂತೋಷ್ ಕುಮಾರ್ ಶೆಟ್ಟಿ ಮತ್ತು ಆಡಳಿತ ಸದಸ್ಯ ಮಹೇಂದ್ರ ಜೈನ್ ಅವರಿದ್ದ ಪೀಠ ಈ ಆದೇಶ ನೀಡಿದೆ.

ಒಟ್ಟು 31 ಪುಟಗಳ ಆದೇಶದಲ್ಲಿ ನ್ಯಾಯ ಮಂಡಳಿಯು, ಒಮ್ಮೆ ಸಕ್ಷಮ ಪ್ರಾಧಿಕಾರ ಒಸಿ ವಿತರಿಸಿದರೆ, ಆ ಕುರಿತು ಬಿಲ್ಡರ್ ಗೃಹ ಖರೀದಿದಾರರಿಗೆ ಮಾಹಿತಿ ನೀಡಿದ ನಂತರ ಫ್ಲ್ಯಾಟ್ ಅನ್ನು ಸ್ವಾಧೀನಕ್ಕೆ ಪಡೆದುಕೊಳ್ಳಬೇಕಾದುದು ಹಂಚಿಕೆದಾರರ ಜವಾಬ್ದಾರಿಯಾಗಿದೆ. ಒಂದು ವೇಳೆ ಖರೀದಿದಾರರಿಗೆ ಕಟ್ಟಡದಲ್ಲಿನ ದೋಷಗಳ ಬಗ್ಗೆ ಏನಾದರೂ ತಕರಾರು ಅಥವಾ ಆಕ್ಷೇಪವಿದ್ದರೆ ಅದಕ್ಕೆ ಪರಿಹಾರದ ಹಕ್ಕು ಮಂಡಿಸಬಹುದು. ಆದರೆ ಅದನ್ನೇ ಮುಂದಿಟ್ಟುಕೊಂಡು ಒಂದಲ್ಲಾ ಒಂದು ಕಾರಣ ನೀಡಿ ಫ್ಲ್ಯಾಟ್ ಸ್ವಾಧೀನಪಡಿಸಿಕೊಳ್ಳುವುದಕ್ಕೆ ವಿಳಂಬ ಮಾಡಬಾರದು ಎಂದು ಆದೇಶಿಸಿದೆ. ಈ ಪ್ರಕರಣದಲ್ಲಿ ಮೊದಲ ತಪಾಸಣಾ ವರದಿಯಲ್ಲೇ ಹಲವು ದೋಷಗಳನ್ನು ಪಟ್ಟಿ ಮಾಡಲಾಗಿತ್ತು. ಆದರೆ ತಪಾಸಣಾ ತಂಡಕ್ಕೆ ಹಾಗೂ ಗೃಹ ಖರೀದಿದಾರರಿಗೆ ತೃಪ್ತಿಯಾಗುವಂತೆ ಹಲವು ದೋಷಗಳನ್ನು ಸರಿಪಡಿಸಲಾಗಿದೆ ಎಂದು 2024ರ ಫೆ.6ರಂದು ಸಲ್ಲಿಸಿದ ವರದಿಯಲ್ಲಿ ತಿಳಿಸಲಾಗಿದೆ. ಹಾಗಾಗಿ ಬಿಲ್ಡರ್ 2021ರ ಮಾ.31ರಿಂದ 2024ರ ಫೆ.6ರ ವಿಳಂಬದ ಅವಧಿಗೆ ಮಾತ್ರ ಬಡ್ಡಿ ಪಾವತಿಸಬೇಕಾಗುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ.

**ಜತೆಗೆ 1 ಬಾರಿ ಒಸಿಯನ್ನು ವಿತರಣೆ**

**ಜತೆಗೆ ಒಂದು ಬಾರಿ ಒಸಿಯನ್ನು ವಿತರಣೆ ಮಾಡಿದ ನಂತರ ಖರೀದಿದಾರರು ಕಟ್ಟಡ ನಿರ್ಮಾಣದಲ್ಲಿ ದೋಷಗಳಿವೆ ಅಥವಾ ನ್ಯೂನತೆಗಳಿವೆ ಎಂಬ ಏಕೈಕ ಕಾರಣದಿಂದ ಫ್ಲ್ಯಾಟ್ ಸ್ವಾಧೀನಪಡಿಸಿಕೊಳ್ಳುವುದನ್ನು ವಿಳಂಬ ಮಾಡಬಾರದು. ರೇರಾ ಕಾಯಿದೆಯಡಿ ಒಸಿಯನ್ನು ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವುದರ ಸಂಕೇತವೆಂದು ಪರಿಗಣಿಸಲಾಗಿದೆ. ಹಾಗಾಗಿ ಗೃಹ ಖರೀದಿದಾರರು ಕಟ್ಟಡ ನಿರ್ಮಾಣದಲ್ಲಿ ದೋಷಗಳಿದ್ದರೆ ಅದಕ್ಕೆ ಪ್ರತ್ಯೇಕವಾಗಿ ಪರಿಹಾರ ಕೋರಲು ಅವಕಾಶವಿದೆ. ಆದರೆ ಫ್ಲ್ಯಾಟ್ ಅನ್ನು ಸ್ವಾಧೀನಕ್ಕೆ ಪಡೆದುಕೊಳ್ಳದೆ ಹಾಗೆಯೇ ತಿಂಗಳುಗಟ್ಟಲೇ ಬಿಟ್ಟು, ನಂತರ ಸ್ವಾಧೀನ ನೀಡುವುದು ವಿಳಂಬವಾಗಿದೆ ಎಂದು ಬಡ್ಡಿಯನ್ನು ಕೋರಲಾಗದು ಎಂದು ಆದೇಶಿಸಿದೆ.**

# ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚು

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದರಿಂದ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ. ಹೀಗಾಗಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಗರ ಸಂಚಾರ ವಿಭಾಗದ ಪೊಲೀಸರು ಮುಂದಾಗಿದ್ದಾರೆ. ವೀಲಿ ಹಾಗೂ ಮದ್ಯಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸುತ್ತಿದ್ದ ಸಂಚಾರ ಪೊಲೀಸರು, ಇದೀಗ ಸಿಗ್ನಲ್ ಜಂಪ್ ಮಾಡುವುದು, ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಲಿಸುವುದು, ಸಂಚಾರಕ್ಕೆ ಅಡಚಣೆ ಮಾಡುವವರ ಹಾಗೂ ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವವರ ವಿರುದ್ಧವೂ ಎಫ್‌ಐಆರ್ ದಾಖಲಿಸಲು ಆರಂಭಿಸಿದ್ದಾರೆ. ದಂಡ ಹಾಕಿ ಕಳುಹಿಸುವುದರಿಂದ ಚಾಲಕರು ಮತ್ತೆ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದರು. ಅದನ್ನು ತಪ್ಪಿಸುವ ಉದ್ದೇಶದಿಂದ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಪಶ್ಚಿಮ ವಿಭಾಗದ ಎಲ್ಲ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲು ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 281 (ಸಾರ್ವಜನಿಕ ಮಾರ್ಗದಲ್ಲಿ ಅಜಾಗರೂಕತೆ ಅಥವಾ ನಿರ್ಲಕ್ಷ್ಯದ ಚಾಲನೆ) ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಈ ಹಿಂದೆ ನಿಯಮ ಉಲ್ಲಂಘಿಸುತ್ತಿದ್ದವರು ಸ್ಥಳದಲ್ಲೇ ದಂಡ ಪಾವತಿಸಿ ಮನೆಗೆ ತೆರಳುತ್ತಿದ್ದರು.

# ದಾಸವಾಣಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜನವರಿ 15, ಗುರುವಾರ ಸಂಜೆ 5-15ಕ್ಕೆ ಕು|| ಸಂಗೀತಾ ಬಾಲು ಅವರ ದಾಸವಾಣಿ ಕಾರ್ಯಕ್ರಮ ಏರ್ಪಡಿಸಿದ್ದು, ವಾದ್ಯ ಸಹಕಾರದಲ್ಲಿ ಶ್ರೀ ಬಾಲಸುಬ್ರಹ್ಮಣ್ಯಂ (ಮೃದಂಗ), ಶ್ರೀ ಸಮರ್ಥ್ (ಕೀ-ಬೋರ್ಡ್), ಶ್ರೀ ಅಭಿಜಿತ್ (ತಬಲಾ), ಮತ್ತು ಶ್ರೀ ಕೃಷ್ಣಕುಮಾರ್ (ಜಂಬೆ) ಸಾಥ್ ನೀಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಬೆಂಗಳೂರು-41



# ಪರಪ್ಪನ ಅಗ್ರಹಾರ ಜೈಲಲ್ಲಿರುವ ಮಗನ ಭೇಟಿಗೆ ಮೊಬೈಲ್ ಕೊಂಡೊಯ್ದು ಸಿಕ್ಕಿಬಿದ್ದ ತಾಯಿ

• ಉದಯವಾಹಿನಿ, ಬೆಂಗಳೂರು

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಮಗನ ಭೇಟಿಗೆ ಬಂದಿದ್ದ ತಾಯಿಯ ಬಳಿ ಮೊಬೈಲ್ ಪತ್ತೆಯಾಗಿದ್ದು, ಈ ಸಂಬಂಧ ಮಹಿಳೆ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಚಾರಣಾಧೀನ ಕೈದಿ ಭರತನನ್ನು ನೋಡಲು ತಾಯಿ ಲಕ್ಷ್ಮೀ ನರಸಮ್ಮ ಪರಪ್ಪನ ಅಗ್ರಹಾರ ಜೈಲಿಗೆ ಬಂದಿದ್ದರು. ತಪಾಸಣೆ ವೇಳೆ ಒಳ ಉಡುಪಿನಲ್ಲಿ ಮೊಬೈಲ್ ಇಟ್ಟುಕೊಂಡಿದ್ದು ಪತ್ತೆಯಾಗಿದೆ. ಕಾರಾಗೃಹದ ಮುಖ್ಯದ್ವಾರದ ಹೊರಗೆ ಎಡಭಾಗದಲ್ಲಿ ಇರುವ ತಪಾಸಣಾ ವಿಭಾಗ-01ರಲ್ಲಿ (ಸಾಮಾನ್ಯ ಸಂದರ್ಶನ ವಿಭಾಗ) ಜನವರಿ 2ರಂದು ಮಧ್ಯಾಹ್ನ 12.10ಕ್ಕೆ ಮಗನ ಭೇಟಿಗೆ ಬಂದ ಸಂದರ್ಭದಲ್ಲಿ ತಪಾಸಣೆ ನಡೆಸಿದಾಗ, ನೀಲಿ ಬಣ್ಣದ ಮೊಬೈಲ್ ಪತ್ತೆ ಆಗಿದೆ. ಮಹಿಳೆಯು ಕಾರಾಗೃಹದ ನಿಯಮ ಉಲ್ಲಂಘನೆ ಮಾಡಿ ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಅವರ ಕಣ್ತಪ್ಪಿಸಿ ನಿಷೇಧಿತ ವಸ್ತು ಸಾಗಿಸಲು ಪ್ರಯತ್ನಿಸಿರುವುದರಿಂದ ಲಕ್ಷ್ಮೀ ನರಸಮ್ಮ ಮತ್ತು ಭರತ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಕೇಂದ್ರ ಕಾರಾಗೃಹದ ಪ್ರಭಾರ ಅಧೀಕ್ಷಕ ಎಚ್.ಎ. ಪರಮೇಶ್ ನೀಡಿರುವ ದೂರನ್ನು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

# ರಾಜ್ಯಾದ್ಯಂತ ಸಾವಿರಾರು ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಸರ್ಕಾರ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಮೂಲದ ರಿವರ್ ಮೊಬಿಲಿಟಿ ಕಂಪನಿ ತಯಾರಿಸಿರುವ ಯಮಾಹಾ ಇಸಿ-06 ವಿದ್ಯುತ್ ಚಾಲಿತ ಬೈಕ್ ತಯಾರಿಸಿದೆ. ದ್ವಿಚಕ್ರ ವಾಹನ ತಯಾರಿಕೆ ಸ್ಥಳೀಯವಾಗಿಯೇ ತಯಾರಾಗುತ್ತಿರುವುದು, ರಾಜ್ಯ ಕೈಗಾರಿಕಾ ಬೆಳವಣಿಗೆಯಲ್ಲಿನ ಒಂದು ಉಜ್ವಲ ಅಧ್ಯಾಯವಾಗಿದೆ. ಇದಕ್ಕೆ ನಮ್ಮ ಸರ್ಕಾರ ಸಹ ಅಗತ್ಯ ಸಹಕಾರ ನೀಡುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದರು. ರಿವರ್ ಮೊಬಿಲಿಟಿ ಕಂಪನಿಯ ಬೈಕ್ ತಯಾರಿಕಾ ಘಟಕದಲ್ಲಿರುವ ವ್ಯವಸ್ಥೆಗಳನ್ನು ಮತ್ತಿತರ ಸೌಲಭ್ಯಗಳನ್ನು ವೀಕ್ಷಿಸಿದರು. ಬಳಿಕ ಕೈಗಾರಿಕಾ ಸಹಭಾಗಿತ್ವದ ಅಡಿ ಯಮಹಾ ಇಸಿ-06 ವಿದ್ಯುತ್ ಚಾಲಿತ ದ್ವಿಚಕ್ರ ವಾಹನವನ್ನು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಯಮಾಹಾ ಕಂಪನಿಗೆ ಹಸ್ತಾಂತರಿಸಿದರು. ಬಳಿಕ ಸ್ಥಳೀಯ ಉತ್ಪಾದನೆ, ಕೈಗಾರಿಕೆ ಬೆಳವಣಿಗೆಯನ್ನು ಕೊಂಡಾಡಿದರು. ಕರ್ನಾಟಕದಾದ್ಯಂತ ಸಾವಿರಾರು ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು ಆಟೋಮೊಬೈಲ್ ಮಾರುಕಟ್ಟೆಯು ಇವಿಗಳತ್ತ ತ್ವರಿತ ಬದಲಾವಣೆಯನ್ನು ಕಾಣುತ್ತಿರುವುದರಿಂದ ಸರ್ಕಾರವು ಎಲೆಕ್ಟ್ರಿಕ್ ವಾಹನಗಳ (ಇವಿ) ಮೂಲಸೌಕರ್ಯವನ್ನು ಮತ್ತಷ್ಟು ವಿಸ್ತರಿಸಲಿದೆ ಎಂದರು.

# ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಚುನಾವಣೆ: ಸಿಎಂ-ಡಿಸಿಎಂ ಬಣ ಮುಖಾಮುಖಿ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಹುದ್ದೆ ಬದಲಾವಣೆಯ ಜಗಳ ನಡೆಯುತ್ತಿರುವ ಬೆನ್ನಲ್ಲೇ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅವರ ಬಣಗಳು ಮುಖಾಮುಖಿಯಾಗಲಿವೆ. ಮಾಜಿ ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೋಮವಾರ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿರುವುದು ಮತ್ತೊಂದು ತಿರುವು ಪಡೆದುಕೊಂಡಿದೆ. ಸಿದ್ದರಾಮಯ್ಯ ಅವರ ಆಪ್ತರಾಗಿರುವ ರಾಜಣ್ಣ ಅವರ ಎಂಟ್ರಿಯಿಂದ ತಮ್ಮ ಸೋದರ ಸಂಬಂಧಿ ಹಾಗೂ ಎಂಎಲ್‌ಸಿ ಎಸ್. ರವಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಬಯಸಿದ್ದ ಡಿಸಿಎಂ ಡಿ.ಕೆ ಶಿವಕುಮಾರ್‌ಗೆ ಹಿನ್ನಡೆ ಎಂದು ಅರ್ಥೈಸಲಾಗುತ್ತಿದೆ. ಸಚಿವ ಸ್ಥಾನದಿಂದ ತೆಗೆದುಹಾಕಲ್ಪಟ್ಟ ನಂತರವೂ ರಾಜಣ್ಣ ಸಹಕಾರಿ ಕ್ಷೇತ್ರದ ಮೇಲೆ ತಮ್ಮ ಹಿಡಿತವನ್ನು ಮುಂದುವರೆಸಿದ್ದಾರೆ. ಅವರು ಈಗಾಗಲೇ 110 ವರ್ಷಗಳಷ್ಟು ಹಳೆಯದಾದ ಅಪೆಕ್ಸ್ ಬ್ಯಾಂಕಿಗೆ ಎರಡು ಬಾರಿ ಅಧ್ಯಕ್ಷರಾಗಿದ್ದಾರೆ. ಅಕ್ಟೋಬರ್ 2001 ರಿಂದ ಏಪ್ರಿಲ್ 2005 ಮತ್ತು ಆಗಸ್ಟ್ 2015 ರಿಂದ ಸೆಪ್ಟೆಂಬರ್ 2020 ರವರೆಗೆ ಅಧ್ಯಕ್ಷರಾಗಿದ್ದರು. ಅವರು ಈಗ ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ (ಡಿಸಿಸಿ) ಬ್ಯಾಂಕಿನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದು ಅಪೆಕ್ಸ್ ಬ್ಯಾಂಕ್‌ಗೆ ನಾಮನಿರ್ದೇಶಿತರಾಗಿ ನಿಯೋಜಿಸಲ್ಪಟ್ಟಿದ್ದಾರೆ, ಆದರೆ ರವಿ ಬೆಂಗಳೂರು ಡಿಸಿಸಿ ಬ್ಯಾಂಕ್‌ನಿಂದ ಬರುತ್ತಿದ್ದಾರೆ. ರಾಜ್ಯಾದ್ಯಂತ 18 ಡಿಸಿಸಿ ಬ್ಯಾಂಕುಗಳು ತಮ್ಮ ನಾಮನಿರ್ದೇಶಿತರನ್ನು ನಿಯೋಜಿಸಿವೆ, ಮೈಸೂರು-ಚಾಮರಾಜನಗರ ಬ್ಯಾಂಕ್ ಕೂಡ ಶೀಘ್ರದಲ್ಲೇ ನಾಮ ನಿರ್ದೇಶನ ಮಾಡುವ ನಿರೀಕ್ಷೆಯಿದೆ. ಔಪಚಾರಿಕವಾಗಿ ಚುನಾವಣೆಗಳು ಜನವರಿ 23 ರಂದು ನಿರ್ದೇಶಕರಾಗಿ ದೃಢೀಕರಣಕ್ಕಾಗಿ ನಡೆಯಲಿವೆ. ಎರಡು ವಾರಗಳ ನಂತರ, ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಸಿದ್ದರಾಮಯ್ಯ ಮತ್ತು ರಾಜಣ್ಣ ಎಸ್, ರವಿ ಅವರನ್ನು ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡುವುದಾಗಿ ಶಿವಕುಮಾರ್ ಅವರಿಗೆ ಮಾತು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

# ನಮ್ಮ ಮೆಟ್ರೋ 3ನೇ ಹಂತದ ಕಿತ್ತಳೆ ಮಾರ್ಗಕ್ಕೆ ಟೆಂಡರ್

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋದ ಮಹತ್ವಾಕಾಂಕ್ಷೆಯ 3ನೇ ಹಂತದ ಯೋಜನೆಗೆ ಅಧಿಕೃತವಾಗಿ ಚಾಲನೆ ಸಿಕ್ಕಿದೆ. ಜೆಪಿ ನಗರ 4 ನೇ ಹಂತದಿಂದ ಕೆಂಪಾಪುರವರೆಗಿನ ಕಿತ್ತಳೆ ಮಾರ್ಗದ ಸಿವಿಲ್ ಕಾಮಗಾರಿಗಳಿಗಾಗಿ ಬಿಎಂಆರ್‌ಸಿಎಲ್ ಟೆಂಡರ್ ಆಹ್ವಾನಿಸಿದೆ. ಸುಮಾರು 4,187 ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆಯು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಈ ಬಾರಿಯ ಯೋಜನೆಯ ವಿಶೇಷವೆಂದರೆ, ಡಬಲ್ ಡೆಕ್ಕರ್ ಮಾದರಿಯ ಮೇಲ್ಸೇತುವೆ ನಿರ್ಮಾಣ. ಅಂದರೆ, ಒಂದೇ ಪಿಲ್ಲರ್ ಮೇಲೆ ಕೆಳಭಾಗದಲ್ಲಿ ವಾಹನಗಳ ಸಂಚಾರಕ್ಕೆ ರಸ್ತೆ ಮೇಲ್ಸೇತುವೆ ಮತ್ತು ಮೇಲ್ಭಾಗದಲ್ಲಿ ಮೆಟ್ರೋ ರೈಲು ಮಾರ್ಗವಿರಲಿದೆ.

**ಮೂರು ಪ್ಯಾಕೇಜ್‌ಗಳಾಗಿ ವಿಂಗಡಣೆ:** ಒಟ್ಟು ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಜೆ.ಪಿ. ನಗರ 4ನೇ ಹಂತದಿಂದ ಕಾಮಾಕ್ಯ ಜಂಕ್ಷನ್ ವರೆಗೆ, ಹೊಸಕೆರೆಹಳ್ಳಿಯಿಂದ ನಾಗರಬಾವಿ ವೃತ್ತದವರೆಗೆ, ವಿನಾಯಕ ಲೇಔಟ್‌ನಿಂದ ನಾಗರಬಾವಿವರೆಗೂ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣ ಹಾಗೂ ಸುಂಕದಕಟ್ಟೆ



ಉದಯವಾಹಿನಿ ಚಿತ್ರ

ನಿಲ್ದಾಣ ನಿರ್ಮಾಣ ಒಳಗೊಂಡಿದೆ.

**ಪ್ಯಾಕೇಜ್ - 1 ಏನೆಲ್ಲಾ ಕಾಮಗಾರಿ:** ಪ್ಯಾಕೇಜ್ 1 ಒಟ್ಟಾರೆ ಮೊತ್ತ 1375.66 ಕೋಟಿ ರೂ. ಆಗಿದೆ. ಜೆಪಿ ನಗರ 4ನೇ ಹಂತದಿಂದ ಕಾಮಾಕ್ಯ ಜಂಕ್ಷನ್‌ವರೆಗೆ (6.5 ಕಿ.ಮೀ) ಮಾರ್ಗ ನಿರ್ಮಾಣ ಇರಲಿದೆ. ಇದರಲ್ಲಿ 4 ಡಬಲ್ ಡೆಕ್ಕರ್ ನಿಲ್ದಾಣಗಳು ಸೇರಿವೆ. ವಿಶೇಷವೆಂದರೆ, ಈ ಕಾಮಗಾರಿಗಾಗಿ ಪ್ರಸ್ತುತ ಇರುವ ಡಾಲರ್ಸ್ ಕಾಲೋನಿ ಮೇಲ್ಸೇತುವೆಯನ್ನು ಕೆಡವಲಾಗುತ್ತದೆ.


**ಪ್ಯಾಕೇಜ್ - 2 ರಲ್ಲಿ ಏನೆಲ್ಲಾ ಕಾಮಗಾರಿ:** ಪ್ಯಾಕೇಜ್ 2 ಒಟ್ಟಾರೆ ಮೊತ್ತವು 1396.10 ಕೋಟಿ ರೂ. ಆಗಿದೆ. ಹೊಸಕೆರೆಹಳ್ಳಿಯಿಂದ ನಾಗರಬಾವಿ ವೃತ್ತದವರೆಗೆ (5.4 ಕಿ.ಮೀ). ಇದರಲ್ಲಿ 4 ಡಬಲ್ ಡೆಕ್ಕರ್ ನಿಲ್ದಾಣಗಳು ಮತ್ತು ರಸ್ತೆ ಹಾಗೂ ರೈಲು ಮಾರ್ಗವಿರುವ ಮೇಲ್ಸೇತುವೆ ನಿರ್ಮಾಣವಾಗಲಿದೆ.

**ಪ್ಯಾಕೇಜ್ - 3 ರಲ್ಲಿ ಏನೆಲ್ಲಾ ಕಾಮಗಾರಿ:** ಪ್ಯಾಕೇಜ್ - 3 ಒಟ್ಟಾರೆ ಮೊತ್ತವು 1415.65 ಕೋಟಿ ರೂ. ಸುಮಾರು 6.652 ಕಿ.ಮೀ ಉದ್ದದ ಈ ಮಾರ್ಗದಲ್ಲಿ 3 ಡಬಲ್ ಡೆಕ್ಕರ್ ನಿಲ್ದಾಣಗಳು ಹಾಗೂ ಸುಂಕದಕಟ್ಟೆಯಲ್ಲಿ 1 ಸಾಮಾನ್ಯ ನಿಲ್ದಾಣ ನಿರ್ಮಾಣವಾಗಲಿದೆ. ಪ್ಯಾಕೇಜ್ 3 ಅನ್ನು ಎರಡು ಕಾರಿಡಾರ್‌ಗಳಾಗಿ ವಿಂಗಡಿಸಲಾಗಿದೆ. ಕಾರಿಡಾರ್ 1 ವಿನಾಯಕ ಲೇಔಟ್‌ನಿಂದ ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್‌ಗೆ ಇರಲಿದೆ. ವಿನಾಯಕ ಲೇಔಟ್, ಪಾಪರೆಡ್ಡಿಪಾಳ್ಯ ಮತ್ತು ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್‌ನಲ್ಲಿ ಮೂರು ನಿಲ್ದಾಣಗಳನ್ನು ಯೋಜಿಸಲಾಗಿದೆ. ಕಾರಿಡಾರ್ 2 ಸುಂಕದಕಟ್ಟೆ ನಿಲ್ದಾಣವನ್ನು ಒಳಗೊಂಡಿದೆ, ಜೊತೆಗೆ ಸುಂಕದಕಟ್ಟೆ ಡಿಪೋಗೆ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳನ್ನು ಒಳಗೊಂಡಿದೆ.

# ಜಿಬಿಎ ದಕ್ಷಿಣ ಪಾಲಿಕೆ: 10 ಪಿಜಿಗಳಿಗೆ ಬೀಗಮುದ್ರೆ

• ಉದಯವಾಹಿನಿ, ಬೆಂಗಳೂರು

ಶುಚಿತ್ವ, ಸುರಕ್ಷೆ, ಶೌಚಾಲಯ ಸೇರಿದಂತೆ ನಿಯಮಗಳನ್ನು ಉಲ್ಲಂಘಿಸಿರುವ 10 ಪೇಯಿಂಗ್ ಗೆಸ್ಟ್‌ಗಳಿಗೆ (ಪಿಜಿ) ದಕ್ಷಿಣ ನಗರ ಪಾಲಿಕೆಯ ಆರೋಗ್ಯ ವಿಭಾಗದ ಸಿಬ್ಬಂದಿ ಸೋಮವಾರ ಬೀಗಮುದ್ರೆ ಹಾಕಿದ್ದಾರೆ.ಜಯನಗರ, ಬೆಂಗಳೂರು ದಕ್ಷಿಣ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ 66 ಪಿಜಿಗಳ ವಸತಿ ಗೃಹಗಳಲ್ಲಿ ಶುದ್ಧ ಕುಡಿಯುವ ನೀರು, ಶುಚಿತ್ವ, ಅಡುಗೆ ಕೋಣೆ ನೈರ್ಮಲ್ಯ, ಸುರಕ್ಷತೆ, ಉತ್ತಮ ಶೌಚಾಲಯ ವ್ಯವಸ್ಥೆ ಹಾಗೂ ಅಗ್ನಿಶಾಮಕ ಸಾಧನಗಳು ಹಾಗೂ ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಕೆ ಮತ್ತು ಆಹಾರ ಸುರಕ್ಷತಾ ಪ್ರಮಾಣ ಪತ್ರಗಳ ಬಗ್ಗೆ ತಪಾಸಣೆ ಮಾಡಲಾಯಿತು.



ಇದರಲ್ಲಿ 10 ಪಿಜಿಗಳಿಗೆ ಬೀಗ ಹಾಕಲಾಗಿದೆ. ಪಿಜಿ ನಡೆಸುತ್ತಿರುವವರಿಗೆ ತಿಳಿವಳಿಕೆ ಪತ್ರಗಳನ್ನು ಜಾರಿ ಮಾಡಿದ್ದು, ಉದ್ದಿಮೆದಾರರು ಏಳು ದಿನಗಳ ಒಳಗಾಗಿ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಕಾರ್ಯನಿರ್ವಹಣೆ ಮಾಡುವುದಕ್ಕೆ ಸೂಚಿಸಲಾಗಿದೆ. ಒಟ್ಟು ರೂ.22,500 ದಂಡ ವಿಧಿಸಲಾಗಿದೆ ಎಂದು ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಆಧ್ಯಾತ್ಮಿಕ ಗುಣಗಳನ್ನು ಕಲಿಸಿ

• ಉದಯವಾಹಿನಿ,ಕೆಂಗೇರಿ

ಶಿಕ್ಷಣ ಜ್ಞಾನ, ಕೌಶಲ್ಯ ಮತ್ತು ನೈತಿಕತೆಯ ಮೌಲ್ಯಗಳನ್ನು ಕಲಿಸುತ್ತದೆ ಎಂದು ರಾಮೋಹಳ್ಳಿಯ ಶ್ರೀ ಮಧ್ವನಾರಾಯಣ ಆಶ್ರಮದ ಶ್ರೀ ವಿಶ್ವಭೂಷಣ ತೀರ್ಥ ಶ್ರೀಪಾದಂಗಳ ಅವರು ತಿಳಿಸಿದರು.

ಕೆಂಗೇರಿ ಉಪನಗರದ 1ನೇ ಎ. ಮುಖ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಐ ಕಿಡ್ಸ್ ಶಾಲೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬನಿಗೂ ಜೀವನದಲ್ಲಿ ಕೊನೆಯವರೆಗೂ ಬರುವುದು ಎಂದರೆ ವಿದ್ಯೆ ಆದ್ದರಿಂದ ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ಆಧ್ಯಾತ್ಮಿಕ ಗುಣಗಳನ್ನು ಕಲಿಸಿ ಎಂದು ತಿಳಿಸಿದರು.

ಖ್ಯಾತ ಸಾಹಿತಿ ಮತ್ತು ವಿಮರ್ಶಕರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ ಶಿಕ್ಷಣ ಮತ್ತು ಆರೋಗ್ಯ ಪ್ರತಿಯೊಬ್ಬರಿಗೂ ಅವಶ್ಯಕತೆ ಇದೆ, ಸಮಾಜಕ್ಕೆ ಉತ್ತಮ ಪ್ರಜೆಯಾಗಿ ಶಿಕ್ಷಣ ಎಂಬ ಕಾರ್ಖಾನೆಗಳಲ್ಲಿ ತಯಾರಿಸಿ ಕೊಡುಗೆಯಾಗಿ ನೀಡುವ ಕ್ಷೇತ್ರವೇ ಶಿಕ್ಷಣ ಆದ್ದರಿಂದ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಮಕ್ಕಳು ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ಸಮಾಜಕ್ಕೆ ಉತ್ತಮ ಪ್ರಜೆಯಾಗುವಂತೆ ಸರಿ ದಾರಿಗೆ ತರಬೇಕು ಎಂದು ತಿಳಿಸಿದರು. ಪಾರಂಪರಿಕ ಹಾಗೂ ಆಧುನಿಕ ಶಿಕ್ಷಣದ ಅವಶ್ಯಕತೆ ಇದ್ದು ಅದನ್ನ ಆಯ್ಕೆ ಶಾಲೆಯವರು ಮಾಡುತ್ತಾರೆ ಎನ್ನುವ ವಿಶ್ವಾಸ ತಮಗಿದೆ ಎಂದು ಹೇಳಿದರು


ಉದಯವಾಹಿನಿ ಚಿತ್ರ

ಖ್ಯಾತ ಹಿನ್ನೆಲೆ ಗಾಯಕ ಶಶಿಧರ್ ಕೋಟೆ, ಶುಭ ಹಾರೈಸಿದರು. ಯಶವಂತಪುರ ವಿಧಾನಸಭಾ ಕ್ಷೇತ್ರ ಶಾಸಕ ಮಾಜಿ ಸಹಕಾರ ಸಚಿವ ಎಸ್ ಟಿ ಸೋಮಶೇಖರ್ ಮಾತನಾಡಿ ಹೈ ಕಿಡ್ಸ್ ಪ್ರಿ ಸ್ಕೂಲ್ ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲಿ ಎಂದು ಶುಭ ಹಾರೈಸಿದರು. ಕೆಂಗೇರಿ ಸರ್ಕಲ್ ಇನ್ಸ್‌ಪೆಕ್ಟರ್ ಜಗದೀಶ್ ನಟರಾದ ಮಾಸ್ಟರ್ ಆನಂದ್ ಸುನತ್ರ, ಪಂಡಿತ್ ಲಕ್ಷ್ಮಿ ಭಟ್ ಹಿರಿಯೂರು ರಾಘವೇಂದ್ರ, ಕೆಆರ್ ಸತ್ಯನಾರಾಯಣ ಕೆ ಆರ್ ಐಡಿಎಲ್ ಮಾಜಿ ಅಧ್ಯಕ್ಷ ರುದ್ರೇಶ್ ಚಾಮುಂಡಿ ಶಿವಕುಮಾರ್ ವಿ ವಿ ಸತ್ಯನಾರಾಯಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಐ ಕಿಡ್ಸ್ ಶಾಲೆಯ ನಿರ್ದೇಶಕ ಎಚ್. ಎಸ್. ಸುಧೀಂದ್ರ ಕುಮಾರ್, ಸಲಹೆಗಾರರಾದ ಸುಹಾಸ್ ಎಸ್, ಕಶ್ಯಪ್, ಶಿವ, ಭಾರ್ಗವಿ ಹಾಗೂ ಶಾಲಾ ಸಿಬ್ಬಂದಿ ನಾಗಶ್ರೀ, ಸುಧಾರಾಣಿ, ಮಧು, ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ, ಈ ಬಾರಿ ಥೀಮ್ ಏನು ಗೊತ್ತಾ?

• ಉದಯವಾಹಿನಿ, ಬೆಂಗಳೂರು

ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಜ.14 ರಿಂದ 26ರವರೆಗೆ 219ನೇ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ.

ತೋಟಗಾರಿಕೆ ಇಲಾಖೆ ಈ ಬಾರಿ ರಾಷ್ಟ್ರಕವಿ ಕುವೆಂಪು ಅವರ ಪುತ್ರ, ಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು-ಬರಹ ಕುರಿತ ತೇಜಸ್ವಿ ವಿಸ್ಮಯ ವಿಷಯ ಆಧರಿಸಿದ ಈ ಪ್ರದರ್ಶನದಲ್ಲಿ ಗಾಜಿನ ಮನೆಯಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ ನೆಚ್ಚಿನ ಕಾಡನ್ನು ನಿರ್ಮಿಸುತ್ತಿದೆ. ಫಲಪುಷ್ಪ ಪ್ರದರ್ಶನಕ್ಕೆ ತಮಿಳುನಾಡು, ಕೇರಳ, ಮಹಾರಾಷ್ಟ್ರ, ಡಾರ್ಜಿಲಿಂಗ್, ವಯನಾಡು ಕಡೆಯಿಂದ ಹೂಗಳು ಬಂದಿದ್ದು, 95ಕ್ಕೂ ಹೆಚ್ಚು ವೈವಿಧ್ಯಮಯ ಹಾಗೂ 35 ಲಕ್ಷಕ್ಕೂ ಹೆಚ್ಚು ಹೂಗಳಿಂದ ಅಲಂಕಾರ ಮಾಡಲಾಗುತ್ತಿದೆ.

ಈ ಬಾರಿ ಲಾಲ್ ಬಾಗ್‌ನಲ್ಲಿ ಬೆಳೆದಿರುವ 27 ಲಕ್ಷ ಹೂ ಬಳಕೆ ಮಾಡಲಾಗುತ್ತಿದೆ. ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ತೋಟಗಾರಿಕೆ ಇಲಾಖೆ ಕಾರ್ಯದರ್ಶಿ



ಆರ್. ಗಿರೀಶ್, ಈ ಬಾರಿ, ಫಲಪುಷ್ಪ ಪ್ರದರ್ಶನಕ್ಕೆ 3.20 ಕೋಟಿ ರೂ.ಗಿಂತ ಹೆಚ್ಚು ಹಣ ಖರ್ಚು ಮಾಡಲಾಗುತ್ತಿದ್ದು, ಈ ಬಾರಿ 12 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ. ಸಿದ್ದರಾಮಯ್ಯ ಅವರು ಜ.14ರಂದು ಸಂಜೆ 4 ಗಂಟೆಗೆ ಪ್ರದರ್ಶನಕ್ಕೆ ಚಾಲನೆ ನೀಡುವರು, ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್, ರಾಮ ಲಿಂಗಾರೆಡ್ಡಿ, ಶಾಸಕ ಉದಯ್ ಬಿ.ಗರುಡಾಚಾರ್ ಸೇರಿದಂತೆ ಇತರರು ಪಾಲ್ಗೊಳ್ಳುವರು ಎಂದು ಹೇಳಿದರು.

ತೇಜಸ್ವಿಯವರ ಸ್ಕೂಟರ್ ಮತ್ತು ಕರ್ವಾಲೋ ಕಾದಂಬರಿಯಲ್ಲಿ ಬರುವ ಕಿವಿ ನಾಯಿ, ಕರಿಯಪ್ಪ, ಮಂದಣ್ಣ ತೇಜಸ್ವಿಯವರ ಜೀರುಂಡೆ, ಏರೋಪ್ಲೇನ್ ಚಿಟ್ಟೆ ಮೊದಲಾದ ಪ್ರಾಣಿ ಪಕ್ಷಿ-ಕೀಟಗಳ ಪುಷ್ಪ ಮಾದರಿಗಳು ಇರಲಿವೆ. ಬೆಟ್ಟದ ಬಲಭಾಗದ ತಪ್ಪಲಿನಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಕಟ್ಟಡದ ಪುಷ್ಪ ಮಾದರಿ ಇತ್ಯಾದಿಗಳು ಇರಲಿವೆ ಎಂದು ಹೇಳಿದರು.

> **ತೇಜಸ್ವಿ ಅವರ ಕಾದಂಬರಿ, ಕಥೆಗಳಲ್ಲಿ ಕಂಡು ಬರುವ ಕಾಡಿನ ಮಾದರಿಯನ್ನು ಗಾಜಿನ ಮನೆಯಲ್ಲಿ ನಿರ್ಮಿಸಲಾಗಿದೆ. 45/45 ಅಡಿ ವ್ಯಾಸದ 25 ಅಡಿ ಎತ್ತರದ ಬೃಹತ್ ಬೆಟ್ಟ, ಜಲಪಾತದ ಮಾದರಿ ಇರಲಿದ್ದು ಅದರ ತಪ್ಪಲಿನಲ್ಲಿ ತೇಜಸ್ವಿ ಅವರ ಮೂಡಿಗೆರೆಯ ಹ್ಯಾಂಡ್‌ಪೋಸ್ಟ್ ಸಮೀಪವಿರುವ 'ನಿರುತ್ತರ' ಮನೆಯ ಪುಷ್ಪಮಾದರಿ ನಿರ್ಮಾಣಗೊಳ್ಳಲಿದೆ. ಅದರ ಮುಂದೆ ನಾಲ್ಕು ಅಡಿ ಎತ್ತರದ ತೇಜಸ್ವಿ- ರಾಜೇಶ್ವರಿಯವರ ಪ್ರತಿಮೆಗಳು ಇರಲಿವೆ ಎಂದು ಮಾಹಿತಿ ನೀಡಿದರು.**
>
> **ನಿರ್ದೇಶಕ ಡಾ.ಎಂ. ಜಗದೀಶ್**

# ಸುಪ್ರೀಂಕೋರ್ಟ್ ಆದೇಶದಂತೆ ಕಾಲಮಿತಿಯೊಳಗೆ ಜಿಬಿಎ ಪಾಲಿಕೆಗಳ ಚುನಾವಣೆ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ನಿಗದಿತ ದಿನದ ಒಳಗೆ ಜಿಬಿಎ ಪಾಲಿಕೆಗಳ ಚುನಾವಣೆ ನಡೆಸಲಾಗುವುದು. ಈ ಸಂಬಂಧ ರಾಜ್ಯ ಚುನಾವಣಾ ಆಯೋಗಕ್ಕೆ ಅಗತ್ಯ ನಿರ್ದೇಶನ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಅರಮನೆ ಮೈದಾನ ಆವರಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯ ಚುನಾವಣಾ ಆಯೋಗವು ನ್ಯಾಯಾಲಯದ ಮುಂದೆ ಪ್ರಮಾಣಪತ್ರ ಸಲ್ಲಿಸಿದೆ.

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳು ನಡೆಯಬೇಕು ಎಂದರು. ತಾಂತ್ರಿಕ ಆಕ್ಷೇಪಣೆಗಳ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, ಕೆಲವರು ಆಕ್ಷೇಪಣೆ ಸಲ್ಲಿಸುತ್ತಾರೆ.

ಅದಕ್ಕೆ ಸಮಿತಿ ರಚಿಸಲಾಗಿದ್ದು, ಸಮಿತಿ ತೀರ್ಮಾನ ಮಾಡಲಿದೆ. ಮೀಸಲಾತಿ ವಿಚಾರವಾಗಿ ಮಹಿಳೆಯರಿಗೆ ಕಡಿಮೆಯಾಗಿದೆ ಎಂಬ ಮಾತು ಕೇಳಿಬಂದಿವೆ. ಇದನ್ನು ನಾನು ಗಮನಿಸಿಲ್ಲ. ತಪ್ಪಾಗಿದ್ದರೆ ಸರಿಪಡಿಸಲು ಅವರಿಗೆ ಸೂಚಿಸಲಾಗುವುದು. ನಾವು ಯಾವುದರಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ ಎಂದರು. ಚುನಾವಣೆ



ನಡೆಸಲು ನ್ಯಾಯಾಲಯದ ಬಳಿ ಸಮಯ ಕೇಳುತ್ತೀರಾ ಎಂಬ ಪ್ರಶ್ನೆಗೆ ಯಾವುದೇ ಕಾಲಾವಕಾಶ ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಚುನಾವಣೆ ನಿಮ್ಮ ಪಾಲಿಗೆ ಸವಾಲಿನದ್ದಾಗಿದೆಯಲ್ಲವೇ ಎಂದಾಗ, ಚುನಾವಣೆ ನಡೆಸುವುದು ನಮ್ಮ ಕರ್ತವ್ಯ. ಕಾರ್ಯಕರ್ತರಿಗೆ ಅಧಿಕಾರ ಕೊಡುವುದು, ಹೊಸ ನಾಯಕರನ್ನು ತಯಾರು ಮಾಡುತ್ತಿದ್ದೇವೆ. ನಾವು ಮಾಡುತ್ತಿರುವ ಕೆಲಸಕ್ಕೆ ಜನ ಬೆಂಬಲ ನೀಡುವ ವಿಶ್ವಾಸವಿದೆ. ನಾವು ಐದೂ ಪಾಲಿಕೆಗಳಲ್ಲೂ ಗೆಲ್ಲುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಬಿಜೆಪಿ ಹಾಗೂ ಜೆಡಿಎಸ್ ಫ್ರೆಂಡ್ಲಿ ಫೈಟ್ ವಿಚಾರವಾಗಿ ಕೇಳಿದಾಗ, ಅವರು ಏನಾದರೂ ಮಾಡಿಕೊಳ್ಳಲಿ. ಜತೆಯಾಗಿಯಾದರೂ ಚುನಾವಣೆ ಮಾಡಲಿ, ಬೇರೆಯಾಗಿ ಬೇಕಾದರೂ ಮಾಡಲಿ. ಅವರು ಸಂಸತ್ ಚುನಾವಣೆಯಲ್ಲಿ ಒಟ್ಟಿಗೆ ಚುನಾವಣೆ ಎದುರಿಸಿದಂತೆ ವಿಧಾನಸಭೆ ಹಾಗೂ ಪಾಲಿಕೆ ಚುನಾವಣೆಯನ್ನು ಮಾಡಿದರೆ ನೇರ ಹಣಾಹಣಿ ಇರಲಿದೆ ಎಂದರು.**

# ನಿಮಗಿದೋ ಟೈಂ ಟೇಬಲ್: ಜಯನಗರದಲ್ಲಿ ಕಾಲದ ವಿಜ್ಞಾನ ಲೋಕ!

## ಪ್ರಾಚೀನ ಭಾರತದಲ್ಲಿ ನಕ್ಷತ್ರಗಳು, ಪಂಚಾಂಗ, ಜೈವಿಕ ಲಯಗಳ ಮೂಲಕ ಸಮಯವನ್ನು ಹೇಗೆ ಅಳೆಯುತ್ತಿದ್ದರು ಎಂಬ ರೋಚಕ ಮಾಹಿತಿ

• ಉದಯವಾಹಿನಿ, ಬೆಂಗಳೂರು

ಸಮಯ ಅಥವಾ ಕಾಲ ಎನ್ನುವುದು ಕೇವಲ ಗಡಿಯಾರದ ಮುಳ್ಳುಗಳ ಆಟವಷ್ಟೇ ಅಲ್ಲ, ಅದೊಂದು ನಿಗೂಢ ವಿಸ್ಮಯ. ಇದೀಗ ಬೆಂಗಳೂರಿನ ಜಯನಗರದಲ್ಲಿರುವ ಪಾರ್ಸೆಕ್ ಅಕ್ಷರಶಃ ಒಂದು ಟೈಮ್ ಲ್ಯಾಬ್ (ಸಮಯದ ಪ್ರಯೋಗಾಲಯ) ಆಗಿ ಬದಲಾಗಿದೆ! ಪರಮ್ ಫೌಂಡೇಶನ್ ವತಿಯಿಂದ ಈ ಜನವರಿ ತಿಂಗಳು ಪೂರ್ತಿ ಕಾಲ ಎಂಬ ವಿಶಿಷ್ಟ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಇಲ್ಲಿ ಮಕ್ಕಳು ಮತ್ತು ದೊಡ್ಡವರು ಸಮಯದ ಹಿಂದಿನ ವಿಜ್ಞಾನವನ್ನು ಆಟ-ಪಾಠದ ಮೂಲಕ ಕಲಿಯಬಹುದಾಗಿದೆ.

**ಏನಿದು ಟೈಮ್ ಲ್ಯಾಬ್?:** ಇದು ಕೇವಲ ಬೋರ್ಡ್ ಮತ್ತು ಚಾಕ್ ಪೀಸ್ ಪಾಠವಲ್ಲ. ಇಲ್ಲಿ ಕಥೆಗಳು, ಪ್ರಯೋಗಗಳು ಮತ್ತು ಸ್ವತಃ ಕೈಯಾರೆ ಮಾಡುವ ಚಟುವಟಿಕೆಯ ಮೂಲಕ ಸಮಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಿದೆ.

ಪ್ರಾಚೀನ ಭಾರತದಲ್ಲಿ ನಕ್ಷತ್ರಗಳನ್ನು ನೋಡಿ ಹೇಗೆ ಸಮಯ ಹೇಳುತ್ತಿದ್ದರು? ನಮ್ಮ ದೇಹದೊಳಗಿನ ಜೈವಿಕ ಗಡಿಯಾರ ಹೇಗೆ ಕೆಲಸ ಮಾಡುತ್ತದೆ? ಎಂಬಿತ್ಯಾದಿ ಕುತೂಹಲಕರ ಸಂಗತಿಗಳನ್ನು ಇಲ್ಲಿ ಬಿಡಿಸಿಡಲಾಗುತ್ತದೆ. ಎರಡು ವಯೋಮಿತಿಯವರಿಗೆ

**ನೀವೇ ತಯಾರಿಸಿ ನಿಮ್ಮದೇ ಆದ ಗಡಿಯಾರ**


ಉದಯವಾಹಿನಿ ಚಿತ್ರ

ಪ್ರತ್ಯೇಕ ಕಾರ್ಯಾಗಾರ

ಈ ಕಾರ್ಯಾಗಾರವನ್ನು ವಯಸ್ಸಿನ ಆಧಾರದ ಮೇಲೆ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ

1) 6 ರಿಂದ 13 ವರ್ಷದ ಮಕ್ಕಳಿಗೆ (ಬೆಳಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ):

**ದಿ ಗ್ರೇಟ್ ಟೈಮ್ ಡಿಟೆಕ್ಟಿವ್ಸ್:** ಗ್ರಹಗಳ ಚಲನೆ ಮತ್ತು ಅಣು ವಿಜ್ಞಾನದ ಮೂಲಕ ಸಮಯದ ರಹಸ್ಯ ಭೇದಿಸುವುದು. ಜೊತೆಗೆ ಪ್ರಾಚೀನ ಕಾಲದ ಗಡಿಯಾರಗಳ ನಿರ್ಮಾಣದ ಬಗ್ಗೆ ತಿಳಿಯಬಹುದು. ದಿನಾಂಕ: ಜ. 3, 11, 17, 25

**ಟೈಮ್ ಹ್ಯಾಕರ್ಸ್:** ರಟ್ಟಿನ ಡಬ್ಬಿಗಳನ್ನು ಬಳಸಿ ಮಕ್ಕಳು ತಮ್ಮದೇ ಆದ ಸೂಪರ್ ಸ್ಟಾಪ್ ವಾಚ್ ಮಾದರಿಯನ್ನು ತಯಾರಿಸಬಹುದು ಮತ್ತು ಟೈಮಿಂಗ್ ಚಾಲೆಂಜ್‌ಗಳಲ್ಲಿ ಭಾಗವಹಿಸಬಹುದು. ದಿನಾಂಕ: ಜ. 4, 10, 18, 24

2) 13 ವರ್ಷ ಮೇಲ್ಪಟ್ಟವರಿಗೆ (ಮಧ್ಯಾಹ್ನ 3 ರಿಂದ ಸಂಜೆ 5ರವರೆಗೆ):

**ಪ್ರಾಚೀನ ಕಾಲದ ಪರಿಕಲ್ಪನೆಗಳು:** ಪ್ರಾಚೀನ ಭಾರತದಲ್ಲಿ ನಕ್ಷತ್ರಗಳು, ಪಂಚಾಂಗ ಮತ್ತು ಜೈವಿಕ ಲಯಗಳ ಮೂಲಕ ಸಮಯವನ್ನು ಹೇಗೆ ಅಳೆಯುತ್ತಿದ್ದರು ಎಂಬ ರೋಚಕ ಮಾಹಿತಿ. ದಿನಾಂಕ: ಜ. 3, 11, 17, 25

**ಸ್ಟಾಪ್ ವಾಚ್ ರಹಸ್ಯ:** ಯಾಂತ್ರಿಕ ಮಾದರಿಯನ್ನು ನಿರ್ಮಿಸುವ ಮೂಲಕ ಸ್ಟಾಪ್ ವಾಚ್‌ನ ಸ್ಟಾರ್ಟ್, ಸ್ಟಾಪ್ ಮತ್ತು ರೀಸೆಟ್ ಬಟನ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಕಲಿಯಬಹುದು. ದಿನಾಂಕ: ಜ. 4, 10, 18, 24

**ಈಗಲೇ ನೋಂದಾಯಿಸಿಕೊಳ್ಳಿ!:** ಈ ಕಾರ್ಯಾಗಾರಗಳು ವಾರಾಂತ್ಯದಲ್ಲಿ (ಶನಿವಾರ ಮತ್ತು ಭಾನುವಾರ) ಮಾತ್ರ ನಡೆಯಲಿದೆ. ಭಾಗವಹಿಸುವವರು ತಾವು ತಯಾರಿಸಿದ ಮಾಡೆಲ್‌ಗಳನ್ನು (3ಆ ಪ್ರಿಂಟೆಡ್ ಅಥವಾ ಇತರೆ) ಮನೆಗೆ ಕೊಂಡೊಯ್ಯಬಹುದು. ಈ ವಿಶೇಷ ಅನುಭವವು ಜನವರಿ 31ರವರೆಗೆ ಮಾತ್ರ ಲಭ್ಯವಿರುತ್ತದೆ. ಆಸಕ್ತರು ಬುಕ್ ಮೈ ಶೋದಲ್ಲಿ ನೋಂದಾಯಿಸಿಕೊಳ್ಳಬಹುದು. ಒಟ್ಟಿನಲ್ಲಿ ಮೊಬೈಲ್ ಸ್ಕ್ರೀನ್ ನೋಡಿ ಸಮಯ ಕಳೆಯುವ ಬದಲು, ಆ ಸಮಯದ ಹುಟ್ಟು ಮತ್ತು ಬೆಳವಣಿಗೆಯನ್ನು ತಿಳಿಯಲು ಇದೊಂದು ಸುವರ್ಣಾವಕಾಶ!

- ಜಯನಗರದ ಪಾರ್ಸೆಕ್‌ನಲ್ಲಿ ಕಾಲದ ಕೌತುಕ
- ಪರಮ್ ಫೌಂಡೇಶನ್‌ನಿಂದ ವಿನೂತನ ಕಾರ್ಯಾಗಾರ
- ವಾರಾಂತ್ಯದಲ್ಲಿ ನಡೆಯುವ ವಿಶಿಷ್ಟ ಟೈಮ್ ಲ್ಯಾಬ್
- ಮಕ್ಕಳಿಗಾಗಿ ಸ್ಟಾಪ್‌ವಾಚ್ ತಯಾರಿಸುವ ಮಜಾ
- ಪ್ರಾಚೀನ ಭಾರತದ ಕಾಲಗಣನೆ ತಿಳಿಯುವ ಅವಕಾಶ
- ಜನವರಿ 31ರವರೆಗೆ ಮಾತ್ರ ಲಭ್ಯವಿರುವ ಆಫರ್
- ಆಟ, ಪಾಠದೊಂದಿಗೆ ಸಮಯದ ಪ್ರಯೋಗಾಲಯ
- ನೀವೇ ತಯಾರಿಸಿ ನಿಮ್ಮದೇ ಆದ ಗಡಿಯಾರ

# ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಿರಿ: ರೈತ ಸಂಘಟನೆ ಆಗ್ರಹ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೂ ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಸ್ಥಗಿತವಾಗಿರುವ ರಾಗಿ ಮತ್ತು ಮೆಕ್ಕೆಜೋಳ ನೋಂದಣಿ ಕಾರ್ಯವನ್ನು ಮತ್ತೆ ಆರಂಭಿಸಬೇಕು. ಪ್ರತಿ ಹೋಬಳಿಯಲ್ಲಿಯೂ ನೋಂದಣಿ ಕೇಂದ್ರ ತೆರೆಯಬೇಕು–ಹೀಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದ ಜಿಲ್ಲಾಡಳಿತ ಭವನದ ಎದುರು ಅಖಿಲ ಕರ್ನಾಟಕ ರೈತ ಸಂಘಟನೆ (ಎಕೆಆರ್‌ಎಸ್) ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾ ಗ್ರಂಥಾಲಯದ ಮುಂಭಾಗ ಸಮಾವೇಶಗೊಂಡ ರೈತರು ಮತ್ತು ಸಂಘಟನೆ ಸದಸ್ಯರು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಜಿಲ್ಲಾಧಿಕಾರಿ ಕಚೇರಿಗೆ ಕಾಲ್ನಡಿಗೆ ಜಾಥಾ ನಡೆಸಿದರು. ಜಿಲ್ಲಾಧಿಕಾರಿ ಕಚೇರಿಯ ಮುಖ್ಯದ್ವಾರ ಪ್ರವೇಶಿಸಲು ಮುಂದಾದರು.


ಉದಯವಾಹಿನಿ ಚಿತ್ರ

ಆಗ ಪೊಲೀಸರು ರೈತರನ್ನು ತಡೆದರು. ಭವನದ ಮೆಟ್ಟಿಲುಗಳ ಮೇಲೆ ಕುಳಿತು ರೈತರು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರಗಳ ವಿರುದ್ಧ ಧಿಕ್ಕಾರದ ಘೋಷಣೆ ಮೊಳಗಿಸಿದರು. ರೈತರು ಬೆಳೆದಿರುವ ಮೆಕ್ಕೆಜೋಳವನ್ನು ಯಾವುದೇ ಮಿತಿಯ ನಿರ್ಬಂಧವಿಲ್ಲದೆ ಸಂಪೂರ್ಣವಾಗಿ ಸರ್ಕಾರವೇ ಖರೀದಿಸಬೇಕು. ಬೆಂಬಲ ಬೆಲೆಯ ದರವನ್ನು ರೂ.2,400ರಿಂದ ರೂ.3,500 ನಿಗದಿಪಡಿಸಬೇಕು. ಈಗಾಗಲೇ ಜೋಳ ಮಾರಾಟ ಮಾಡಿರುವ ರೈತರಿಗೆ ಹಣ ನೀಡಬೇಕು ಎಂದು ಒತ್ತಾಯಿಸಿದರು.ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯ ಅವೈಜ್ಞಾನಿಕ ನಿಯಮಗಳನ್ನು ಸರಳೀಕರಿಸಬೇಕು. ಕೇಂದ್ರ ಸರ್ಕಾರವು ವಿದೇಶದಿಂದ ಮೆಕ್ಕೆಜೋಳ ಆಮದು ಮಾಡಿಕೊಳ್ಳುತ್ತಿದ್ದು ಇದನ್ನು ಕೈ ಬಿಡಬೇಕು. ಎಪಿಎಂಸಿಗಳಲ್ಲಿ ನಡೆಯುತ್ತಿರುವ ರೈತರ ಸುಲಿಗೆ ವಿರುದ್ಧ ಕಠಿಣ ಕ್ರಮಕ್ಕೈಗೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಹನುಮಂತರೆಡ್ಡಿ, ಲಕ್ಷ್ಮಿನಾರಾಯಣ, ಹೇಮಚಂದ್ರ, ಶ್ರೀನಿವಾಸ್, ಗೋಪಾಲ್ ರೆಡ್ಡಿ. ರಮೇಶ್ ರೆಡ್ಡಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಪಾರದರ್ಶಕ ಆಡಳಿತ ವಿಬಿ-ಜಿ ರಾಮ್ ಜಿ ಆಶಯ: ಸಚಿವ ಸೋಮಣ್ಣ

## ನಗರದಲ್ಲಿ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

• ಉದಯವಾಹಿನಿ, ಚಾಮರಾಜನಗರ

ಮಹಾತ್ಮಾಗಾಂಧಿ ನರೇಗಾ ಯೋಜನೆಯಲ್ಲಿದ್ದ ಲೋಪ ದೋಷಗಳನ್ನು ಸರಿಪಡಿಸಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಎಂದು ಬದಲಾಯಿಸಲಾಗಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸಮಜಾಯಿಷಿ ನೀಡಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನರೇಗಾ ಯೋಜನೆಯಿಂದ ಮಹಾತ್ಮಾ ಗಾಂಧೀಜಿ ಹೆಸರನ್ನು ತೆಗೆದು ಹಾಕಲಾಗಿದ್ದರೂ ಅವರಿಗೆ ಪ್ರೇರಣೆಯಾಗಿದ್ದ ರಾಮನ ಹೆಸರನ್ನು ಇಡಲಾಗಿದೆ. ಹೆಸರು ಬದಲಾವಣೆಯ ಹಿಂದೆ ವಿಕಸಿತ ಭಾರತ ನಿರ್ಮಾಣದ ಉದ್ದೇಶವಿದೆಯೇ ಹೊರತು ದುರುದ್ದೇಶಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ 756 ಯೋಜನೆಗಳಿಗೆ ಜವಾಹರ್ ಲಾಲ್ ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ ಹೆಸರನ್ನು ಇಡಲಾಗಿದೆ. ಆದರೆ, ಮೋದಿ ಪ್ರಧಾನಿಯಾದ ಬಳಿಕ ಯಾವ ಯೋಜನೆಗೆ ಅವರ ಹೆಸರು ಇರಿಸಲಾಗಿಲ್ಲ. ಎಲ್ಲಾ ಯೋಜನೆಗಳು ಪ್ರಧಾನ ಮಂತ್ರಿ ಹುದ್ದೆಯ ಹೆಸರಿನಲ್ಲಿವೆ ಎಂದರು. ನರೇಗಾ ಯೋಜನೆ ವಿಕಸಿತ ಭಾರತ್ ಜಿ ರಾಮ್ ಜಿ ಯೋಜನೆಯಾಗಿ ಬದಲಾದ ಬಳಿಕ ಮಾನವ ದಿನಗಳ ಸಂಖ್ಯೆಯನ್ನು 100 ರಿಂದ 125ಕ್ಕೆ ಹೆಚ್ಚಿಸಲಾಗಿದೆ. ಪುರುಷ ಹಾಗೂ ಮಹಿಳೆಯರಿಗೆ ಸಮಾನವಾಗಿ ರೂ.370 ಕೂಲಿ ನಿಗದಿಪಡಿಸಲಾಗಿದೆ. ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಯೋಜನೆ ಪರಿಷ್ಕರಿಸಲಾಗಿದೆ.


ಉದಯವಾಹಿನಿ ಚಿತ್ರ



ವಿಕಸಿತ ಭಾರತ ಜಿ ರಾಮ್ ಜಿ ಯೋಜನೆಯನ್ನು ಅರಿಯದೆ ಕಾಂಗ್ರೆಸ್ ನಾಯಕರು ಟೀಕೆ ಮಾಡುತ್ತಿದ್ದು ಗಾಂಧೀಜಿ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಸೂರ್ಯ-ಚಂದ್ರ ಇರುವವರೆಗೂ ಗಾಂಧೀಜಿ ಹೆಸರನ್ನು ಬಿಜೆಪಿ ಸ್ಮರಿಸಲಿದೆ

ವಿ.ಸೋಮಣ್ಣ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ

ವಿಜಿ ಜಿ ರಾಮ್ ಜಿ ಕಾಯ್ದೆ ಜಾರಿಯಿಂದ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಪೆಟ್ಟುಬಿದ್ದಿಲ್ಲ. ಬದಲಾಗಿ ಗ್ರಾಮ ಪಂಚಾಯಿತಿ ವ್ಯವಸ್ಥೆ ಬಲಗೊಳ್ಳಲಿದೆ. ಪಂಚಾಯಿತಿ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ದುಂದು ವೆಚ್ಚಗಳಿಗೆ ಕಡಿವಾಣ ಬೀಳಲಿದ್ದು ಪಾರದರ್ಶಕತೆಗೆ ಒತ್ತು ಸಿಗಲಿದೆ. ಆಡಳಿತಾತ್ಮಕ ವ್ಯವಸ್ಥೆ ಬಲಗೊಳ್ಳಲಿದೆ. 2011ರ ಬಜೆಟ್‌ನಲ್ಲಿ ಯುಪಿಎ ಸರ್ಕಾರ ನರೇಗಾ ಯೋಜನೆಗೆ ರೂ. 40,000 ಕೋಟಿ ಮೀಸಲಿಟ್ಟಿತ್ತು. ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅನುದಾನವನ್ನು ರೂ. 2.86 ಲಕ್ಷ ಕೋಟಿಗೆ ಹೆಚ್ಚಿಸಲಾಯಿತು. ರಾಜ್ಯಗಳಿಗೆ ಸರಾಸರಿ 17000 ಕೋಟಿ ಅನುದಾನ ಹೆಚ್ಚಾಯಿತು. 2025ರಲ್ಲಿ ಯೋಜನೆಗೆ ರೂ. 85,334 ಕೋಟಿ ವೆಚ್ಚ ಮಾಡಲಾಗಿದ್ದು 5.78 ಕೋಟಿ ಮಂದಿಗೆ ಉದ್ಯೋಗ ನೀಡಲಾಗಿದೆ ಎಂದು ಸಚಿವ ಸೋಮಣ್ಣ ಮಾಹಿತಿ ನೀಡಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಸಿಎಜಿ ವರದಿ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನಾ ವರದಿ ಕಾಟಾಚಾರಕ್ಕೆ ನಡೆಯುತ್ತಿತ್ತು. ವಿಬಿ ಜಿ ರಾಮ್ ಜಿ ಕಾಯ್ದೆಯಡಿ ಅವ್ಯವಹಾರದಲ್ಲಿ ಭಾಗಿಯಾದರೆ ಶಿಸ್ತುಕ್ರಮದ ಜೊತೆಗೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ತಂತ್ರಜ್ಞಾನದ ಸಹಾಯ ಪಡೆಯಲಾಗಿದೆ. 14 ದಿನಗಳ ಒಳಗೆ ಫಲಾನುಭವಿಗಳ ಖಾತೆಗೆ ನೇರವಾಗಿ ಕೂಲಿ ಜಮೆಯಾಗಲಿದೆ ಎಂದು ವಿ.ಸೋಮಣ್ಣ ಹೇಳಿದರು.


### ರೈಲ್ವೆ ಯೋಜನೆ ಜಾರಿಗೆ ಅಸಹಕಾರ

ಚಾಮರಾಜನಗರ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಕಾಳಜಿ ಇದೆ. ಹಾರೋಹಳ್ಳಿ ಕನಕಪುರ ಸಾತನೂರು ಮಳವಳ್ಳಿ ಕೊಳ್ಳೇಗಾಲ ಯಳಂದೂರು ಸಂತೇಮರಹಳ್ಳಿ ಮಾರ್ಗವಾಗಿ ಚಾಮರಾಜನಗರಕ್ಕೆ ರೈಲ್ವೆ ಯೋಜನೆ ಮಂಜೂರು ಮಾಡುವ ಸಂಬಂಧ ಪ್ರಸ್ತಾವ ಸಲ್ಲಿಸುವಂತೆ ಯೋಜನೆಗೆ ಜಾಗ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರೂ ಸ್ಪಂದಿಸಲಿಲ್ಲ. ಮೈಸೂರು-ಕುಶಾಲ ನಗರ ನಡುವಿನ ರೈಲ್ವೆ ಯೋಜನೆಗೂ ಬೆಂಬಲ ಸಿಗಲಿಲ್ಲ ಎಂದು ವಿ.ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದರು.

# ಅಯ್ಯಪ್ಪ ಮಾಲಾಧಾರಿಗಳ ಮೇಲೆ ತಮಿಳಿಗರ ದೌರ್ಜನ್ಯ

• ಉದಯವಾಹಿನಿ, ಗುಂಡ್ಲುಪೇಟೆ

ನೀರಿಗಾಗಿ ಕ್ಯಾತೆ ತೆಗೆಯುತ್ತಿದ್ದ ತಮಿಳುನಾಡು ಇದೀಗ ಕನ್ನಡಿಗರ ಅಸ್ಮಿತೆ ಭಾವುಟದ ಮೇಲೆ ಕಣ್ಣಿರಿಸಿದ್ದು ಶಬರಿಮಲೇ ಯಾತ್ರೆ ಆರಂಭವಾದಾಗಿನಿಂದ ರಾಜ್ಯದಿಂದ ಶಬರಿಮಲೇ ಯಾತ್ರೆಗೆ ತೆರಳುವ ಕನ್ನಡಿಗರ ಮೇಲೆ ದೌರ್ಜನ್ಯ ಎಸಗುತ್ತಿರುವ ತಮಿಳುನಾಡಿನ ಕೆಲವರು ಭಾವುಟವನ್ನ ಹರಿದು ಅಪಮಾನ ಎಸಗಿರುವ ಘಟನೆ ನಡೆದಿದೆ.


ಉದಯವಾಹಿನಿ ಚಿತ್ರ

ತಾಲ್ಲೂಕಿನ ಅಣ್ಣೂರುಕೇರಿ ಗ್ರಾಮದಿಂದ ಶಬರಿ ಮಲೇ ಯಾತ್ರೆ ಹೊರಟಿದ್ದ ಭಕ್ತರ ಟಿಟಿ ವಾಹನವನ್ನ ಮಧುರೈ ಬಳಿ ತಡೆಯೊಡ್ಡಿದ ಕೆಲವರು ಕನ್ನಡ ಭಾವುಟವನ್ನ ತೆಗೆಯುವಂತೆ ಒತ್ತಾಯಿಸಿ ದೈಹಿಕವಾಗಿ ಹಲ್ಲೆಗೆ ಮುಂದಾದರು ಎಂದು ಯಾತ್ರಾರ್ಥಿ ಮಾಹಿತಿ ನೀಡಿದ್ದಾರೆ. ತಮಿಳಿಗರ ದೌರ್ಜನ್ಯದ ದೃಶ್ಯಾವಳಿಯನ್ನ ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿರುವ ಅಯ್ಯಪ್ಪ ಮಾಲಾಧಾರಿಗಳು ತಮಿಳುನಾಡಿನ ವಾಹನಗಳು ಕರ್ನಾಟಕಕ್ಕೆ ಬಾರದೆ ಇರುತ್ತವೆಯೇ ಎಂದು ಪ್ರಶ್ನಿಸಿದ್ದಾರೆ. ನಾವೇನು ಇಲ್ಲಿಯೇ ಉಳಿಯಲು ಬಂದಿಲ್ಲ ಶಬರಿ ಮಲೇ ಅಯ್ಯಪ್ಪ ದರ್ಶನವಾಗಿದೆ ನಮ್ಮ ಪಾಡಿಗೆ ನಾವು ವಾಪಾಸ್ಸಾಗುತ್ತಿದ್ದೇವೆ ಆದರೆ ಬಲವಂತವಾಗಿ ಕನ್ನಡ ಭಾವುಟವನ್ನ ತೆರವುಗೊಳಿಸುವಂತೆ ಒತ್ತಡ ಹೇರುವುದಲ್ಲದೆ ಭಾವುಟವನ್ನ ಹರಿದು ಕೋಟ್ಯಾಂತರ ಕನ್ನಡಿಗರಿಗೆ ಅಪಮಾನ ಎಸಗಲಾಗಿದೆ.

**ಕನ್ನಡ ಭಾವುಟ ಹರಿದ ಪುಂಡರು**

ಘಟನಾ ಸ್ಥಳದಲ್ಲಿ ತಮಿಳುನಾಡು ಪೊಲೀಸರು ಅಗಮಿಸಿದರೂ ಸಹ ಸ್ಥಳೀಯರಿಗೆ ಬೆಂಬಲವಾಗಿ ನಿಂತು ನಮ್ಮನ್ನ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿದ್ದಾರೆ.

> ಕನ್ನಡಿಗರ ಸ್ವಾಭಿಮಾನಕ್ಕೆ ದಕ್ಕೆ ತರುವ ಕೆಲಸಕ್ಕೆ ತಮಿಳುನಾಡಿನ ಕೆಲ ಸಂಘಟನೆಯ ಪುಂಡರು ಮುಂದಾಗಿರುವುದು ಖಂಡನೀಯ, ಕರ್ನಾಟಕದಲ್ಲಿಯೇ ಜೀವನ ಕಂಡುಕೊಂಡಿರೋ ತಮಿಳಿಗರು ಇಂತಹ ಹೇಡಿಗಳ ಕೃತ್ಯವನ್ನ ಖಂಡಿಸದಿರುವುದು ಅವರಿಗೆ ತಮಿಳುನಾಡಿನ ಮೇಲಿನ ವ್ಯಾಮೋಹ ಎಷ್ಟಿದೆ ಎಂಬುದನ್ನ ತೋರಿಸುತ್ತಿದೆ, ಕನ್ನಡ ಭಾವುಟವನ್ನ ಹರಿದುಹಾಕಿದ ಪುಂಡರನ್ನ ಸಮರ್ಥಿಸುವವರಿಗೆ ಉದ್ಯೋಗಾವಕಾಶ , ಜೀವನವಕಾಶ ನೀಡಿದವರಿಗೆ ನಾಚಿಕೆಯಾಗಬೇಕು. ಕರ್ನಾಟಕ ಎಂದರೆ ನಿಗಿನಿಗಿ ಕೆಂಡ ಕಾರುವ ಕೆಲ ತಮಿಳು ಪುಂಡರ ಮೇಲೆ ಎಂ.ಕೆ.ಸ್ಟಾಲಿನ್ ಸರ್ಕಾರ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಕನ್ನಡಿಗರ ಆಕ್ರೋಶವನ್ನ ಕಣ್ತುಂಬಿಕೊಳ್ಳಬೇಕಾಗುತ್ತದೆ.
>
> ಮಹೇಶ್. ಅಣ್ಣೂರು ಕೇರಿ


# ರೂ.400 ಕೋಟಿ ವೆಚ್ಚದ ನಾಲಾ ಆಧುನೀಕರಣಕ್ಕೆ ಶೀಘ್ರ ಚಾಲನೆ

• ಉದಯವಾಹಿನಿ, ಮಳವಳ್ಳಿ

ರೂ.400 ಕೋಟಿ ವೆಚ್ಚದಲ್ಲಿ ತಾಲ್ಲೂಕಿನ ಸರ್.ಎಂ.ವಿ.ವಿಶ್ವೇಶ್ವರಯ್ಯ ನಾಲಾ ವ್ಯಾಪ್ತಿಯ ಉಪನಾಲೆ, ಸೀಳು ನಾಲೆಗಳ ನಾಲಾ ಆಧುನೀಕರಣದ ಕಾಮಗಾರಿಗೆ ಸದ್ಯದಲ್ಲಿಯೇ ಚಾಲನೆ ನೀಡಲಾಗುವುದು ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ತಾಲ್ಲೂಕಿನ ಚಿಕ್ಕಮೂಲಗೂಡು ಗ್ರಾಮದ ಕೆರೆ ಬಳಿ ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ನಾಲಾ ಬಯಲಿನ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲು ರೂ.400 ಕೋಟಿ ವೆಚ್ಚದಲ್ಲಿ ಉಪನಾಲೆ ಮತ್ತು ಸೀಳು ನಾಲೆಗಳ ಆಧುನೀಕರಣದ ಜೊತೆಗೆ ಜಮೀನಿಗೆ ಹೋಗುವ ರಸ್ತೆಗಳ ಸಂಪೂರ್ಣವಾಗಿ ಅಭಿವೃದ್ಧಿಗೂ ಆದ್ಯತೆ ನೀಡಲಾಗುತ್ತಿದೆ. ಕನ್ನಂಬಾಡಿ ನಿರ್ಮಾಣವಾದ ನಂತರ ನೀರಾವರಿ ವಿಚಾರದ ಸಮಸ್ಯೆಗಳ ಬಗೆಹರಿಸುವಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ ಎಂದರು.

ಇನ್ನೂ ಕೆಲವೇ ದಿನಗಳಲ್ಲಿ ಸರ್ಕಾರದಿಂದ ವಿಶೇಷ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೆ ಒತ್ತು ನೀಡುವುದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರದೇಶದ ರಸ್ತೆಗಳ ಪ್ರಗತಿಗೆ ಆದ್ಯತೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಸುಮಾರು ರೂ.600 ಕೋಟಿ ಅನುದಾನದ ವಿವಿಧ ಕಾಮಗಾರಿಗಳಿಗೆ ಶೀಘ್ರ ಶಂಕುಸ್ಥಾಪನೆ ನಡೆಸಲಾಗುತ್ತದೆ ಎಂದರು. ತಾಲ್ಲೂಕಿನ ಸುಜ್ಜಲ್ಲೂರು ಗ್ರಾಮದಲ್ಲಿ ಸಿಎಸ್‌ಆರ್ ಅನುದಾನದಲ್ಲಿ ನವೀಕರಣಗೊಂಡ ಶಾಲಾ ಕಟ್ಟಡ, ಅಡುಗೆ ಕೋಣೆ, ಮತ್ತು ಗಣಕಯಂತ್ರದ ಕೊಠಡಿಗಳನ್ನು ಉದ್ಘಾಟಿಸಿದರು. ನಂತರ ಬೆಂಡರವಾಡಿ ಗ್ರಾಮದಲ್ಲಿ ನೂತನ ಗ್ರಂಥಾಲಯ ಕಟ್ಟಡ ನಿರ್ಮಾಣ ಹಾಗೂ ಮಿಕ್ಕೆರೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ರೂ.9.5 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದರು.


ಉದಯವಾಹಿನಿ ಚಿತ್ರ

# ಹಿಂದೂ ಧರ್ಮದ ಮಹತ್ವ ಸಾರಿದ ವೀರ ಸನ್ಯಾಸಿ: ತದ್ಯುಕ್ತಾನಂದ ಸ್ವಾಮೀಜಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತಿಪಟೂರು

ನಗರದ ಎಸ್‌ವಿಪಿ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಯುವ ದಿನೋತ್ಸವ ಹಾಗೂ ವಿವೇಕ ಸಿಂಚನ ಕಾರ್ಯಕ್ರಮ ಮಂಗಳವಾರ ನಡೆಯಿತು.ತುರುವೇಕೆರೆ ರಾಮಕೃಷ್ಣಾಶ್ರಮದ ತದ್ಯುಕ್ತಾನಂದ ಸ್ವಾಮೀಜಿ ಮಾತನಾಡಿ, ಜಗತ್ತಿಗೆ ಮೊಟ್ಟಮೊದಲ ಬಾರಿಗೆ ಹಿಂದೂ ಧರ್ಮದ ಸಂಸ್ಕೃತಿ ಹಾಗೂ ಧರ್ಮತತ್ತ್ವಗಳ ಮಹತ್ವವನ್ನು ಮನವರಿಕೆ ಮಾಡಿಕೊಟ್ಟ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು ಎಂದರು.

ವಿವೇಕಾನಂದರು ಚಿಕ್ಕ ವಯಸ್ಸಿನಲ್ಲಿಯೇ ಲೋಕ ಶಿಕ್ಷಣ ಹಾಗೂ ಪಠ್ಯ ಶಿಕ್ಷಣದಲ್ಲಿ ಅಪಾರ ಜ್ಞಾನ ಸಂಪಾದನೆ ಪಡೆದು ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ಸಂಚರಿಸಿ ಪ್ರಬುದ್ಧ ಉಪನ್ಯಾಸ ನೀಡುವ ಮೂಲಕ ಸನಾತನ ಹಿಂದೂ ಧರ್ಮದ ಮಹತ್ವ ಹಾಗೂ ಯುವಶಕ್ತಿಯ ಪಾತ್ರವನ್ನು ಜಗತ್ತಿಗೆ ತಿಳಿಸಿದರು.

ಚಿಕಾಗೋದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ವಿಶ್ವದ ಎಲ್ಲ ಧರ್ಮಗಳ ನಡುವೆ ಭಾರತದ ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ಮೌಲ್ಯವನ್ನು ಎತ್ತಿ ಹಿಡಿದು ದೇಶಕ್ಕೆ ಅಪಾರ ಗೌರವ ತಂದುಕೊಟ್ಟ ಮಹಾನ್ ಚೇತನ ಎಂದರು.

ಧರ್ಮವ್ರತಾನಂದ ಸ್ವಾಮೀಜಿ ಮಾತನಾಡಿ, ವಿವೇಕ ಹಾಗೂ ಆನಂದ ಎರಡನ್ನೂ ಜನತೆಗೆ ಸಾರಿದ ಕಾರಣ ಸ್ವಾಮಿ ವಿವೇಕಾನಂದರೆಂದು ಪ್ರಸಿದ್ಧರಾದರು. ಯುವಕರು ಹಾಗೂ ವಿದ್ಯಾರ್ಥಿಗಳು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಸ್ಪಷ್ಟ ಗುರಿ ಇಟ್ಟುಕೊಂಡು ಸಾಧನೆಗೆ ಸಂಕಲ್ಪ ಮಾಡಬೇಕು ಎಂದರು. ಉಪನ್ಯಾಸಕ ಪ್ರಭಂಜನ್ ಮಾತನಾಡಿ, ಸ್ವಾಮಿ ವಿವೇಕಾನಂದರು ನಿರ್ಭಯವಾಗಿ ಜಗತ್ತಿನಾದ್ಯಂತ ಸಂಚರಿಸಿ, ತಮ್ಮ ವಿಚಾರಧಾರೆಯನ್ನು ಉಪನ್ಯಾಸ ಮಾಲಿಕೆಗಳ ಮೂಲಕ ಹರಡಿ ವಿಶ್ವಚೇತನರಾಗಿ ಮಿಂಚಿದರು ಎಂದರು.

ಪ್ರಾಂಶುಪಾಲ ಕೆ.ಎನ್.ರೇಣುಕಯ್ಯ ಮಾತನಾಡಿ, ಯುವಶಕ್ತಿ ದೇಶದ ಅಮೂಲ್ಯ ಆಸ್ತಿ. ಅದು ವ್ಯರ್ಥವಾಗಿ ಹರಿದುಹೋಗಬಾರದು. ಏಕಾಗ್ರತೆಯಿಂದ ದಿವ್ಯ ತೇಜಸ್ಸನ್ನು ಪಡೆದು ದೇಶಪ್ರೇಮ, ರಾಷ್ಟ್ರಾಭಿಮಾನ ಹಾಗೂ ರಾಷ್ಟ್ರೀಯ ಏಕತೆಗೆ ತೊಡಗಿಸಿಕೊಳ್ಳಬೇಕು. ಸಿಂಹದ ಧ್ವನಿ, ಗರುಡ ಬಲದೊಂದಿಗೆ ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂದರು. ಆಡಳಿತ ಮಂಡಳಿ ಸದಸ್ಯ ರೇಣು, ವಿದ್ಯಾರ್ಥಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ಆತ್ಮವಿಶ್ವಾಸ, ನಂಬಿಕೆ ಯುವ ಜನರ ಮೂಲ ಮಂತ್ರ: ಶಿಕ್ಷಕ ಉಮೇಶ್

• ಉದಯವಾಹಿನಿ, ಕೈವಾರ

ಧೈರ್ಯ, ಆತ್ಮವಿಶ್ವಾಸ, ಸರ್ವಧರ್ಮ ಸಮ್ಮತಿ , ಯುವಶಕ್ತಿಯನ್ನು ಜಾಗೃತಿಗೊಳಿಸುವುದು ಸ್ವಾಮಿ ವಿವೇಕಾನಂದರ ಆಶಯವಾಗಿತ್ತು ಎಂದು ಶಿಕ್ಷಕ ಉಮೇಶ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕೈವಾರದ ಅಂಬೇಡ್ಕರ್ ಅನುದಾನಿತ ಶಾಲೆಯಲ್ಲಿ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 163ನೇ ಜಯಂತಿಯಲ್ಲಿ ಮಾತನಾಡಿದರು. ಮುಖ್ಯ ಶಿಕ್ಷಕ ಸುರೇಶ ಮಾತನಾಡಿ, ಸ್ವಾಮಿ ವಿವೇಕಾನಂದರು ಭಾರತದ ಯುವಕರಿಗೆ ಸ್ಫೂರ್ತಿ. ಅವರ ಜಯಂತಿಯನ್ನು ರಾಷ್ಟ್ರೀಯ ಯುವ ದಿನ ಎಂದು 1984ರಲ್ಲಿ ಭಾರತ ಸರ್ಕಾರ ಘೋಷಣೆ ಮಾಡಿತು.

ಅವರು ಅರ್ಧ ಆಯುಷ್ಯನಲ್ಲಿ ಇಡೀ ಭಾರತ ದೇಶವನ್ನು ಕಾಲ್ನಡಿಗೆಯಲ್ಲಿ ಸುತ್ತಿ ಬಡತನ ನಿರ್ಮೂಲನೆ ಮತ್ತು ಎಲ್ಲರಿಗೂ ಶಿಕ್ಷಣ ಸಿಗುವಂತೆ ಜಾಗೃತಿ ಮೂಡಿಸಿದ ಮಹಾನ್ ಸಂತ ಎಂದರು.

# ನಗರದಲ್ಲಿ ಒತ್ತುವರಿ ತೆರವು ಆರಂಭ

• ಉದಯವಾಹಿನಿ, ಮಂಡ್ಯ

ನಗರದಲ್ಲಿ ಒತ್ತುವರಿಯಾಗಿದ್ದ ಹೆದ್ದಾರಿಯ ಪಾದಚಾರಿ ಮಾರ್ಗದ ಸ್ಥಳ ತೆರವಿಗೆ ನಗರಸಭೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಪೊಲೀಸ್ ಬಂದೋಬಸ್ತ್‌ನಲ್ಲಿ ಒತ್ತುವರಿ ಸ್ಥಳಗಳನ್ನು ಜೆಸಿಬಿ ಮೂಲಕ ತೆರವುಗೊಳಿಸುವ ಕಾರ್ಯಾಚರಣೆ ಆರಂಭಿಸಿದರು.



ಪಾದಚಾರಿ ಮಾರ್ಗದುದ್ದಕ್ಕೂ ಅಳವಡಿಸಿದ್ದ ಖಾಸಗಿ ಟೆಂಟ್ ಶೀಟ್‌ಗಳನ್ನು ತೆರವುಗೊಳಿಸಲಾಯಿತು. ಹೆದ್ದಾರಿಯ ಮಧ್ಯ ಭಾಗದಿಂದ 20 ಮೀಟರ್ ಅಂತರದವರೆಗೆ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿ, ಏಳು ದಿನಗಳೊಳಗೆ ಸ್ವಯಂಪ್ರೇರಿತವಾಗಿ ತೆರವು ಮಾಡಲು ಅವಕಾಶ ಕಲ್ಪಿಸಲಾಯಿತು.

# ವಿವಸ್ತ್ರ ಪ್ರಕರಣ: ಗೃಹ ಸಚಿವರ ರಾಜೀನಾಮೆಗೆ ಬಿಜೆಪಿ ಒತ್ತಾಯ

## ಬಿಜೆಪಿ ಮುಖಂಡರು, ಕಾರ್ಯಕರ್ತರು ಪಕ್ಷದ ಓಂಶಕ್ತಿ ಚಲಪತಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಆರುಣಮ್ಮ ಪ್ರತಿಭಟನೆ

• ಉದಯವಾಹಿನಿ, ಕೋಲಾರ

ಹುಬ್ಬಳ್ಳಿಯಲ್ಲಿ ಪಕ್ಷದ ಕಾರ್ಯಕರ್ತೆಯನ್ನು ವಿವಸ್ತ್ರಗೊಳಿಸಿ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಮಹಿಳಾ ಮೋರ್ಚಾ ನೇತೃತ್ವದಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು, ಮುಖಂಡರು ಜಿಲ್ಲಾಡಳಿತ ಭವನ ಎದುರು ಪ್ರತಿಭಟನೆ ನಡೆಸಿದರು. ಘಟನೆಗೆ ಸಂಬಂಧಿಸಿದಂತೆ ನೈತಿಕ ಹೊಣೆ ಹೊತ್ತು ಗೃಹ ಸಚಿವ ಜಿ.ಪರಮೇಶ್ವರ್ ಕೂಡಲೇ ರಾಜೀನಾಮೆ ನೀಡಬೇಕು. ಅಧಿಕಾರಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿ ರಾಜ್ಯಪಾಲರಿಗೆ ಜಿಲ್ಲಾಧಿಕಾರಿ ಎಂ.ಆರ್.ರವಿ ಮೂಲಕ ಮನವಿ ಪತ್ರ ಸಲ್ಲಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಓಂಶಕ್ತಿ ಚಲಪತಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಅರುಣಮ್ಮ, ಕೆಜಿಎಫ್‌ನ ಅಶ್ವಿನಿ ಸಂಪಂಗಿ ನೇತೃತ್ವದಲ್ಲಿ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಜ.5 ರಂದು ಹುಬ್ಬಳಿಯಲ್ಲಿ ನಡೆದ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂಥದ್ದು. ಪೊಲೀಸರು ಬಿಜೆಪಿ ಕಾರ್ಯಕರ್ತೆ ಸುಜಾತಾ ಹಂಡಿ ಅವರನ್ನು ಮಧ್ಯರಾತ್ರಿ 2 ಗಂಟೆಯಲ್ಲಿ ಮನೆಗೆ ಹೋಗಿ ಬಂಧಿಸಿದ್ದಾರೆ. ಅಲ್ಲದೆ, ಮಹಿಳೆಯನ್ನು ಬಂಧಿಸುವ ಸಂದರ್ಭದಲ್ಲಿ ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

ರಾಜಕೀಯ ದ್ವೇಷಕ್ಕಾಗಿ ಒಬ್ಬ ಮಹಿಳೆ ಮೇಲೆ ಸಾರ್ವಜನಿಕವಾಗಿ ದೌರ್ಜನ್ಯ ಎಸಗಿರುವುದು ಅಕ್ಷಮ್ಯ ಅಪರಾಧವಾಗಿದೆ. ಈ ರೀತಿ ದೌರ್ಜನ್ಯ ನಡೆಸಿದ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಬೇಕು. ಸುಜಾತಾ ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದ್ದು, ಈಚೆಗೆ ಬಿಜೆಪಿ ಸೇರಿದ್ದಾರೆಂಬ ರಾಜಕೀಯ ದ್ವೇಷಕ್ಕಾಗಿ ಕಾಂಗ್ರೆಸ್ ಕಾರ್ಪೊರೇಟರ್ ಸುವರ್ಣ ಎಂಬುವರ ಸುಳ್ಳು ದೂರಿನ ಮೇಲೆ ಪ್ರಕರಣ ದಾಖಲಿಸಿ ದೌರ್ಜನ್ಯ ಎಸಗುವಂತೆ ಮಾಡಿದ್ದಾರೆ ಎಂದು ದೂರಿದರು. ಓಂಶಕ್ತಿ ಮಾಲಾಧಾರಿಣಿಗಳ ಮೇಲೆ ಕಲ್ಲು ಎಸೆತ ಪ್ರಕರಣ, ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಿನೇದಿನೇ ಹೆಚ್ಚಾಗುತ್ತಿದ್ದರೂ ಸಚಿವರು ಪೊಲೀಸರನ್ನು ಎಚ್ಚರಿಸುವ ಕೆಲಸ ಮಾಡುತ್ತಿಲ್ಲ. ರಾಜಕೀಯ ದ್ವೇಷ ತೀರಿಸಿಕೊಳ್ಳಲು ಪೊಲೀಸ್ ಇಲಾಖೆಯನ್ನು ಏಜೆಂಟ್ ಮಾದರಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಗೃಹ ಸಚಿವರಿಗೆ ತಮ್ಮ ಇಲಾಖೆಯ ಮೇಲೆ ಹಿಡಿತ ಇಲ್ಲವಾಗಿರುವುದು ಅವರ ಬೇಜವಾಬ್ದಾರಿ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗದೆ ಗೂಂಡಾಗಿರಿಗೆ ಶ್ರೀರಕ್ಷೆ ನೀಡುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು. ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ವಿಜಯಕುಮಾರ್, ಕೆಂಬೋಡಿ ನಾರಾಯಣಸ್ವಾಮಿ, ಸಾಮ ಅನಿಲ್ ಬಾಬು, ಶಿವಕುಮಾರ್ ಪಿ., ಸುಗಟೂರು ಚಂದ್ರಶೇಖರ್, ರಾಜೇಶ್ ಸಿಂಗ್, ಕೆಂಬೋಡಿ ನಾರಾಯಣಸ್ವಾಮಿ, ಓಹಿಲೇಶ್, ಅಂಬರೀಷ್, ಮಮತಮ್ಮ, ರಾಜೇಶ್ವರಿ, ಪದ್ಮಾ, ಸುಮಾ, ಸವಿತಾ ಇದ್ದರು.

> ಮಹಿಳೆಯರನ್ನು ರಕ್ಷಿಸಬೇಕಾದ ಪೊಲೀಸರೇ ದೌರ್ಜನ್ಯ ನಡೆಸಿದರೆ ಇನ್ನಾರೂ ರಕ್ಷಣೆ ನೀಡುತ್ತಾರೆ ಈ ಸರ್ಕಾರ ಹಾಗೂ ಗೃಹ ಸಚಿವರು ಇದ್ದರೆಷ್ಟು, ಹೋದರೆಷ್ಟು ಅವರ ಕೈಯಲ್ಲಿ ಮಹಿಳೆಯರಿಗೆ ರಕ್ಷಣೆ ಸಾಧ್ಯವಾಗದಿದ್ದರೆ ರಾಜೀನಾಮೆ ನೀಡಿ ತೊಲಗಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

> ಈ ಪ್ರಕರಣವನ್ನು ತನಿಖೆ ನಡೆಸಿ ಮುಂದೆ ಈ ರೀತಿ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಅನ್ಯಾಯಕ್ಕೆ ಒಳಗಾಗಿರುವ ಬಿಜೆಪಿ ಕಾರ್ಯಕರ್ತೆಗೆ ಸಾಮಾಜಿಕ ನ್ಯಾಯ ದೊರಕಿಸಬೇಕೆಂದು ಆಗ್ರಹಿಸಿದರು. ಸುಳ್ಯದ ಬಿಜೆಪಿ ಶಾಸಕಿಗೆ ಶ್ರದ್ಧಾಂಜಲಿ ಪೋಸ್ಟ್ ಹಾಕಿರುವವರನ್ನೂ ಕೂಡಲೇ ಬಂಧಿಸಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಜಿಲ್ಲಾಧಿಕಾರಿಯು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿ ಸರ್ಕಾರಕ್ಕೆ ರವಾನಿಸುವುದಾಗಿ ತಿಳಿಸಿದರು.

## ಮಿನಿ ನ್ಯೂಸ್

### ಹಿಟ್ ಅಂಡ್ ರನ್ಗೆ ಗುಳ್ಳೆ ನರಿ ಸಾವು : ಕಗ್ಗಳದಹುಂಡಿ ಸಮೀಪ ಘಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಕಗ್ಗಳದಹುಂಡಿ ಸಮೀಪ ರಸ್ತೆ ದಾಟುತ್ತಿದ್ದ ಗುಳ್ಳೆನರಿ ಹಿಟ್ ಅಂಡ್ ರನ್ಗೆ ಸಾವನ್ನಪ್ಪಿರುವ ಘಟನೆ ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವಲಯದಲ್ಲಿ ನಡೆದಿದೆ. ತಾಲ್ಲೂಕಿನ ಕಗ್ಗಳದಹುಂಡಿ ಬಳಿ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದಂತ ಕಾರು ಡಿಕ್ಕಿ ಹೊಡೆದ ರಭಸಕ್ಕೆ ಗುಳ್ಳೆ ನರಿ ಅಸುನೀಗಿದೆ, ಇಂದು ಬೆಳಗ್ಗೆ ಅದೇ ಮಾರ್ಗದಲ್ಲಿ ತೆರಳುತ್ತಿದ್ದವರು ಮೃತ ನರಿಯನ್ನ ಕಂಡು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ, ವಿಚಾರ ತಿಳಿದು ಘಟನಾ ಸ್ಥಳಕ್ಕೆ ತೆರಳಿದ ಸಿಬ್ಬಂದಿ ನರಿಯ ಮೃತದೇಹವನ್ನ ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ.

ವಾಹನಗಳ ವೇಗಕ್ಕೆ ಗುಳ್ಳೆ ನರಿ ಬಲಿಯಾಗಿರುವುದು ಬೇಸರದ ಸಂಗತಿಯಾಗಿದೆ, ವನ್ಯಪ್ರಾಣಿಗಳ ಸಂರಕ್ಷಣೆ ಜವಬ್ದಾರಿ ಅರಿಯಬೇಕಿದ್ದವರೆ ಇಂತಹ ಘಟನೆಗಳಿಗೆ ಕಾರಣವಾಗುತ್ತಿರುವುದು ಕಳವಳಕಾರಿ, ಸಾಮಾನ್ಯವಾಗಿ ರೈತರ ಜಮೀನುಗಳಲ್ಲಿ ಬೀಡು ಬಿಡುವ ಗುಳ್ಳೆನರಿ ಕಾಡು ಬೆಕ್ಕುಗಳು ರಸ್ತೆ ದಾಟಿ ಬೇರೆಡೆ ಸಾಗುತ್ತವೆ ಇಂತಹ ಸಂದರ್ಭದಲ್ಲಿ ವಾಹನಗಳ ರಭಸಕ್ಕೆ ಸಿಲುಕಿ ಸಾವನ್ನಪ್ಪುತ್ತಿರುವ ಪ್ರಕರಣ ಹೆಚ್ಚಾಗತೊಡಗಿವೆ ಆದುದರಿಂದ ಗ್ರಾಮಾಂತರ ಪ್ರದೇಶದ ರಸ್ತೆಗಳಲ್ಲಿ ಹಗಲು ವೇಳೆಯಲ್ಲಿ ವನ್ಯಜೀವಿಗಳ ಸಂಚಾರ ಸಾಧ್ಯತೆ ಇರುವ ಕಡೆ ವಾಹನಗಳ ವೇಗಕ್ಕೆ ಕಡಿವಾಣ ಹಾಕುವ ಕೆಲಸವಾಗಬೇಕಿದೆ, ರೈತರ ಜಮೀನುಗಳಲ್ಲಿ ಬೀಡುಬಿಡುವ ಪ್ರಾಣಿಗಳ ಚಲನವಲನ ಕುರಿತಾಗಿ ಅರಣ್ಯ ಇಲಾಖೆ ಜಾಗೃತಿ ಮೂಡಿಸಬೇಕು ಎಂದು ಪರಿಸರವಾದಿ ಮಂಜುನಾಥ್ ಒತ್ತಾಯಿಸಿದ್ದಾರೆ.

### ರಾಮೋತ್ಸವ : ಜ.18 ರಂದು ಅಲ್ಪಸಂಖ್ಯಾತ ಮಹಿಳೆಯರಿಗಾಗಿ ಮೆಹಂದಿ ಸ್ಪರ್ಧೆ

• ಉದಯವಾಹಿನಿ, ರಾಮನಗರ

ರಾಮೋತ್ಸವದ ಅಂಗವಾಗಿ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರಲ್ಲಿನ ಪ್ರತಿಭೆ ಹೊರ ತರಲು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಮೆಹಂದಿ ಸ್ಪರ್ಧೆ ಆಯೋಜಿಸಿದ್ದಾರೆ ಎಂದು ಕಾಂಗ್ರೆಸ್ ಸಮಿತಿ ನಗರ ಯುವ ಘಟಕದ ಅಧ್ಯಕ್ಷ ಎಂ.ಮುಷೀರ್ ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಎಂ.ಮುಷೀರ್ , ರಾಮನಗರ ಕ್ಷೇತ್ರದ ಶಾಸಕ ಎಚ್.ಎ.ಇಕ್ಬಾಲ್‌ಹುಸೇನ್ ಅವರ ಸಾರಥ್ಯದಲ್ಲಿ ನಾಲ್ಕು ದಿನಗಳ ಕಾಲ ಹಲವು ಸಾಂಸ್ಕೃತಿಕ ಮತ್ತು ಕ್ರೀಡಾ ಉತ್ಸವಗಳು ಹಾಗೂ ಎಲ್ಲಾ ವಯಸ್ಸಿನವರಿಗೂ ಒಂದಲ್ಲಾ ಒಂದು ಕಾರ್ಯಕ್ರಮ ಆಯೋಜಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಮನೆಗೊಂದು ರಂಗೋಲಿ ಸ್ಪರ್ಧೆ ನಡೆಸಿದ್ದು, ಇದೀಗ ನಗರದಲ್ಲೂ ರಂಗೋಲಿ ಸ್ಪರ್ಧೆ ನಡೆಯಲಿದೆ. ವಿಶೇಷವಾಗಿ ಅಲ್ಪಸಂಖ್ಯಾತ ಮಹಿಳೆಯರು ಮತ್ತು ಮಕ್ಕಳಲ್ಲಿನ ಪ್ರತಿಭೆಯನ್ನು ಅನಾವರಣ ಮಾಡಲು ಮೆಹಂದಿ ಸ್ಪರ್ಧೆ ಮೂಲಕ ವೇದಿಕೆ ಕಲ್ಪಿಸಲಾಗುತ್ತಿದೆ ಎಂದರು. ಜ.18 ರಂದು 10 ಗಂಟೆಗೆ ನಗರದ ನಾಲ್ಕು ಸ್ಥಳಗಳಲ್ಲಿ ಮೆಹಂದಿ ಸ್ಪರ್ಧೆ ನಡೆಯಲಿದ್ದು, ಟಿಪ್ಪುನಗರದ ಯೂನಿವರ್ಸಲ್ ಶಾಲೆ, ಮೆಹಬೂಬ್ ನಗರದ ಮರಿಯಂ ಶಾಲೆ, ಐಜೂರು ಸರ್ಕಾರಿ ಉರ್ದು ಶಾಲೆ ಹಾಗೂ ಮೆಹಬೂಬ್ ನಗರದ ರಾಯಲ್ ಇಂಗ್ಲೀಷ್ ಶಾಲೆಯಲ್ಲಿ ಮೆಹಂದಿ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 5 ಸಾವಿರ ರು, ದ್ವಿತೀಯ ಬಹುಮಾನ 3 ಸಾವಿರರು, ತೃತೀಯ ಬಹುಮಾನ 2 ಸಾವಿರರ, ಭಾಗವಹಿಸಿದ ಎಲ್ಲರಿಗೂ ನೆನಪಿನ ಕಾಣಿಕೆ ವಿತರಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವವರು ದೂ. 7795936203, 7022659149, 7892821713 ಸಂಖ್ಯೆಗಳಿಗೆ ಕರೆ ಮಾಡಿ ಹೆಸರು ನೊಂದಾಯಿಸಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವಂತೆ ಎಂ.ಮುಷೀರ್ ಮನವಿ ಮಾಡಿದ್ದಾರೆ.

### ಯುವಜನರ ಸ್ಫೂರ್ತಿಯ ಚಿಲುಮೆ ವಿವೇಕಾನಂದ: ಜಿಲ್ಲಾಧಿಕಾರಿ ಕುಮಾರ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಸ್ವಾಮಿ ವಿವೇಕಾನಂದರ ಆದರ್ಶ, ಚಿಂತನೆ, ಮೌಲ್ಯಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ದೇಶಕ್ಕೆ ಮಾದರಿ ವ್ಯಕ್ತಿಗಳಾಗಬೇಕು ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಂಡ್ಯ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 163ನೇ ಜನ್ಮ ದಿನೋತ್ಸವದ ಅಂಗವಾಗಿ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಯುವ ದಿನವನ್ನು ಉದ್ಘಾಟಿಸಿ ಮಾತನಾಡಿದರು. ಸ್ವಾಮಿ ವಿವೇಕಾನಂದರು ಅಮೆರಿಕದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ, ಇಡೀ ಜಗತ್ತು ಭಾರತದತ್ತ ತಿರುಗಿ ನೋಡುವಂತೆ ಮಾಡಿದರು. ಯುವಕ ಯುವತಿಯರಿಗೆ ಸ್ಪಷ್ಟವಾದ ಗುರಿ, ನಂಬಿಕೆ, ಆತ್ಮವಿಶ್ವಾಸ ಇರಬೇಕು. ಸಮಾಜದಲ್ಲಿ ಬುದ್ಧಿವಂತರಾಗಿ ಪ್ರಜ್ಞಾವಂತರಾಗಿ ಮತ್ತು ಹೃದಯವಂತಿಕೆಯಿಂದ ಬದುಕಬೇಕು ಎಂದು ಹೇಳಿದರು. ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ. ಶಿವಚಿತ್ತಪ್ಪ ಮಾತನಾಡಿ, ಸ್ವಾಮಿ ವಿವೇಕಾನಂದರು ಯುವಜನತೆಗೆ ಸ್ಫೂರ್ತಿ. ಎಷ್ಟು ವರ್ಷ ಸೇವೆ ಸಲ್ಲಿಸುತ್ತೇವೆ ಎಷ್ಟು ವರ್ಷ ಜೀವಿಸುತ್ತೇವೆ ಎನ್ನುವುದು ಮುಖ್ಯವಲ್ಲ ನಮ್ಮ ಅವಧಿಯಲ್ಲಿ ಎಷ್ಟು ಕೆಲಸ ಕಾರ್ಯಗಳು ಆಗಿವೆ ಎನ್ನುವುದು ಮುಖ್ಯ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ವಿ.ಜೆ.ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಇತಿಹಾಸ ತಿಳಿಯದವರು ಇತಿಹಾಸವನ್ನು ಸೃಷ್ಟಿಸಲಾರರು.

# ಅಂತರಾಳದಿಂದ... EDITORIAL

## ವನ್ಯಜೀವಿಗಳಿಗೆ ಬದುಕುವ ಹಕ್ಕಿಲ್ಲವೇ?

ರಾಜ್ಯದಲ್ಲಿ ಇತ್ತೀಚೆಗೆ ಹುಲಿ, ಆನೆ, ಚಿರತೆಗಳು ಜನವಸತಿ ಪ್ರದೇಶಗಳಿಗೆ ಬಂದು ಕುರಿ, ಕೋಳಿಗಳನ್ನು ತಿನ್ನುತ್ತಿರುವ, ಕೆಲವು ಕಡೆ ಜನರ ಮೇಲೂ ದಾಳಿ ಮಾಡುತ್ತಿರುವ ಘಟನೆಗಳು ವರದಿಯಾಗುತ್ತಲೇ ಇವೆ. ವನ್ಯಜೀವಿಗಳು ಹಾಗೂ ಮನುಷ್ಯರ ಸಂಘರ್ಷ ಈಗ ಸಾಮಾನ್ಯ ಸಂಗತಿಯಾಗಿದೆ. ಇತ್ತೀಚೆಗೆ ಹುಬ್ಬಳ್ಳಿಯ ಗೋಕುಲ ರಸ್ತೆಯ ವಿಮಾನ ನಿಲ್ದಾಣದ ಆವರಣದಲ್ಲಿ ರಾತ್ರಿ ಚಿರತೆ ಕಾಣಿಸಿಕೊಂಡ ದೃಶ್ಯ ಕ್ಯಾಮರಾ ಸೆರೆ ಹಿಡಿದು ಆತಂಕವನ್ನು ಉಂಟು ಮಾಡಿತ್ತು. ಬಿಳಿಗಿರಿ ರಂಗನ ಬೆಟ್ಟದಲ್ಲಿ ಹುಲಿಗಳು ಕಾಣಿಸಿಕೊಳ್ಳುವುದು ಸಾಮಾನ್ಯ ಸಂಗತಿಯಾಗಿದೆ. ಆನೆಗಳು ಆಗಾಗ ಹಾಸನ ಜಿಲ್ಲೆಯ ಕೆಲವೆಡೆ ಕಾಣಿಸಿಕೊಂಡು ಕೆಲವರ ಮೇಲೆ ದಾಳಿ ಮಾಡಿದ ಘಟನೆಗಳು ಸಾಮಾನ್ಯವಾಗಿ ವರದಿಯಾಗುತ್ತಿವೆ. ಇದು ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ. ಇದಕ್ಕೆ ಕಾರಣವನ್ನು ಹುಡುಕಲು ಹೊರಟರೆ ಹಲವಾರು ವಾಸ್ತವ ಸಂಗತಿಗಳು ಬೆಳಕಿಗೆ ಬರುತ್ತವೆ.

ಶತಮಾನಗಳಿಂದ ನಾಡಿನಲ್ಲಿರುವ ಮನುಷ್ಯರು ಹಾಗೂ ಕಾಡಿನಲ್ಲಿರುವ ಪ್ರಾಣಿಗಳು ಸಹಬಾಳ್ವೆ ನಡೆಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದಷ್ಟೇ ಅಲ್ಲ. ಅರಣ್ಯ ಪ್ರದೇಶಗಳಲ್ಲಿ ಬದುಕು ಕಟ್ಟಿಕೊಂಡ ಜನರಿಗೂ ಹಾಗೂ ಪ್ರಾಣಿಗಳಿಗೂ ಸಂಘರ್ಷ ನಡೆದ ಉದಾಹರಣೆಗಳು ತುಂಬಾ ವಿರಳ. ಆದರೆ ಇತ್ತೀಚಿನ ವರ್ಷಗಳಲ್ಲಿ ವನ್ಯಜೀವಿಗಳು ಹಾಗೂ ಮನುಷ್ಯರ ನಡುವೆ ಯಾಕೆ ಸಂಘರ್ಷ ನಡೆಯುತ್ತಿದೆ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಈ ಪ್ರಶ್ನೆಗೆ ಉತ್ತರ ಕಂಡುಕೊಂಡರೆ ಪರಿಹಾರದ ದಾರಿ ಗೋಚರಿಸಬಹುದು.ಹುಲಿಗಳಿಗೆ ಅವುಗಳದೇ ಆದ ನಿರ್ದಿಷ್ಟ ಪ್ರದೇಶವಿದೆ. ಆನೆಗಳು ಓಡಾಡಲು ಅವುಗಳದೇ ಆದ ನಿಸರ್ಗ ಸಹಜ ಕಾರಿಡಾರುಗಳಿವೆ. ಈಗ ಇವೆಲ್ಲವನ್ನೂ ಆಕ್ರಮಿಸಿಕೊಂಡ ಮನುಷ್ಯ ಅವುಗಳ ಸಹಜ ಬದುಕಿಗೆ, ನೆಮ್ಮದಿಗೆ ಧಕ್ಕೆ ಉಂಟು ಮಾಡಿದ್ದಾನೆ. ಹೀಗಾಗಿ ಈ ಪ್ರಾಣಿಗಳು ಹಾಗೂ ಮನುಷ್ಯರ ನಡುವಿನ ಸಂಘರ್ಷ ನಿತ್ಯದ ಸಂಗತಿಯಾಗಿದೆ. ನಾವು ಇಂಥ ಪ್ರಶ್ನೆಗಳು ಎದುರಾದಾಗ ಮನುಷ್ಯ ಕೇಂದ್ರಿತ ಪರಿಕಲ್ಪನೆಯ ದೃಷ್ಟಿಯಿಂದ ನೋಡುತ್ತೇವೆ. ಆದರೆ ಜೀವ ಕೇಂದ್ರಿತ ದೃಷ್ಟಿಯಿಂದ ಪರಿಹಾರವನ್ನು ಹುಡುಕಲು ಹೊರಟರೆ ದಾರಿ ಕಾಣಬಹುದು.ವನ್ಯಜೀವಿಗಳು ನಾಡಿನ ಜನವಸತಿ ಪ್ರದೇಶಗಳಿಗೆ ಬರುವ ಸಮಸ್ಯೆಗೆ ಇನ್ನೊಂದು ಕಾರಣವೂ ಇದೆ. ಕಾಡಿನಲ್ಲಿ ಅವುಗಳಿಗೆ ಸಾಕಾಗುವಷ್ಟು ಆಹಾರ ಹಾಗೂ ನೀರು ಸಿಗುತ್ತಿಲ್ಲ. ಹೀಗಾಗಿ ಅವುಗಳು ಆಹಾರ ಮತ್ತು ನೀರಿಗಾಗಿ ಜನ ವಸತಿ ಪ್ರದೇಶಗಳಿಗೆ ನುಗ್ಗುತ್ತವೆ. ಜಾಗತೀಕರಣದ ಶಕೆ ಆರಂಭವಾದ ನಂತರ ಮನುಷ್ಯರ ಅಭಿವೃದ್ಧಿಯ ಹೆಸರಿನ ನಾನಾ ಚಟುವಟಿಕೆಗಳು ನಿಧಾನವಾಗಿ ಕಾಡನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸುತ್ತಿವೆ. ಭೂಗರ್ಭವನ್ನು ಭೇದಿಸಿ ಗಣಿಗಾರಿಕೆ ಮಾಡಿ ಕೋಟ್ಯಂತರ ರೂಪಾಯಿ ಮೊತ್ತದ ಖನಿಜ ಸಂಪತ್ತನ್ನು ದೋಚುವ ಲೂಟಿಕೋರರು ನಮ್ಮ ಶಾಸನ ಸಭೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸದನವನ್ನು ತಮ್ಮ ಹಿತಾಸಕ್ತಿಗಳಿಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಮನುಷ್ಯರಂತೆ ವನ್ಯ ಜೀವಿಗಳಿಗೆ ಶಾಸನ ಸಭೆಗಳಲ್ಲಿ ಪ್ರತಿನಿಧಿಗಳಿಲ್ಲ. ಅವುಗಳ ಪರವಾಗಿ ವಾದಿಸುವವರಿಲ್ಲ. ಹೀಗಾಗಿ ಪ್ರಾಣಿಗಳನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತಿದೆ. ಮನುಷ್ಯರು ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷವನ್ನು ತಪ್ಪಿಸಲು ಕರ್ನಾಟಕ ಸರಕಾರದ ಅರಣ್ಯ ಇಲಾಖೆ ಇತ್ತೀಚೆಗೆ ಹೊಸ ಪ್ರಯೋಗಗಳನ್ನು ಮಾಡುತ್ತಿದೆ. ವನ್ಯಜೀವಿಗಳ ಚಟುವಟಿಕೆಗಳನ್ನು ಗಮನಿಸಲು ಅರಣ್ಯದ ಅಂಚಿನಲ್ಲಿರುವ ಹಳ್ಳಿಗಳಲ್ಲಿ ಎಐ ಕ್ಯಾಮರಾ ಹಾಗೂ ಕ್ಯಾಮರಾ ಟ್ರ್ಯಾಪ್ ಅಳವಡಿಸಿ ನಿಗಾ ವಹಿಸಲಾಗುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿ ಗಡಿ ಪ್ರದೇಶದಲ್ಲಿ ಗಸ್ತು ನಡೆಸುವುದು ಕೂಡ ಅರಣ್ಯ ಇಲಾಖೆಯ ಉಪಕ್ರಮವಾಗಿದೆ. ವನ್ಯಜೀವಿಗಳ ಇರುವಿಕೆಯ ಬಗ್ಗೆ ಸ್ಥಳೀಯ ನಾಗರಿಕರಿಗೆ ಮುನ್ನೆಚ್ಚರಿಕೆ ನೀಡುವುದು, ಪ್ರಾಣಿಗಳ ಧ್ವನಿಯನ್ನು ಗುರುತಿಸಿ ಅವುಗಳಂತೆ ಸದ್ದು ಮಾಡಿ ವಾಪಸ್ ಅರಣ್ಯಕ್ಕೆ ಓಡಿಸುವುದು ಇದರ ಉದ್ದೇಶವಾಗಿದೆ.ಆದರೆ ಇದಿಷ್ಟರಿಂದಲೇ ಈ ಸಮಸ್ಯೆ ನಿವಾರಣೆಯಾಗುವುದಿಲ್ಲ. ಈ ಎಲ್ಲಾ ಕ್ರಮಗಳ ಜೊತೆಗೆ ವನ್ಯಜೀವಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಪಡಿಸಬೇಕಾಗಿದೆ.ಕಾಡಿನಲ್ಲಿ ನೀರಿನ ಕೊರತೆಯನ್ನು ನಿವಾರಿಸಲು ಕಾಡಿನ ಒಳಗೆ ಹಲವಾರು ಕಡೆ ಕೆರೆಗಳನ್ನು ನಿರ್ಮಾಣ ಮಾಡಲು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆದರೆ ಅರಣ್ಯದಲ್ಲಿ ಹಲವಾರು ವರ್ಷಗಳಿಂದ ಬದುಕನ್ನು ಕಟ್ಟಿಕೊಂಡಿರುವ ಜನರನ್ನು ಬೇರೆಡೆಗೆ ಸ್ಥಳಾಂತರಿಸುವ ಅರಣ್ಯ ಇಲಾಖೆಯ ಯೋಜನೆ ಅಷ್ಟೊಂದು ಪ್ರಯೋಜನಕಾರಿಯಾದುದಲ್ಲ. ಕಾಡಿನಲ್ಲೇ ಜನಿಸಿ, ಅಲ್ಲೇ ಬದುಕನ್ನು ಕಟ್ಟಿಕೊಂಡ ಜನರನ್ನು ಬಲವಂತವಾಗಿ ಹೊರಗೆ ಹಾಕಿದರೆ ಅವರು ಬೇರೆಡೆಗೆ ಹೋಗಿ ಬದುಕನ್ನು ಕಟ್ಟಿಕೊಳ್ಳುವುದು ಸುಲಭದ ಸಂಗತಿಯಲ್ಲ ಸರಕಾರ ಕೊಡಬಹುದಾದ ಪರಿಹಾರ ಅವರಿಗೆ ನೆಮ್ಮದಿ ತರುವುದಿಲ್ಲ. ಅದರ ಬದಲಿಗೆ ಅರಣ್ಯ ಪ್ರದೇಶದಲ್ಲೇ ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ. ಈ ಭೂಮಿ ಕೇವಲ ಮನುಷ್ಯರಿಗೆ ಸೇರಿದ್ದಲ್ಲ. ಇದರ ಮೇಲೆ ಆನೆ, ಹುಲಿ, ಚಿರತೆಗಳು ಸೇರಿ ಸಕಲ ಪ್ರಾಣಿ, ಪಕ್ಷಿಗಳಿಗೂ ಹಕ್ಕಿದೆ ಎಂಬುದನ್ನು ಮರೆಯಬಾರದು. ಪ್ರಾಣಿಗಳ ಬದುಕುವ ಹಕ್ಕನ್ನು ಕಸಿದುಕೊಳ್ಳುವುದು ಸರಿಯಲ್ಲ. ಕಾರಣ ಈ ಸಮಸ್ಯೆಗೆ ಮಾನವೀಯ ಪರಿಹಾರೋಪಾಯಗಳನ್ನು ರೂಪಿಸಬೇಕಾಗಿದೆ. ಅರಣ್ಯ ಪ್ರದೇಶದಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮದ ಹೆಸರಿನ ವಿನಾಶಕಾರಿ ಕಾರ್ಯಗಳಿಂದಾಗಿ ಪ್ರಾಣಿ ಪಕ್ಷಿಗಳಿಗೆ ಮಾತ್ರವಲ್ಲ ಸಕಲ ಜೀವಿಗಳಿಗೂ ಭೂಮಿ ಅಸಹನೀಯವಾಗತೊಡಗಿದೆ.

> **ವನ್ಯಜೀವಿಗಳ ಜೊತೆಗೆ ಮಾನವನ ಸಂಘರ್ಷದ ಮೂಲವನ್ನು ಕಂಡು ಹಿಡಿಯಲು ಹೊರಟರೆ ಆರೋಪಿಯ ಸಾಲಿನಲ್ಲಿ ಮನುಷ್ಯರೇ ಮೊದಲು ನಿಲ್ಲಬೇಕಾಗುತ್ತದೆ. ಈ ಭೂಮಿ ಮನುಷ್ಯರಿಗೆ ಮಾತ್ರವಲ್ಲ ವಿವಿಧ ಪ್ರಾಣಿಗಳಿಗೂ ಆಸರೆ ನೀಡಿದೆ. ಲಕೋಪಲಕ್ಷ ಜೀವ ಜಂತುಗಳು ಇಲ್ಲಿವೆ. ಇಲ್ಲಿವೆ. ಅವುಗಳಿಂದ ಪರಿಸರಕ್ಕೆ ಯಾವುದೇ ಹಾನಿಯಾಗಿಲ್ಲ. ಸಹ ಜೀವಿಗಳನ್ನು ಅವುಗಳು ದ್ವೇಷಿಸಿಲ್ಲ. ಆದರೆ ಮನುಷ್ಯನ ಸಂಪತ್ತಿನ ದಾಹ ಇಂದಿನ ಈ ಸ್ಥಿತಿಗೆ ಕಾರಣವಾಗಿದೆ. ತಾನು ವಾಸಿಸುವ ಪ್ರದೇಶಕ್ಕೆ ತೃಪ್ತನಾಗದೆ, ಪ್ರಾಣಿಗಳು ವಾಸಿಸುವ ಪ್ರದೇಶಕ್ಕೆ ನುಗ್ಗಿ ಕೃಷಿ, ಮನೆ, ರೆಸಾರ್ಟ್, ಹೋಮ್ ಸ್ಟೇಗಳನ್ನು ಮಾಡಿಕೊಂಡ ಮನುಷ್ಯ ಅವುಗಳ ಸಹಜ ಜೀವನದ ಪ್ರದೇಶವನ್ನು ಅಕ್ರಮಿಸಿರುತ್ತಿರುವುದರಿಂದ ಈ ಘರ್ಷಣೆ ನಡೆಯುತ್ತಿದೆ.**

• ಉದಯವಾಹಿನಿ, ವಿಶೇಷ



# ರಾಮಾಯಣ

## ಶ್ರೀರಾಮನು ಸೀತಾದೇವಿಯ ಆಭರಣಗಳನ್ನು ನೋಡಿ ದುಃಖಿಸಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ವರುಣ ದೇವೇಂದ್ರರಿಗೆ ಸಮಾನನಾದ ನಿನ್ನ ಸ್ನೇಹವನ್ನು ಪಡೆದು ನನ್ನ ಮನಸ್ಸಿಗೆ ಮಹಾ ಸಂತೋಷವಾಯಿತು. ಇಂದೇ ನನಗೆ ಶತ್ರುವಾಗಿ ವಾಲಿಯನ್ನು ಕೊಂದು ನನ್ನ ಇಷ್ಟಾರ್ಥವನ್ನು ಸಲ್ಲಿಸಿಕೊಡಬೇಕೆಂದು ನಾನು ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ ಎಂದು ನುಡಿದನು. ಶ್ರೀರಾಮನು ಸುಗ್ರೀವ ನಾನು ಇಲ್ಲಿಂದ ಕಿಂಧಾ ಪಟ್ಟಣಕ್ಕೆ ಬರುತ್ತೇನೆ. ನೀನು ಮೊದಲೇ ಹೋಗಿ ಅಣ್ಣನೆಂದು ಹೇಳಿಸಿಕೊಂಡಿರುವ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸು. ನಾನು ನಿನ್ನ ಹಿಂದುಗಡೆಯಲ್ಲಿ ಬರುತ್ತೇನೆ ಎಂದು ಹೇಳಿದನು.


ಆ ಮಾತನ್ನು ಕೇಳಿ ಸುಗ್ರೀವನು ವೇಗದಿಂದ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದು ಗರ್ಜಿಸಿದನು. ಆ ಗರ್ಜನೆಯ ಧ್ವನಿಯನ್ನು ಕೇಳಿ ವಾಲಿಯು ಅತ್ಯಂತ ಕೋಪಯುಕ್ತನಾಗಿ ಮಹಾಮೇರುಪರ್ವತದಿಂದ ಸೂರ್ಯನಂತೆ ಅರಮನೆಯಿಂದ ಹೊರಬಂದನು.

ಅನಂತರವಾಲಿ ಸುಗ್ರೀವರಿಬ್ಬರಿಗೂ ಬುಧಾಂಗಾರಕರಿಗೆ ಯುದ್ಧವಾಗುವಂತೆ ಯುದ್ಧವಾರಂಭವಾಯಿತು. ಅಂಗೈಗಳಿಂದಲೂ ವಜ್ರಾಯುಧದಂತಿರುವ ಮುಷ್ಟಿಗಳಿಂದಲೂ ಒಬ್ಬರನ್ನೊಬ್ಬರು ಹೊಯುತ್ತ ಅತ್ಯಂತ ಕೋಪಾಟೋಪದಿಂದ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಬುದ್ಧಿಯಿಂದ ಹೋರಾಡಲಾರಂಭಿಸಿದರು. ಆ ಸಮಯದಲ್ಲಿ ಶ್ರೀರಾಮನು ವಾಲಿಯನ್ನು ಕೊಲ್ಲಬೇಕೆಂದು ಉದ್ದೇಶಿಸಿ ಶರೀರಾಕಾರಸ್ವರೂಪಗಳಿಂದ ಒಬ್ಬರಿಗೊಬ್ಬರು ಭೇದವಿಲ್ಲದೆ ಅಶ್ವಿನೀದೇವತೆಗಳಂತೆ ಇದ್ದ ವಾಲಿಸುಗ್ರೀವರನ್ನು ನೋಡಿ, ಅವರಿಬ್ಬರಲ್ಲಿ ವಾಲಿ ಯಾವನು ಸುಗ್ರೀವನಾವನೆಂಬ ನನಾವನೆಂಬ ಭೇದವನ್ನು ತಿಳಿಯಲಾರದೆಯೇ ತನ್ನ ಬಾಣವನ್ನು ಬಿಲ್ಲಿಗೆ ಹೂಡದೆ ಸಂಶಯದಿಂದ ಸುಮ್ಮನಿದ್ದನು. ಅಷ್ಟರೊಳಗೆ ವಾಲಿಯು ತನ್ನ ಮುಷ್ಟಿಯಿಂದ ಸುಗ್ರೀವನನ್ನು ಹೊಡೆದನು. ಆತನ ಪೆಟ್ಟನ್ನು ತಡೆಯಲಾರದೆ ಸುಗ್ರೀವನು ಋಷ್ಯಮೂಕಪರ್ವತಕ್ಕೆ ಓಡಿಹೋದನು. ವಾಲಿಯು ಮತಂಗ ಮುನೀಶ್ವರನ ಶಾಪದಿಂದ ಭಯಪಟ್ಟು ಋಷ್ಯಮೂಕಪರ್ವತಕ್ಕೆ ಹಿಂದಟ್ಟಿ ಹೋಗದೆ ಎಲೇ ಸುಗ್ರೀವೆ ನಿನ್ನ ಮೇಲಿನ ದಯೆಯಿಂದ ಈಹೊತ್ತು ಬಿಟ್ಟೆನು ಎಂದು ನುಡಿದು ಕಿಂಧಾ ಪಟ್ಟಣಕ್ಕೆ ಹೋದನು. ಆಮೇಲೆ ಶ್ರೀರಾಮನು ಚಿಂತಾಕ್ರಾಂತನಾಗಿ ತನ್ನ ತಮ್ಮನಾದ ಲಕ್ಷ್ಮಣನನ್ನೂ ಹನುಮಂತನನ್ನೂ ಕೂಡಿಕೊಂಡು ಸುಗ್ರೀವನ ಬಳಿಗೆ ಬಂದನು. ಸುಗ್ರೀವನು ಲಜ್ಜೆಯಿಂದ ತಲೆಬಗ್ಗಿಸಿಕೊಂಡು ಶ್ರೀರಾಮ, ನನ್ನಿಂದ ವಾಲಿಯನ್ನು ಯುದ್ಧಕ್ಕೆ ಕರೆಯಿಸಿದೆ. ನಿನ್ನ ಪರಾಕ್ರಮವನ್ನು ತೋರಿಸಿದೆ. ನಾನು ಪೆಟ್ಟು ತಿನ್ನುವಂತೆ ಮಾಡಿದೆ. ಇದಲ್ಲವೆ ನೀನು ಮಾಡಿದ್ದು ನಾನು ವಾಲಿಯೊಡನೆ ಯುದ್ಧ ಮಾಡುವ ಸಮಯದಲ್ಲಿ ಆತನನ್ನು ಕೊಲ್ಲುವುದಾಗಿ ನುಡಿದು ಯುದ್ಧ ಮಾಡುತ್ತಿದ್ದ ಸಮಯದಲ್ಲಿ ಕೊಲ್ಲದೆ ಸುಮ್ಮನಿದ್ದೆ. ಇದು ನಿನಗೆ ಉಚಿತವೆ ಎಂದು ಕೇಳಿದನು. ಶ್ರೀರಾಮನು ಹೀಗೆ ಉತ್ತರ ಹೇಳಿದನು: ಸುಗ್ರೀವ, ನನ್ನ ಮಾತನ್ನು ಕೇಳು. ಕೋಪಮಾಡಿ ಕೊಳ್ಳಬೇಡ. ನಾನು ಯಾವ ಕಾರಣ ವಾಲಿಯ ಮೇಲೆ ಶರಸಂಧಾನವನ್ನು ಮಾಡದಿದ್ದೆನೆಂದರೆ : ನೀವಿಬ್ಬರೂ ತೊಟ್ಟ ಆಭರಣಗಳಿಂದಲೂ ಶರೀರಾಕಾರಗಳಿಂದಲೂ ನಡೆಯಿಂದಲೂ ಮಾತಿನಿಂದಲೂ ನೋಟದಿಂದಲೂ ಪರಾಕ್ರಮದಿಂದಲೂ ಸಮಾನರಾಗಿದ್ದೀರಿ.

**ಮುಂದುವರಿಯುವುದು...**



☛ ವಿಶ್ವಾಸ್.ಡಿ.ಗೌಡ



# ಮಕರ ಜ್ಯೋತಿ ಆತ್ಮಜಾಗೃತಿಯ ದೀಪ

• ಉದಯವಾಹಿನಿ, ವಿಶೇಷ

ಕೇರಳ ರಾಜ್ಯದ ಪಥನಂತಿಟ್ಟ ಜಿಲ್ಲೆಯ ಪಶ್ಚಿಮಘಟ್ಟಗಳ ಅರಣ್ಯ ಮಧ್ಯೆ ಸ್ಥಿತವಾಗಿರುವ ಪವಿತ್ರ ಶಬರಿಮಲೆ ಕೇವಲ ಒಂದು ದೇವಸ್ಥಾನವಲ್ಲ; ಅದು ನಂಬಿಕೆ, ಸಂಯಮ, ತ್ಯಾಗ ಮತ್ತು ಸಮಾನತೆಯ ಜೀವಂತ ಪ್ರತೀಕ. ಈ ಮಹಾತೀರ್ಥ ಕ್ಷೇತ್ರದಲ್ಲಿ ಪ್ರತಿ ವರ್ಷ ಮಕರ ಸಂಕ್ರಾಂತಿ ದಿನ ಕಾಣಿಸಿಕೊಳ್ಳುವ ಮಕರ ಜ್ಯೋತಿ (ಮಕರ ವಿಲಕ್ಕು) ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಅತ್ಯಂತ ವಿಶಿಷ್ಟ ಮತ್ತು ಭಾವಪೂರ್ಣ ಘಟನೆಗಳಲ್ಲಿ ಒಂದಾಗಿದೆ.

**ಮಕರ ಜ್ಯೋತಿ ಎಂದರೇನು?:** ಮಕರ ಸಂಕ್ರಾಂತಿಯ ಸಂಜೆ, ಶಬರಿಮಲೆಯ ಎದುರಿನ ಪೊನ್ನಂಬಳಮೇಡು ಪರ್ವತ ಪ್ರದೇಶದಲ್ಲಿ ಕಾಣಿಸಿಕೊಳ್ಳುವ ದಿವ್ಯ ಪ್ರಕಾಶವನ್ನೇ ಮಕರ ಜ್ಯೋತಿ ಎಂದು ಕರೆಯಲಾಗುತ್ತದೆ. ಸೂರ್ಯಾಸ್ತದ ನಂತರ, ಸಾವಿರಾರು ಅಯ್ಯಪ್ಪ ಭಕ್ತರು ''ಸ್ವಾಮಿ ಶರಣಂ ಅಯ್ಯಪ್ಪ'' ಎಂಬ ನಾಮಸ್ಮರಣೆಯೊಂದಿಗೆ ಆಕಾಶದತ್ತ ದೃಷ್ಟಿ ನೆಟ್ಟು ನಿಂತಿರುವಾಗ, ಕ್ಷಣಮಾತ್ರಕ್ಕೆ ಹೊಮ್ಮುವ ಆ ಜ್ಯೋತಿ ಭಕ್ತರ ಮನಸ್ಸಿನಲ್ಲಿ ಅಚಲವಾದ ಭಕ್ತಿಭಾವವನ್ನು ಉಂಟುಮಾಡುತ್ತದೆ.

**ಧಾರ್ಮಿಕ ಹಿನ್ನೆಲೆ ಮತ್ತು ನಂಬಿಕೆ:** ಪುರಾಣಿಕ ನಂಬಿಕೆಯ ಪ್ರಕಾರ, ಮಕರ ಸಂಕ್ರಾಂತಿಯಂದು ದೇವತೆಗಳು ಅಯ್ಯಪ್ಪ ಸ್ವಾಮಿಯನ್ನು ದರ್ಶನ ಮಾಡಲು ಭೂಮಿಗೆ ಆಗಮಿಸುತ್ತಾರೆ. ಆ ದಿವ್ಯ ಕ್ಷಣದ ಸಂಕೇತವೇ ಮಕರ ಜ್ಯೋತಿ ಎಂದು ಭಕ್ತರು ನಂಬುತ್ತಾರೆ. ಇದು ಅಯ್ಯಪ್ಪ ಸ್ವಾಮಿಯ ಅನುಗ್ರಹದ ಸೂಚಕ, ತಪಸ್ಸಿನ ಪರಾಕಾಷ್ಠೆಯ ಪ್ರತೀಕ ಎಂದು ಭಾವಿಸಲಾಗುತ್ತದೆ.

ಸಮಾಜದಲ್ಲಿ ಮೂಡುವ ಜ್ಯೋತಿ ? ಒಂದು ಸಮಾನತೆಯ ಸಂಕೇತ


ಮಕರ ಜ್ಯೋತಿಯ ಮಹತ್ವ ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗಿಲ್ಲ. ಅದು ಸಮಾಜದಲ್ಲಿ ಒಂದು ವಿಶಿಷ್ಟ ಸಂದೇಶವನ್ನು ಸಾರುತ್ತದೆ. ಶಬರಿಮಲೆ ಯಾತ್ರೆಯ ವೈಶಿಷ್ಟ್ಯವೇ ಸ್ವಾಮಿ ಎಂಬ ಒಂದೇ ಪದದಿಂದ ಎಲ್ಲರೂ ಪರಸ್ಪರರನ್ನು ಕರೆದುಕೊಳ್ಳುವುದು. ಇಲ್ಲಿ ಜಾತಿ, ವರ್ಗ, ಭಾಷೆ, ಸಂಪತ್ತು, ಹುದ್ದೆ ಎಂಬ ಯಾವುದೇ ಭೇದವಿಲ್ಲ. ಮಕರ ಜ್ಯೋತಿ ಬೆಳಗುವ ಕ್ಷಣದಲ್ಲಿ ಲಕ್ಷಾಂತರ ಜನರು ಒಂದೇ ಭಾವನೆ, ಒಂದೇ ನಂಬಿಕೆಯಲ್ಲಿ ಒಂದಾಗಿ ನಿಂತಿರುವುದು ಸಾಮಾಜಿಕ ಏಕತೆಯ ಅಪರೂಪದ ದೃಶ್ಯ.

**ಸಂಯಮ ಮತ್ತು ಆತ್ಮಶುದ್ಧಿಯ ಪ್ರತೀಕ:** 41 ದಿನಗಳ ವ್ರತಾಚರಣೆಯ ನಂತರ ಭಕ್ತರು ಶಬರಿಮಲೆಗೆ ಆಗಮಿಸುತ್ತಾರೆ. ಬ್ರಹ್ಮಚರ್ಯ, ಶುದ್ಧ ಆಹಾರ, ಸತ್ಯವಚನ, ಅಹಿಂಸೆ, ಸೇವಾಭಾವ ಈ ಎಲ್ಲಾ ಗುಣಗಳ ಅಭ್ಯಾಸವೇ ಶಬರಿಮಲೆ ವ್ರತದ ಸಾರ. ಮಕರ ಜ್ಯೋತಿ ಈ ವ್ರತದ ಸಾರ್ಥಕತೆಯನ್ನು ಸಾರುವ ಅಂತಿಮ ದೀಪದಂತೆ ಕಾಣುತ್ತದೆ. ಅದು ನಿನ್ನೊಳಗಿನ ಅಂಧಕಾರವನ್ನು ತೊರೆದು, ಜ್ಞಾನ ಮತ್ತು ಶುದ್ಧತೆಯ ಬೆಳಕನ್ನು ಅಳವಡಿಸಿಕೋ ಎಂಬ ಸಂದೇಶವನ್ನು ನೀಡುತ್ತದೆ.

**ಭಕ್ತರ ಮನಸ್ಸಿನ ಮೇಲೆ ಬೀರುವ ಪ್ರಭಾವ:** ಮಕರ ಜ್ಯೋತಿ ಕಾಣುವ ಕ್ಷಣದಲ್ಲಿ ಅನೇಕ ಭಕ್ತರ ಕಣ್ಣಲ್ಲಿ ನೀರು ಹರಿಯುತ್ತದೆ. ಅದು ಭಾವೋದ್ರೇಕ, ಕೃತಜ್ಞತೆ ಮತ್ತು ಸಂಪೂರ್ಣ ಶರಣಾಗತಿಯ ಅಭಿವ್ಯಕ್ತಿ. ಜೀವನದ ಸಂಕಷ್ಟಗಳು, ನೋವುಗಳು, ಹತಾಶೆಗಳು ಆ ಕ್ಷಣದಲ್ಲಿ ಅರ್ಥವಿಲ್ಲದಂತಾಗುತ್ತವೆ. ಮಕರ ಜ್ಯೋತಿ ಭಕ್ತನಿಗೆ ಹೊಸ ಶಕ್ತಿ, ಹೊಸ ಭರವಸೆ ಮತ್ತು ಧೈರ್ಯವನ್ನು ನೀಡುತ್ತದೆ.

**ವಿಜ್ಞಾನ? ನಂಬಿಕೆಗಳ ನಡುವಿನ ಸಂವಾದ:** ಮಕರ ಜ್ಯೋತಿಯ ಕುರಿತು ವಿವಿಧ ಅಭಿಪ್ರಾಯಗಳು ಮತ್ತು ಚರ್ಚೆಗಳು ನಡೆದಿದ್ದರೂ, ಭಕ್ತರ ದೃಷ್ಟಿಯಲ್ಲಿ ಅದರ ಆತ್ಮಾರ್ಥವೇ ಮುಖ್ಯ. ಶಬರಿಮಲೆಯ ನಂಬಿಕೆ ವಿಜ್ಞಾನಕ್ಕೆ ವಿರುದ್ಧವಲ್ಲ; ಅದು ಮಾನವನ ಅಂತರಂಗದ ಶುದ್ಧತೆ ಮತ್ತು ಶಿಸ್ತುಬದ್ಧ ಜೀವನಕ್ಕೆ ಪ್ರೇರಣೆಯಾಗುವ ಒಂದು ಸಂಕೇತ. ನಂಬಿಕೆ ಮತ್ತು ವಿವೇಕ ಒಂದೇ ನಾಣ್ಯದ ಎರಡು ಮುಖಗಳಂತೆ ಇಲ್ಲಿ ಸಹಬಾಳ್ವೆ ನಡೆಸುತ್ತವೆ.

**ಉಪಸಂಹಾರ:** ಮಕರ ಜ್ಯೋತಿ ಕೇವಲ ಒಂದು ಬೆಳಕು ಅಲ್ಲ; ಅದು ಮಾನವ ಮನಸ್ಸಿನಲ್ಲಿ ಬೆಳಗುವ ಆತ್ಮಜ್ಯೋತಿ. ಅಹಂಕಾರ, ದ್ವೇಷ, ವಿಭಜನೆಗಳಿಂದ ಬಳಲುತ್ತಿರುವ ಸಮಾಜಕ್ಕೆ ಶಬರಿಮಲೆಯ ಮಕರ ಜ್ಯೋತಿ ಏಕತೆ, ಸಂಯಮ ಮತ್ತು ಮಾನವೀಯತೆ ಎಂಬ ಮೌಲ್ಯಗಳನ್ನು ನೆನಪಿಸುವ ದಿವ್ಯ ಸಂಕೇತ. ಪ್ರತಿಯೊಬ್ಬ ಭಕ್ತನು ತನ್ನೊಳಗಿನ ಅಂಧಕಾರವನ್ನು ದೂರ ಮಾಡಿ, ಸಮಾಜದಲ್ಲಿ ಸತ್ಪ್ರಕಾಶವನ್ನು ಹರಡುವುದೇ ಮಕರ ಜ್ಯೋತಿಯ ನಿಜವಾದ ಸಂದೇಶ.



• ಉದಯವಾಹಿನಿ, ವಿಶೇಷ

# ಪಾರಂಪರಿಕವಾದ ಮಕರ ಸಂಕ್ರಾಂತಿ ಹಬ್ಬ



ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

**ಹಬ್ಬವನು ಮಾಡುವರು ಸಂತಸದಿ ಜೀವನದಿ**
**ಕಬ್ಬಿನದು ಸಿಹಿಯದುವೆ ಸವಿಯುತಲಿಯೆ**
**ಕೊಬ್ಬು ನೀ ತೋರದೆಯೆ ಸಾಗುತಿರು ಬಾಳಿನಲಿ**
**ತಬ್ಬುತಲಿ ಸಂಬಂಧ ಲಕ್ಷ್ಮಿ ದೇವಿ.......**

ಹಬ್ಬವನ್ನು ಪ್ರತಿಯೊಬ್ಬರು ಸಂತಸದಿಂದ ಆಚರಿಸುತ್ತಾರೆ. ಜೀವನ ಎಂದ ಮೇಲೆ ಬಹಳಷ್ಟು ಕಷ್ಟಪಡಲೇಬೇಕು. ಅಂತಹ ಜೀವನದಲ್ಲಿ ಕಬ್ಬಿನಲ್ಲಿರುವ ಸಿಹಿಯನ್ನು ಸವಿಯುವಂತೆ ಕೆಲವೊಮ್ಮೆ ಆದರೆ ಕೆಲವೊಮ್ಮೆ ಕಹಿಯಂತೆ ಕಷ್ಟಗಳು ಬರಬಹುದು . ಎಂದಿಗೂ ಜೀವನದಲ್ಲಿ ಕೊಬ್ಬು ತೋರದಲ್ಲೇ ನಡೆಯಬೇಕು. ಎಲ್ಲರೊಂದಿಗೆ ಹೊಂದಿಕೊಳ್ಳುತ್ತಾ ಬಾಳಬೇಕು. ಏಕೆಂದರೆ ಬಾಳು ನಶ್ವರ. ನೀರಿನ ಮೇಲಿನ ಗುಳ್ಳೆ ಇದ್ದಂತೆ. ಯಾವಾಗ ಏನು ಆಗುತ್ತದೆ ತಿಳಿಯದು. ಹೀಗೆ ನಡೆಯುತ್ತಾ ಹೋದ ಜೀವನದಲ್ಲಿ ಕೊರೊನದ ಹಾವಳಿಯ ವರ್ಷದಂದು ದುಃಖಿಯಾಗಿದ್ದ ಜನರು ಕೊರೋನಾ ನಂತರದಲ್ಲಿ ಬಂದಂತಹ ಹಬ್ಬವಾದ ಸಂಕ್ರಾಂತಿ ಹಬ್ಬವನ್ನು ಸಂತಸದಿಂದ ಪ್ರತಿಯೊಬ್ಬರು ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಬಹಳಷ್ಟು ನೋವು ಕಂಡ ಜನತೆ ಈಗ ಸ್ವಲ್ಪ ನಿಟ್ಟುಸಿರು ಬಿಡುತ್ತಿದ್ದಾರೆ. ಎಲ್ಲವೂ ದುಬಾರಿಯ ಯುಗವಾಗಿದೆ . ಆದರೂ ಸಹ ಯುಗಯುಗದಿಂದ ಆಚರಿಸಿಕೊಂಡು ಬಂದಂತಹ ಸಾಂಪ್ರದಾಯಿಕ ಹಬ್ಬವನ್ನು ಆಚರಿಸಲು ಮನೆಯಲ್ಲಿ ಎಲ್ಲಾ ಮಹಿಳೆಯರು ಮನೆ ಶುದ್ಧ ಮಾಡಿಕೊಂಡು ಹಬ್ಬಕ್ಕೆ ಬೇಕಾದ ವಸ್ತುಗಳ ಸಿದ್ಧತೆಯಲ್ಲಿ ತೊಡಗಿದ್ದಾರೆ. ಮಕರ ಸಂಕ್ರಾಂತಿ ಎಂದರೆ ಉತ್ತರಾಯಣ ಪುಣ್ಯಕಾಲದ ಮಹಾಪರ್ವ ದಿನ. ಎಲ್ಲರಿಗೂ ಸಂತಸವನ್ನು ತರುವ ಹೊಸ ಕಳೆ, ಹೊಸ ಬೆಳೆ, ಹೊಸತನವನ್ನು ಪ್ರಾರಂಭಿಸುವ ಮಕರ ಸಂಕ್ರಾಂತಿ ಹಬ್ಬವನ್ನು ರೈತಾಪಿಗಳಂತೂ ಸಂಭ್ರಮದಿಂದ ಆಚರಿಸುತ್ತಾರೆ. ರೈತರಿಗೊಂದು ಇದು ಸುಗ್ಗಿಯ ಹಬ್ಬವಾಗಿದೆ. ಎಲ್ಲೆಡೆಯೂ ರೈತರು ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಹಬ್ಬಕ್ಕೆ ರೈತರು,ಮಹಿಳೆಯರು, ಮಕ್ಕಳೆಲ್ಲ, ಹಿರಿಯರೊಂದಿಗೆ ಹೊಲದಲ್ಲಿ ಬೆಳೆದ ಬೆಳೆಯ ಜೊತೆಗೆ ಕಬ್ಬು, ಅವರೆ ಕಾಯಿ, ಕುಂಬಳೇ, ಕಡಲೆಕಾಯಿ, ಹೀಗೆ ಹಲವಾರು ವಸ್ತುಗಳು ಸಿದ್ಧಪಡಿಸಿಕೊಂಡು ಹಬ್ಬವನ್ನ ಸಂಭ್ರಮದಿಂದ ಆಚರಿಸುತ್ತಾರೆ. ಮಹಿಳೆಯರಂತೂ ಮನೆಯನ್ನು ಶುದ್ಧಪಡಿಸಿಕೊಂಡು ಕೊಬ್ಬರಿ, ಎಳ್ಳು, ಬೆಲ್ಲ, ಎಲ್ಲವನ್ನು ಕತ್ತರಿಸಿ ಬಿಸಿಲಿನಲ್ಲಿ ಒಣಗಿಸಿಕೊಂಡು ಸ್ವಚ್ಛತೆಯಿಂದ ಮಡಿ ಮೈಲಿಗೆಯಿಂದ ಹಬ್ಬಕ್ಕೆ ಸಿದ್ಧಪಡಿಸುತ್ತಾರೆ. ಅಂತೆಯೇ ನಮ್ಮ ಪುಟ್ಟ ಹೆಣ್ಣು ಮಕ್ಕಳು, ಗಂಡು ಮಕ್ಕಳು, ಹಾಗೂ ಯುವತಿಯರು ಲಂಗ ದವಣಿಗಳನ್ನು ಹಾಕಿಕೊಂಡು, ಆಭರಣಗಳನ್ನ ಹಾಕಿಕೊಂಡು, ಒಟ್ಟಾರೆ ಎಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ಹಬ್ಬದ ಸಂಜೆ ಎಲ್ಲರ ನೆಂಟರಿಷ್ಟರ, ಸ್ನೇಹಿತರ, ಹೀಗೆ ಬಂಧು ಬಾಂಧವರಿಗೆಲ್ಲರಿಗೂ ಎಳ್ಳು ಬೆಲ್ಲವನ್ನು ಹಂಚುತ್ತಾ ಖುಷಿ ಖುಷಿಯಾಗಿ ಆಟವಾಡುತ್ತಾ ಹಬ್ಬವನ್ನು ಆಚರಿಸುತ್ತಾರೆ. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು ಎಂಬ ಮಾತಿನಂತೆ ಈಗ ಚಳಿಗಾಲದ ಸಮಯ ನಮ್ಮ ಹಿರಿಯರು ಪಾರಂಪರಿಕವಾಗಿ ಆಚರಿಸುತ್ತಾ ಬರುತ್ತಿರುವ ಈ ಹಬ್ಬ ಆರೋಗ್ಯಕ್ಕೆ ಹಾನಿಯಾಗದಂತಹ ಈ ಚಳಿಗಾಲಕ್ಕೆ ಹೊಂದಿಕೊಳ್ಳುವಂತಹ ಎಳ್ಳು ಬೆಲ್ಲ ಮತ್ತು ಕೊಬ್ಬರಿಯನ್ನು ತಿನ್ನುವುದರಿಂದ ಈ ಸಮಯಕ್ಕೆ ದೇಹಕ್ಕೆ ಆರೋಗ್ಯಕರವಾಗಿರುವುದೆಂದು ಹಿರಿಕರು ಈ ವಸ್ತುಗಳನ್ನ ಪೂಜ್ಯ ಭಾವನೆಯಿಂದ ಸ್ನೇಹದಿಂದ ಒಬ್ಬರಿಗೊಬ್ಬರು ಹಂಚಿಸುವ ಕೆಲಸವನ್ನ ಮಾಡುತ್ತಿದ್ದರು. ಇದು ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಆರೋಗ್ಯವಾಗಿರುತ್ತವೆ. ಪ್ರೀತಿ ವಿಶ್ವಾಸವನ್ನು ಹೆಚ್ಚಿಸುತ್ತದೆ. ಪಾರಂಪರಿಕವಾಗಿ ಬಂದಂತಹ ಈ ಹಬ್ಬದ ಆಚರಣೆಯು ಕೆಲವು ವರ್ಷದಿಂದ ಈ ಕೊರೊನ ಎಂಬ ಮಹಾಮಾರಿಗೆ ಸಿಲುಕಿದ ಜನರೆಲ್ಲರೂ ತತ್ತರಿಸಿ ಹೋಗಿದ್ದರು. ಆ ಮಹಾಮಾರಿಯನ್ನು ತೊಲಗಿಸಿ ಈಗ ಸಂಕ್ರಾಂತಿ ಹಬ್ಬವನ್ನು ಎಲ್ಲರೂ ಸಂಭ್ರಮದಿಂದ ಆಚರಣೆ ಮಾಡುವಲ್ಲಿ ತೊಡಗಿದ್ದಾರೆ.

ಬಡವನಾಗಲಿ ಶ್ರೀಮಂತನಾಗಲಿ ಈ ಹಬ್ಬವನ್ನ ತನ್ನ ಕೈಯಲ್ಲಿ ಆಗುವಷ್ಟು ಆಚರಣೆಯನ್ನು ಮಾಡುತ್ತಾನೆ. ಎಷ್ಟೋ ಜನರು ಮಾತನಾಡದಿದ್ದರೂ ಸಹ , ಮಾತು ಬಿಟ್ಟರೂ ಸಹ ಈ ಹಬ್ಬದಿಂದ ಎಳ್ಳು ಬೆಲ್ಲವನ್ನು ಹಂಚುವುದರ ಮುಖಾಂತರ ಒಂದಾಗಿರುವ ಉದಾಹರಣೆಗಳಿವೆ. ಅದರಲ್ಲಂತೂ ನಮ್ಮ ಯುವತಿಯರು, ಮಕ್ಕಳು, ಸೀರೆ, ಬಣ್ಣ ಬಣ್ಣದ ಲಂಗ ಹಾಕಿಕೊಂಡು ಮನೆಯ ಮುಂದೆ ದೊಡ್ಡದಾದ ಬಣ್ಣದ ರಂಗೋಲಿಯನ್ನು ಹಾಕುತ್ತಾ. ರೈತರೆಲ್ಲರೂ ಬೆಳೆದ ಬೆಳೆಯನ್ನ ಚಿಗುರಿನ ಸಂಭ್ರಮದಲ್ಲಿ ಸಂತೋಷದಿಂದ ಆಚರಿಸುತ್ತಾರೆ.

**ಹಬ್ಬವನು ಸಂಭ್ರಮದಲ್ಲಿ ಆಚರಿಸುತಲಿ**
**ರೈತರೆಲ್ಲ ಬೆಳೆಗಳನ್ನು ಬೆಳೆಯುತಲಿ**
**ಪೂಜೆಯನ್ನು ಮಾಡುತಲಿ ಸಂಭ್ರಮಿಸುತ**
**ಬಾಳುತಿರು ಎಲ್ಲರೊಂದಿಗೂ ಜೊತೆಯಾಗಿರುತ**
**ಅಂದು,ಇಂದು ಎಂದು ಕಾಣುತಿರಿ ಸಂತಸದಿ**
**ನೀಡದಿರು ದ್ವೇಷ ಎಂಬ ಅಸೂಯನು**
**ಸಂಕ್ರಾಂತಿ ಹಬ್ಬದ ಎಲ್ಲರೂ ಕೂಡಿ**

ಬೆಲ್ಲವ ಹಂಚಿ ಸಂತಸವ ಪಡುತಲಿ ಕೊರಣ ನಂತರದಲ್ಲಿ ಸಂಭ್ರಮದಿಂದ ಸಂಕ್ರಾಂತಿಯನ್ನು ಆಚರಿಸುವುದು. ಎಲ್ಲರಲ್ಲಿಯೂ ಸಂತಸವನ್ನು ತಂದಿತ್ತು. ಮನೆಯಲ್ಲಿ ತಾಯಿಯು ಹಬ್ಬದ ವಿಶೇಷ ಖಾದ್ಯವಾದ ಸಿಹಿ ಹುಗ್ಗಿ, ಖಾರದ ಹುಗ್ಗಿ, ಬೇಯಿಸಿದಂತ ಅವರೆಕಾಯಿ, ಕಡಲೆಕಾಯಿ, ಗೆಣಸು, ಹೀಗೆ ಹಲವಾರು ಅಡುಗೆಗಳನ್ನು ಮಾಡುವುದರ ಮುಖಾಂತರ ಮನೆಯಲ್ಲಿ ದೇವರಿಗೆ ಪೂಜೆ ಮಾಡಿದ ನಂತರ ಹಬ್ಬದ ಅಡುಗೆಯನ್ನು ಸವಿಯಲು ನೀಡುತ್ತಾಳೆ. ನಮ್ಮ ಪಾರಂಪರಿಕವಾಗಿ ಆಚರಣೆ ಮಾಡಿಕೊಂಡು ಬರುತ್ತಿರುವ ಈ ಮಕರ ಸಂಕ್ರಾಂತಿ ಹಬ್ಬವನ್ನು ದಯಮಾಡಿ ಮೊಬೈಲ್‌ಅನ್ನು ಬಳಸಿಕೊಂಡು ಮೆಸೇಜ್ ಮೂಲಕ ಶುಭಾಶಯಗಳು ತಿಳಿಸುವುದು ಮಾಡುವುದರ ಮುಖಾಂತರ ಹಬ್ಬವನ್ನ ಆಚರಣೆಯನ್ನು ಮಾಡುವುದು ಬೇಡ. ಎಲ್ಲರ ಮನೆಗೂ ಪರಸ್ಪರ ಭೇಟಿಯನ್ನ ನೀಡುತ್ತಾ ಒಬ್ಬರಿಗೊಬ್ಬರು ಮಾತನಾಡಿಸುತ್ತ ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು ಎಂಬ ನುಡಿಯಂತೆ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ. ಕೊರೊನ ಎಂಬ ಮಹಾಮಾರಿ ಹೋಗಿದೆ ಎಂದು ತಿಳಿದರು. ನಮ್ಮ ಆರೋಗ್ಯವೂ ನಮ್ಮ ಕೈಯಲ್ಲಿದೆ ಎಂಬುದು ಅರಿತು ಎಲ್ಲರೂ ಎಚ್ಚರಿಕೆಯಿಂದ ಮಕರ ಸಂಕ್ರಾಂತಿಯನ್ನು ಆಚರಿಸುತ್ತಾ ಸಹಬಾಳ್ವೆಯಿಂದ ಬಾಳ ಬೇಕು ಮಕರ ಸಂಕ್ರಾಂತಿ ಹಬ್ಬವನ್ನು ಹೊಸ ಚಿಗುರಿನೊಂದಿಗೆ , ಹೊಸತನದೊಂದಿಗೆ, ಹೊಸ ಆಸೆಗಳೊಂದಿಗೆ, ಒಟ್ಟಾರೆ ಪ್ರೀತಿಯಿಂದ ಬಂಧು ಬಾಂಧವರೆಲ್ಲರೂ ಎಳ್ಳು,ಬೆಲ್ಲವನ್ನು ಹಂಚುತ್ತಾ ಸಹ ಬಾಳ್ವೆ, ಶಾಂತಿ, ಸಂತೋಷದಿಂದ, ಒಳ್ಳೆಯ ಮಾತನಾಡುತ್ತಾ ಹೊಂದಿಕೊಂಡು ಹೊಂದಾಣಿಕೆ ಮಾಡಿಕೊಳ್ಳುತ್ತಾ, ಕೆಟ್ಟ ವಿಚಾರಗಳನ್ನು ಮಾಡದ ರೀತಿಯಲ್ಲಿ, ಎಲ್ಲರೂ ಸಂತೋಷದಿಂದ ಒಟ್ಟಾಗಿ ಬಾಳೋಣ. ನೀರಿನ ಮೇಲಿನ ಗುಳ್ಳೆಯ ಜೀವನ ನಮ್ಮದಾಗಿರುವಾಗ ಇಂತಹ ಜೀವನದಲ್ಲಿ ಒಳ್ಳೆಯ ಕೆಲಸವನ್ನು ಮಾಡೋಣ. ಪ್ರೀತಿ ವಿಶ್ವಾಸದಿಂದ ಬಾಳೋಣ. ನಮ್ಮ ಹಿಂದೂ ಸಂಪ್ರದಾಯದ ಹಬ್ಬಗಳನ್ನು ಸಂಭ್ರಮದಿಂದ, ಸಡಗರದಿಂದ, ಆಚರಿಸಿತ ಎಲ್ಲರೂ ಬಾಳೋಣ.

# ನಿಸರ್ಗ ವಿದ್ಯಾ ನಿಕೇತನ ಶಾಲೆ: ರಜತ ಮಹೋತ್ಸವ ಸಂಪನ್ನ



■ ಉದಯವಾಹಿನಿ, ವಿಶೇಷ

ಭಾರತೀಯ ಪರಂಪರಾ ಆಧಾರಿತ ಶಿಕ್ಷಣ ನೀಡುತ್ತಿರುವುದು ಅನುಕರಣೀಯ ಪ್ರೊ. ರಾಮಚಂದ್ರಭಟ್ ಕೋಟೆಮನೆ ಭಾರತೀಯ ಶಿಕ್ಷಣ ಪದ್ಧತಿ ಎಂದರೆ ಕೇವಲ ಪಠ್ಯಾಧ್ಯಯನವಲ್ಲ; ಅದು ಮಾನವನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸುವ ಸಂಸ್ಕಾರಾಧಾರಿತ ಜೀವನ ಶಿಕ್ಷಣವಾಗಿದೆ. ಗುರು ಶಿಷ್ಯ ಪರಂಪರೆ, ಮೌಲ್ಯಚಿಂತನೆ, ಪ್ರಕೃತಿಯೊಂದಿಗೆ ಸಹಜ ನಂಟು ಮತ್ತು ಆತ್ಮವಿಕಾಸವೇ ಇದರ ಜೀವಾಳ. ಈ ಶಾಶ್ವತ ಪರಂಪರೆಯನ್ನು ಆಧುನಿಕ ಶಿಕ್ಷಣದೊಂದಿಗೆ ಸಮನ್ವಯಗೊಳಿಸಿ, ಕಳೆದ 25 ವರ್ಷಗಳಿಂದ ಜ್ಞಾನ ಸಂಸ್ಕಾರ ಶಿಸ್ತುಗಳ ಸಮಗ್ರ ಶಿಕ್ಷಣವನ್ನು ನೀಡುತ್ತಿರುವ ನಿಸರ್ಗ ವಿದ್ಯಾ ನಿಕೇತನ ಶಾಲೆಯ ರಜತ ಮಹೋತ್ಸವವು ಈ ಶಿಕ್ಷಣ ಯಾತ್ರೆಯ ಮಹತ್ವದ ಮೈಲಿಗಲ್ಲಾಗಿದೆ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿದ ವೇದವಿಜ್ಞಾನ ಗುರುಕುಲದ ಪ್ರೊ. ರಾಮಚಂದ್ರಭಟ್ ಕೋಟೆಮನೆ ಹೇಳಿದರು.

ಶಾಲೆಯ ಪ್ರಾಂಶುಪಾಲ ಡಾ. ಉದಯ್ ರತ್ನ ಕುಮಾರರ ದೂರದೃಷ್ಟಿಯ ನೇತೃತ್ವದಲ್ಲಿ, ರಜತ ಮಹೋತ್ಸವವನ್ನು ಕೇವಲ ಒಂದೇ ದಿನದ ಆಚರಣೆಗೆ ಸೀಮಿತಗೊಳಿಸದೆ, ವರ್ಷವಿಡೀ ವೈವಿಧ್ಯಮಯ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ, ಸೇವಾ, ಮೌಲ್ಯಾಧಾರಿತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿರುವುದು ಶಾಲೆಯ ವಿಶೇಷತೆಯಾಗಿದೆ. ಇವು ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ, ನಾಯಕತ್ವ, ಸಾಮಾಜಿಕ ಹೊಣೆಗಾರಿಕೆ ಹಾಗೂ ಭಾರತೀಯ ಸಂಸ್ಕೃತಿಯ ಅರಿವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಪ್ರಕೃತಿ ಸಂಪದ ರಜತ ಮಹೋತ್ಸವ ವಿಶೇಷ ಸಂಚಿಕೆ ಲೋಕಾರ್ಪಣೆ ಮಾಡಿದ ಪ್ರಣವ ಮೀಡಿಯಾ ಹೌಸ್‌ನ ಡಾ. ಗುರುರಾಜ ಪೋಶೆಟ್ಟಿಹಳ್ಳಿ ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಖ್ಯಾತ ಗಾಯಕ ಶಶಿಧರ ಕೋಟೆ ಮಾತನಾಡಿ, ನಿಸರ್ಗದೊಂದಿಗೆ ಸಹಬಾಳ್ವೆ, ಸಂಸ್ಕೃತಿಯ ಗೌರವ, ರಾಷ್ಟ್ರಭಕ್ತಿ, ಆತ್ಮವಿಶ್ವಾಸ ಹಾಗೂ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂತಹ ಗುರುಗಳ ಆಶೀರ್ವಾದದಲ್ಲಿ ರೂಪುಗೊಳ್ಳುವ ವಿದ್ಯಾರ್ಥಿಗಳೇ ನಾಳೆಯ ಸಂಸ್ಕಾರಯುತ ಹಾಗೂ ಜವಾಬ್ದಾರಿಯುತ ನಾಗರಿಕರಾಗುತ್ತಾರೆ ಎಂದರು. ಈ ಕಾರ್ಯಕ್ರಮದಲ್ಲಿ ಸಾಕ್ಷಿ ಟ್ರಸ್ಟ್‌ನ ಟ್ರಸ್ಟಿ ಡಾ. ಆರ್.ವಿ. ಜಹಾಗೀರದಾರ, ಮುಖ್ಯ ಶಿಕ್ಷಕಿ ಜಯಮಾಲಾ ಬಿ, ಆಡಳಿತಾಧಿಕಾರಿ ಧನುಷ್ ಕುಮಾರ್ ವೇದಪುರಿ ಮೊದಲಾದ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಪಾಪುಗೆ ಕಾವ್ಯ ನಮನ



■ -ಸುಹೇಚ ಪರಮವಾಡಿ
■ ಶ್ರೀ. ಸುಭಾಷ್ ಹೇಮಣ್ಣಾ ಚವ್ಹಾಣ

ಯಾಲಕ್ಕಿ ಕಂಪಿನ ಹಲಗೇರಿಯ ಪುಟ್ಟ
ಕನ್ನಡನಾಡುಳಿವಿನ ಕಲಿಯಿವನು ದಿಟ್ಟ
ನಿರ್ಭಿತ ನಿಲುವಲಿ ಭ್ರಷ್ಟತೆಗ್ಹಾಕಿದನು ಮಟ್ಟ
ವೀರ ಕಬ್ಬಿಗ ಶರಣ ಸಂಸ್ಕೃತಿಗನಿವನು ಕಟ್ಟ
ಮಲ್ಲಬ್ಬೆ ಸಿದ್ಧಲಿಂಗರ ಮಡಿಲಿನ ಪಾಪು
ಕರುನಾಡ ಮಣ್ಣಲಿ ಪತ್ರಕರ್ತನ ಮೂಡಿದೆ ಛಾಪು
ಸಿಗದಿವರ ಧೀಮಂತಿಕೆಯಳೆಯಲು ಮಾಪು
ಮೆಚ್ಚಿದರಂದಿವರ ಸ್ವಯಂಸೇವೆಯನು ಬಾಪು
ಸುವಿಶಾಲ ಹೃದಯದ ಕನ್ನಡ ಕಾವಲಿಗ
ನೇರ ನಡೆ ನುಡಿಯ ಮಗುತನದ ಸೊಗಸಿಗ
ಅಖಂಡ ಕರ್ನಾಟಕದ ಕನಸಿನ ಮನಸಿಗ
ಏಕೀಕರಣ ಚಳುವಳಿಯ ಕನ್ನಡದ ಮನೆಮಗ
ಮಿಡಿದಿದಿವರ ಅಂತರಂಗ ಕನ್ನಡ ಮಂತ್ರವನೆ
ನುಡಿದಿದಿವರ ಹೋರಾಟ ದಿಟ್ಟತನ ಕನ್ನಡುಳಿವನೆ
ಕರುನಾಡಿನ ಅನರ್ಘ್ಯ ರತ್ನ ಅಗುಲಿದೆಮಗೆ ನಷ್ಟ
ಕರಮುಗಿದರ್ಪಿಸುವೆ ಪುಟ್ಟಪ್ಪಗೆ ಕವನ ಸ್ಪಷ್ಟ



# ಸಾರ್ವಜನಿಕ ರೇಡಿಯೋ ಪ್ರಸಾರ ದಿನ

■ ಹೇಮಂತ್ ಚಿನ್ನು

ಸಾರ್ವಜನಿಕ ರೇಡಿಯೊ ಪ್ರಸಾರ ದಿನದಂದು ಪ್ರಪಂಚವು ಬಹಳ ವಿಶೇಷವಾದ ರೇಡಿಯೋ ತಂತ್ರಜ್ಞಾನವನ್ನು ಆಚರಿಸುತ್ತದೆ. ಅಂದರೆ ರೇಡಿಯೊವನ್ನು ಕಂಡುಹಿಡಿದ ಮತ್ತು ಸಾರ್ವಜನಿಕ ಪ್ರಸಾರವನ್ನು ರೂಪಿಸಿದವರನ್ನು ಈ ದಿನ ಗೌರವಿಸುತ್ತದೆ. ಈ ದಿನ ನಮಗೆ ತಂತ್ರಜ್ಞಾನ ಮತ್ತು ನಮ್ಮ ಜೀವನದಲ್ಲಿ ಅದರ ಪ್ರಾಮುಖ್ಯತೆಗಾಗಿ ಹೊಸ ಭರವಸೆ ಮೂಡಿಸಿದೆ.

ಪ್ರತಿಯೊಂದು ದೇಶವು ಪ್ರಸಾರ ವ್ಯವಸ್ಥೆಯನ್ನು ಹೊಂದಿದೆ. ಈ ಪ್ರಸಾರ ವ್ಯವಸ್ಥೆಯನ್ನು ಸರ್ಕಾರವು ನಡೆಸುತ್ತದೆ.

**ಹಿನ್ನಲೆ:** ಇಟಾಲಿಯನ್ ಸಂಶೋಧಕ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರ್ ಗುಗ್ಲಿಲ್ಮೊ ಮಾರ್ಕೋನಿ ಅವರು 1895 ರಲ್ಲಿ ತನ್ನ ಮೊದಲ ರೇಡಿಯೊ ಪ್ರಸರಣವನ್ನು ಕಳುಹಿಸಿದಾಗ ಮತ್ತು ಸ್ವೀಕರಿಸಿದಾಗ ರೇಡಿಯೊ ಸಂವಹನದ ಸಾಧ್ಯತೆಯನ್ನು ಸಾಬೀತುಪಡಿಸಿದರು.

1945 ರ ಹೊತ್ತಿಗೆ ದೂರದರ್ಶನದ ಆವಿಷ್ಕಾರದೊಂದಿಗೆ ರೇಡಿಯೋ ಮತ್ತು ಅದರ ಪ್ರಭಾವವು ರೂಪಾಂತರಗೊಂಡಿತು. ಇದು ಜಾಗತಿಕವಾಗಿ ಅತ್ಯಂತ ವ್ಯಾಪಕವಾಗಿ ಲಭ್ಯವಿರುವ ಎಲೆಕ್ಟ್ರಾನಿಕ್ ಸಮೂಹ ಮಾಧ್ಯಮವಾಗಿ ಈಗ ಉಳಿದಿದೆ. ಆದರೆ ಇದು ವಿವಿಧ ಮಾಧ್ಯಮಗಳಿಂದ ಸ್ಪರ್ಧೆಯನ್ನು ಎದುರಿಸಿತು ಮತ್ತು ಈಗಲೂ ಎದುರಿಸುತ್ತಿದೆ. 21 ನೇ ಶತಮಾನದಲ್ಲಿ ರೇಡಿಯೋ ಪ್ರಸಾರಗಳು ಡಿಜಿಟಲ್ ಉಪಗ್ರಹ ಮತ್ತು ಇಂಟರ್ನೆಟ್ ಆಧಾರಿತ ಸೇವೆಗಳಿಂದ ಸ್ಪರ್ಧಾತ್ಮಕ ಒತ್ತಡವನ್ನು ಎದುರಿಸುತ್ತಿವೆ.



# ಅನೇಕ ರೈತರಿಗೆ ಪರಿಹಾರ ದೊರಕಿಲ್ಲ ; ಶೀಘ್ರವಾಗಿ ಪರಿಹಾರ ನೀಡಬೇಕು

• ಉದಯವಾಹಿನಿ, ಕೊಲ್ಹಾರ

ಈ ಭಾಗದ ಹೆಚ್ಚು ಪ್ರದೇಶದಲ್ಲಿ ಉಳ್ಳಾಗಡ್ಡಿ ಬೆಳೆ ಬೆಳೆದಿದ್ದಾರೆ ನೀರು ಹೆಚ್ಚು ಬೇಕು. ರೈತರ ಬೆಳೆಗಳಿಗೆ ಮುಳವಾಡ 1ನೇ ಹಂತದ ಪೂರ್ವ, ಪಶ್ಚಿಮ ಕಾಲುವೆಗಳಿಗೆ ನೀರು ಹರಿಸಬೇಕು. ಕೆನಾಲ್ ಮೇಲಿನ ಪಕ್ಕದ ರಸ್ತೆಗಳು ಹದಗೆಟ್ಟು ಹೋಗಿದ್ದು ಅವುಗಳನ್ನು ಈ ಭಾಗದ ಶಾಸಕ ಸಚಿವ ಶಿವಾನಂದ ಪಾಟೀಲ ಅವರು ವಿಶೇಷ ಅನುದಾನ ತಂದು ಸುಧಾರಣೆ ಮಾಡಿಸುವ ಕೆಲಸ ಮಾಡಬೇಕಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಹೇಳಿದರು.

ತಾಲ್ಲೂಕಿನ ಮಟ್ಟಿಹಾಳ ಕ್ರಾಸ ಬಳಿ ಇರುವ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮುಳವಾಡ ಏತ ನೀರಾವರಿ ವಿಭಾಗ-ನಂ.1ರ ಕಾರ್ಯನಿರ್ವಾಹಕ ಅಭಿಯಂತರ ರವರ ಕಛೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ನೇತೃತ್ವದಲ್ಲಿ ನಡೆದ ರೈತರ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾಧ್ಯಮದವರೊಂದಿಗೆ ಮಾತನಾಡಿದರು. ಈ ಭಾಗದ ರೈತರ ಜಮೀನುಗಳಲ್ಲಿ ಕಾಲುವೆ ಹಾಯ್ದು ಹೋಗಿವೆ ಅದರಿಂದ ರೈತರು ಜಮೀನು ಕಳೆದುಕೊಂಡಿದ್ದಾರೆ. ಅನೇಕ ರೈತರಿಗೆ ಪರಿಹಾರ ದೊರಕಿಲ್ಲ ರೈತರಿಗೆ ಶೀಘ್ರವಾಗಿ ಪರಿಹಾರ ನೀಡಬೇಕು. ಜೊತೆಗೆ ಕಾಲುವೆಗಳಲ್ಲಿ ಹೂಳು ತುಂಬಿದೆ ಸ್ವಚ್ಛ ಮಾಡುವ ಈ ಕಾರ್ಯ ಎಪ್ರಿಲ್ 24 ನಂತರ ಜೂನ್ ವರೆಗೆ ಎಲ್ಲಾ ಕಾಲುವೆಗಳ ಹೂಳು ತೆಗೆಯುವ ಕಾರ್ಯ ಆಗಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ಈ ಮೊದಲು ಮುಳವಾಡ 1ನೇ ಹಂತದ ಪಶ್ಚಿಮ, ಪೂರ್ವ ಕಾಲುವೆಗಳಿಗೆ 14 ದಿನ ನೀರನ್ನು ಹರಿಸಿ 10 ದಿನ ಬಂದ್ ಮಾಡಲಾಗುತ್ತಿತ್ತು ರೈತರ ಪ್ರತಿಭಟನೆ ನಂತರ ಅವರ ಬೇಡಿಕೆಯಂತೆ ಜ. 16 ರಿಂದ ಏಪ್ರಿಲ್ 2 ರ ವರೆಗೆ ಕಾಲುವೆಗಳಿಗೆ 10 ದಿನ ನೀರನ್ನು ಹರಿಸಿ 7 ದಿನ ಬಂದ್ ಮಾಡಲಾಗುತ್ತದೆ.
>
> - ಗೋವಿಂದ ರಾಠೋಡ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮೇಲ್ವಿಚಾರಣೆ ಅಧಿಕಾರಿ

> ಜಿಲ್ಲೆಯ ತಿಡಗುಂದಿಯ ಸುಮಾರು 1200 ಎಕರೆ ಅತ್ಯಂತ ಫಲವತ್ತಾದ ರೈತರ ಭೂಮಿಯನ್ನು ಯಾವುದೇ ಕಾರಣಕ್ಕೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುವುದಿಲ್ಲ, ಜಿಲ್ಲೆಯಲ್ಲಿ ಕೃಷಿಗೆ ಯೋಗ್ಯವಲ್ಲದ ಭೂಮಿಗೆ ಈ ಯೋಜನೆಯನ್ನು ಸ್ಥಳಾಂತರಿಸಬೇಕು.
>
> -ಚೂನಪ್ಪ ಪೂಜಾರಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ

ರೈತ ಸಂಘದ ತಾಲ್ಲೂಕು ಅಧ್ಯಕ್ಷ ಸೋಮು ಬಿರಾದಾರ ಮಾತನಾಡಿ ಕೆನಾಲ್ ಕಾಲುವೆಗಳಿಗೆ ಸತತವಾಗಿ 8 ರಿಂದ 9 ತಿಂಗಳವರೆಗೆ ನಮ್ಮ ಕಾಲುವೆಗಳಿಗೆ ನೀರನ್ನು ಹರಿಸಬೇಕು ಕಳೆದ ಎರಡು ಮೂರು ವರ್ಷಗಳಿಂದ ಅಧಿಕಾರಿಗಳು ಕಾಲುವೆ ನೀರನ್ನು ಹಂತ ಹಂತವಾಗಿ ಬಂದ್ ಮಾಡುತ್ತಾ ಬಂದ್ರು ಅದಕ್ಕಾಗಿ ನಾವು ರೈತರೊಂದಿಗೆ ಸಂಘಟನೆ ಮಾಡಿಕೊಂಡು ರಸ್ತೆಗೆ ಇಳಿಯಬೇಕಾದ ಪರಿಸ್ಥಿತಿ ಬಂದಿದೆ ಎಂದರು.

ಡಿವೈಎಸ್ಪಿ ಬಲ್ಲಪ್ಪ ನಂದಗಾವಿ, ಕೆಬಿಜೆಎನ್ಎಲ್ ಎಸ್ಇ ಗೋವಿಂದ ರಾಠೋಡ, ಸಿಪಿಐ ಶರಣಗೌಡ ಗೌಡರ, ಪಿಎಸ್ಐ ಅಶೋಕ ನಾಯಕ, ಎನ್ ಟಿಪಿಸಿ ಕೂಡಗಿ ಪಿಎಸ್ಐ ಯತೀಶ್ ಕೆ ಎನ್, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಉಪಾಧ್ಯಕ್ಷ ಕಲ್ಲಪ್ಪ ಸೋನ್ನದ, ರಾಹುಲ್ ಕುಬಕಡ್ಡಿ, ಸಂಗಮೇಶ ಸಗರ, ಟಿ.ಟಿ. ಹಗೆದಾಳ, ಶ್ರೀಶೈಲ ಅಂಗಡಿ, ಜಗದೀಶ ಸುನಗದ, ಕಲ್ಲಪ್ಪ ಗಿಡ್ಡಪ್ಪಗೋಳ, ವಿಜಯಮಾಂತೇಶ ಗಿಡ್ಡಪ್ಪಗೋಳ, ಮಂಜುನಾಥ ದ್ಯಾವಾಪೂರ, ಮಲ್ಲಪ್ಪ ಗಾಣಗೇರ, ಕೆಬಿಜೆಎನ್ಎಲ್ ಅಧಿಕಾರಿಗಳು ಸೇರಿದಂತೆ ತಾಲ್ಲೂಕಿನ ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು.



## ಕೇಂದ್ರ ತಂಡದಿಂದ ಬೆಳೆ ಹಾನಿ ಪರಿಶೀಲನೆ: ಅನ್ನದಾತರ ಅಳಲು ಆಲಿಸಿದ ತಂಡ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕಲಬುರಗಿ

ಕಳೆದ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ವ್ಯಾಪಕ ಮಳೆಯಿಂದ ಜಿಲ್ಲೆಯಲ್ಲಿ ಹಾಳಾದ ಬೆಳೆಗಳ ಹಾನಿಗಳ ಅಧ್ಯಯನಕ್ಕೆ ಜಿಲ್ಲೆ ಕೇಂದ್ರ ತಂಡವು ಬಂದಿದ್ದು, ಮಂಗಳವಾರ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕಿಣ್ಣಿ ಸಡಕ್, ಡೊಂಗರಗಾಂವ, ಭೀಮನಾಳ, ಕಮಲಾಪೂರ ಗ್ರಾಮಗಳಿಗೆ ಭೇಟಿ ನೀಡಿ ನೆರೆಯಿಂದ ಹಾನಿಯಾದ ಬೆಳೆ, ರಸ್ತೆ, ಸೇತುವೆ ಹಾನಿ ವೀಕ್ಷಣೆ ಮಾಡಿತು. ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಹೈದರಾಬಾದನ ಎಣ್ಣೆ ಬೀಜ ಅಭಿವೃದ್ಧಿ ವಿಭಾಗದ ನಿರ್ದೇಶಕ ಡಾ.ಪೊನ್ನುಸ್ವಾಮಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಅಧೀನ ಕಾರ್ಯದರ್ಶಿ ಜಯಶ್ರೀ ಕಕ್ಕರ್ ಅವರು ಬೆಳೆ ಹಾನಿ, ಮೂಲಸೌಕರ್ಯ ಹಾನಿ ವೀಕ್ಷಿಸಿ ರೈತರ ಅಳಲು ಆಲಿಸಿದರು.

ಡೊಂಗರಗಾಂವ ಗ್ರಾಮದ ಸರ್ವೇ ನಂ. 20/3ರಲ್ಲಿ ಸುಮಾರು 4.32 ಎಕರೆ ಪ್ರದೇಶದಲ್ಲಿ ತೊಗರಿ ಬೆಳೆದು ಬೆಳೆ ಹಾನಿಗೊಳಗಾಗಿರುವ ರೈತ ಅಭಿಷೇಕ್ ಅವರ ಹೊಲಕ್ಕೆ ಭೇಟಿ ನೀಡಿ ಹಾಳಾದ ತೊಗರಿ ಬೆಳೆ ವೀಕ್ಷಿಸಿದರು. ಪ್ರತಿ ಎಕರೆ 30 ಸಾವಿರ ಖರ್ಚು ಮಾಡಿ ತೊಗರಿ ಬೆಳೆದಿದ್ದು, ವಿಪರೀತ ಮಳೆಯಿಂದ ಎಲ್ಲವೂ ಹಾಳಾಗಿದೆ. ಬಿತ್ತಿದ ಬೆಳೆಯು ಐದಾರು ಕೆ.ಜಿ.ಗಳಷ್ಟೂ ಬಾರದ ಸ್ಥಿತಿಯಲ್ಲಿದೆ ಎಂದು ಅಧಿಕಾರಿಗಳ ಮುಂದೆ ರೈತ ಅಭಿಷೇಕ ತನ್ನ ಅಳಲು ತೋಡಿಕೊಂಡರುಮ

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಜಿಲ್ಲೆಯಾದ್ಯಂತ ವಾಡಿಕೆಗೂ ಹೆಚ್ಚಿನ ಮಳೆಯಿಂದ ಅಪಾರ ಪ್ರಮಾಣದ ಬೆಳೆಗಳು ಹಾನಿಯಾಗಿವೆ. ಇದಲ್ಲದೆ ಶಾಲೆ, ಆರೋಗ್ಯ ಕೇಂದ್ರ, ಅಂಗನವಾಡಿ, ರಸ್ತೆ, ಸೇತುವೆಯಂಥ ಮೂಲಸೌಕರ್ಯಗಳು ಸಹ ಹಾನಿಗೊಳಗಾಗಿವೆ. ಈಗಾಗಲೆ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪರಿಹಾರ ಒದಗಿಸಿದೆ. ಮುಖ್ಯಮಂತ್ರಿಗಳು ಈ ಪ್ರದೇಶದಲ್ಲಿ ವೈಮಾನಿಕ ಸಮೀಕ್ಷೆ ನಡೆಸಿ ರಾಜ್ಯ ಸರ್ಕಾರದಿಂದ ಪರಿಹಾರ ಘೋಷಿಸಿದ್ದು, ಅದರಂತೆ ಪರಿಹಾರ ಸಹ ಪಾವತಿಸಿದೆ ಎಂದು ವಿವರಿಸಿದರು.

# ಶಿರೂರು ಪರ್ಯಾಯಕ್ಕೆ ದಿನಗಣನೆ

## ಪರ್ಯಾಯ ಮುಗಿಯುವ ತನಕ ಉಡುಪಿ ನಗರ ಪರಿಸರ ಕೇಸರಿ ಗುಂಗಿನಲ್ಲಿರಲಿದೆ

• ಉದಯವಾಹಿನಿ, ಉಡುಪಿ

ಶಿರೂರು ಪರ್ಯಾಯಕ್ಕೆ ದಿನಗಣನೆ ನಡುವೆ ಸಂಭ್ರಮ ಗರಿಗೆದರಿದ್ದು, ಉಡುಪಿ ಶ್ರೀಕೃಷ್ಣಮಠದ 5 ಕಿ.ಮೀ. ಆಸುಪಾಸು ಕೇಸರಿಮಯವಾಗಿ ಕಂಗೊಳಿಸಲಿದೆ ಮಣಿಪಾಲ, ಕುಂಜಿಬೆಟ್ಟು, ಶಾರದಾ ಕಲ್ಯಾಣ ಮಂಟಪ, ಬಿಗ್ ಬಜಾರ್, ಕಿನ್ನಿಮುಲ್ಕಿ, ಜೋಡುಕಟ್ಟೆ, ತ್ರಿವೇಣಿ ಸರ್ಕಲ್‌ಗಳಲ್ಲಿ ಡಿವೈಡರ್, ವೃತ್ತಗಳಲ್ಲಿ ಕೇಸರಿ, ತೋರಣ, ಚಪ್ಪರ, ಭಗವಾಧ್ವಜಗಳು ರಾರಾಜಿಸಲಿವೆ. ಜನವರಿ 17 ರಂದು ಸಂಜೆ ಪರ್ಯಾಯದ ಮೆರವಣಿಗೆ ನಡೆಯಲಿದೆ.

ನಾಡಹಬ್ಬ ಉಡುಪಿ ಪರ್ಯಾಯಕ್ಕೆ ಆಗಮಿಸುವ ಭಕ್ತಾದಿಗಳನ್ನು ಸ್ವಾಗತಿಸುವ ಕೇಸರಿ ಚಪ್ಪರ, ಭಗವಾಧ್ವಜ, ತೋರಣ ಕಟ್ಟಲು 50ರಿಂದ 60ರಷ್ಟು ಸ್ವಯಂಸೇವಕರು ರಾತ್ರಿ ಪಾಳಿಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ.

### ಅಲಂಕಾರದ ಸಿದ್ಧತೆ

ಉಡುಪಿ ಶ್ರೀಕೃಷ್ಣ ಮಠದ ಪರ್ಯಾಯ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ನಗರವು ಕೇಸರಿಮಯವಾಗಿ ಕಂಗೊಳಿಸುತ್ತಿದೆ. ಸ್ವಯಂಸೇವಕರು ರಾತ್ರಿ ನಗರ ಅಲಂಕಾರದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಹಿಂದುತ್ವದ ಅಭಿಮಾನದ ನೆಲೆಯಲ್ಲಿ ಈ ಅಲಂಕಾರಕ್ಕೆ ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಹಿಂದೂ ಯುವಸೇನೆ ಕಾರ್ಯಕರ್ತರು ತೊಡಗಿಸಿಕೊಂಡಿದ್ದಾರೆ.

ಶಿರೂರು ಮಠದ ಕೀರ್ತಿಶೇಷ ಶ್ರೀಲಕ್ಷ್ಮೀವರ ತೀರ್ಥ ಶ್ರೀಪಾದರು ಹಿಂದುತ್ವ ಪ್ರತಿಪಾದನೆ, ಗೋವಿನ ಪರ ಹೋರಾಟದಲ್ಲಿ ಸಕ್ರಿಯರಾಗಿ ಯುವಕರು ಒಂದು ಕರೆ ನೀಡಿದರೆ ಸಂಘಟಿತರಾಗುವಷ್ಟು ಪ್ರಭಾವ ಹೊಂದಿದ್ದರು. ಪರ್ಯಾಯ ಪೀಠವನ್ನೇರಲಿರುವ ಶಿರೂರು ಮಠದ ಈಗಿನ ಯತಿ ಶ್ರೀವೇದವರ್ಧನತೀರ್ಥ ಶ್ರೀಪಾದರು ಉಡುಪಿ ಪರ್ಯಾಯ ಹಾಗೂ ಹಿಂದುತ್ವದ ಅಭಿಮಾನದ ನೆಲೆಯಲ್ಲಿ ಉಡುಪಿ ನಗರ ಕೇಸರಿಮಯವಾಗಬೇಕೆಂದಿದ್ದರು.


ಉದಯವಾಹಿನಿ ಚಿತ್ರ

### ಕೇಸರಿ ಸಂಕೇತವೇನು?

- ತ್ಯಾಗ-ವೈರಾಗ್ಯ
- ಧೈರ್ಯ-ಶೌರ್ಯ
- ಪಾವಿತ್ರ್ಯ -ತಪಸ್ಸು
- ಆಧ್ಯಾತ್ಮಿಕ ಜಾಗೃತಿ
- ರಾಷ್ಟ್ರಭಕ್ತಿ

> ಸನ್ಯಾಸಿಗಳು ಧರಿಸುವ, ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಬಳಸುವ, ಅಹಂಕಾರ, ತ್ಯಾಗ ಸೂಚಕವಾದ ಕೇಸರಿ ಜೈನ, ಬೌದ್ಧ ಪರಂಪರೆಯಲ್ಲಿ ತಪಸ್ಸು, ಅಹಿಂಸೆ, ಸನ್ಯಾಸ ಜೀವನದ ಸಂಕೇತವಾಗಿದೆ. ಭಾರತೀಯ ಪರಂಪರೆಯಲ್ಲಿ ಜ್ಞಾನ, ಶೌರ್ಯ, ಧರ್ಮದ ಒಗ್ಗಟ್ಟಿನ ಸಂಕೇತವೂ ಹೌದು. ಹಿಂದೂ ಕಾರ್ಯಕ್ರಮಗಳಲ್ಲಿ ಕೇಸರಿ ಮಹತ್ವ ಪಡೆದಿದೆ.
>
> -ದಿನೇಶ್ ಮೆಂಡನ್, ಪ್ರಧಾನ ಕಾರ್ಯದರ್ಶಿ, ವಿಶ್ವ ಹಿಂದೂ ಪರಿಷತ್ ಉಡುಪಿ ಜಿಲ್ಲಾಘಟಕ

ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಹಿಂದೂ ಯುವಸೇನೆ ಕಾರ್ಯಕರ್ತರು ಉಡುಪಿ ಪರಿಸರವನ್ನು ಕೇಸರಿಮಯವಾಗಿಸುವ ಕೆಲಸದಲ್ಲಿ ನಿಸ್ವಾರ್ಥ, ಪ್ರಾಮಾಣಿಕತೆಯಿಂದ ಫಲಾಪೇಕ್ಷೆಯಿಲ್ಲದೆ ತೊಡಗಿದ್ದಾರೆ. ಶ್ರೀಕೃಷ್ಣನ ಸೇವೆ, ಶಿರೂರು ಮಠದ ಮೇಲಿನ ಭಕ್ತಿ, ಅಭಿಮಾನದ ನೆಲೆಯಲ್ಲಿ ಹಿಂದೂಸಂಘಟನೆಗಳ ಕಾರ್ಯಕರ್ತರು ನಾನಾ ಕೆಲಸಗಳ ಹೊಣೆ ವಹಿಸಿದ್ದಾರೆ. ಹಿಂದೂ ಸಂಘಟನೆಗಳ ಕಾರ್ಯಕರ್ತರು ಹಲವು ಪರ್ಯಾಯಗಳಲ್ಲಿ ದುಡಿದಿದ್ದರೂ ದೊಡ್ಡ ಮಟ್ಟದಲ್ಲಿ ಅಲಂಕಾರ ಸೇವೆ ಮೊದಲ ಬಾರಿಗೆ ನಡೆಯುತ್ತಿದೆ.

2017ರಲ್ಲಿ ಧರ್ಮ ಸಂಸತ್ತು ನಡೆದಾಗ ಕಲ್ಸಂಕ ಸಹಿತ ಉಡುಪಿ ನಗರ ಕೇಸರಿಮಯವಾಗಿತ್ತು. 2024ರಲ್ಲಿ ಶೌರ್ಯ ಜಾಗರಣ ರಥಯಾತ್ರೆ ಅಂಗವಾಗಿ ಎಂಜಿಎಂ ಮೈದಾನದಲ್ಲಿ ಹಿಂದೂ ಸಮಾಜೋತ್ಸವ ನಡೆದಾಗಲೂ ಉಡುಪಿ ಕೇಸರಿಯಿಂದ ಕಂಗೊಳಿಸುತ್ತಿತ್ತು. ಪರ್ಯಾಯ ಮುಗಿಯುವ ತನಕ ಉಡುಪಿ ನಗರ ಪರಿಸರ ಕೇಸರಿ ಗುಂಗಿನಲ್ಲಿರಲಿದೆ.

## ಮಿನಿ ನ್ಯೂಸ್

### ರೈತರ, ಜನರ ಸಮಸ್ಯೆಗೆ ಸ್ಪಂದಿಸದ ಧಾರವಾಡ ಜಿಲ್ಲಾಧಿಕಾರಿ; ಆರೋಪ

• ಉದಯವಾಹಿನಿ, ಧಾರವಾಡ

ಜಿಲ್ಲಾಧಿಕಾರಿಯವರು ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರನ್ನು ವರ್ಗಾವಣೆ ಮಾಡುವಂತೆ ಮುಖ್ಯಕಾರ್ಯದರ್ಶಿಗೆ ಮನವಿ ಮಾಡಿದ್ದೇವೆ ಎಂದು ರೈತ ಸೇನಾ ಕರ್ನಾಟಕ ಸಂಘಟನೆ ಅಧ್ಯಕ್ಷ ವೀರೇಶ ಸೊಬರದ ಮಠ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನವಲಗುಂದ ತಾಲ್ಲೂಕಿನ ತಿರ್ಲಾಪೂರದ ರೈತ ಸಿದ್ದಲಿಂಗಪ್ಪ ಶಿವಪ್ಪ ಗುಡಿ ಅವರ ಕಬ್ಜಾದಲ್ಲಿರುವ ಜಮೀನನ್ನು ಹೊಸ ಶರ್ತಿನಿಂದ ಹಳೆಯ ಶರ್ತಿಗೆ ಪರಿವರ್ತಿಸುವಂತೆ ಮನವಿ ಸಲ್ಲಿಸಲಾಗಿದೆ.

ಜಿಲ್ಲಾಧಿಕಾರಿಯವರು ಈ ಬಗ್ಗೆ ಕ್ರಮ ವಹಿಸಿಲ್ಲ ಎಂದು ದೂರಿದರು. 13 ವರ್ಷಗಳಿಂದ ಮನವಿಯನ್ನು ಪರಿಗಣಿಸಿಲ್ಲ. ಪುನಃ ಹೊಸ ಶರ್ತು ವಿಧಿಸಲಾಗಿದೆ ಎಂದು ದೂರಿದರು. ಸಮಸ್ಯೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಅರ್ಥಮಾಡಿಕೊಳ್ಳಬೇಕು. ಪರಿಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು ಎಂದರು.

### ಹುಬ್ಬಳ್ಳಿ ಮಹಿಳೆ ವಿವಸ್ತ್ರ ಪ್ರಕರಣ ಸಿಐಡಿ ತನಿಖೆ ಚುರುಕು

• ಉದಯವಾಹಿನಿ, ಹುಬ್ಬಳ್ಳಿ

ಚಾಲುಕ್ಯನಗರದಲ್ಲಿ ನಡೆದ ಮಹಿಳೆ ವಿವಸ್ತ್ರ, ಹಲ್ಲೆ, ಕೊಲೆ ಯತ್ನ, ಬೆದರಿಕೆ, ದೌರ್ಜನ್ಯ ಮುಂತಾದ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆಗೆ ಸಿಐಡಿ ಅಧಿಕಾರಿಗಳು ಮೂರು ದಿನಗಳಿಂದ ನಗರದಲ್ಲಿ ಬೀಡು ಬಿಟ್ಟಿದ್ದಾರೆ. ಜ.2 ರಿಂದ ಜ. 6ರವರೆಗೆ ದಾಖಲಾದ ಎಲ್ಲಾ ಆರು ಪ್ರಕರಣಗಳ ಆರೋಪಿಗಳ ವೈಯಕ್ತಿಕ ಮಾಹಿತಿ, ಅವರ ಹಿನ್ನೆಲೆ, ಕುಟುಂಬದವರ ವಿವರ, ಮೊಬೈಲ್ ಸಂಖ್ಯೆ, ಮೊಬೈಲ್ ಕರೆಗಳ ಮಾಹಿತಿ (ಸಿಡಿಆರ್) ಸಂಗ್ರಹಿಸುತ್ತಿದ್ದಾರೆ.

ಮಹಿಳೆ ವಿವಸ್ತ್ರ ಪ್ರಕರಣ ಕುರಿತು ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಹಾಗೂ ಹಂಚಿಕೆಯಾಗಿರುವ ವಿಡಿಯೋಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

### ಜಿಂದಾಲ್‌ನ ಉದ್ಯೋಗಿಯೊಬ್ಬರಿಗೆ ಆನ್‌ಲೈನ್‌ನಲ್ಲಿ 38 ಲಕ್ಷ ವಂಚನೆ

• ಉದಯವಾಹಿನಿ, ಬಳ್ಳಾರಿ

ಅಧಿಕ ಲಾಭಾಂಶದ ಆಮಿಷವೊಡ್ಡಿ ಜಿಂದಾಲ್‌ನ ಉದ್ಯೋಗಿಯೊಬ್ಬರಿಗೆ ಆನ್‌ಲೈನ್‌ಲ್ಲಿ 38 ಲಕ್ಷ ವಂಚನೆ ಮಾಡಲಾಗಿದೆ. ದುಡ್ಡು ಕಳೆದುಕೊಂಡ ವ್ಯಕ್ತಿ ನೀಡಿದ ದೂರು ಆಧರಿಸಿ ನಗರದ ಸೈಬರ್ ಅಪರಾಧ, ಆರ್ಥಿಕ ಅಪರಾಧಗಳು, ಮಾಧಕ ದ್ರವ್ಯ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ದೂರದಾರ ವ್ಯಕ್ತಿ ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಬಂದಿದ್ದ ಜಾಹೀರಾತಿನ ಲಿಂಕ್ ಒತ್ತಿದ್ದರು ಎನ್ನಲಾಗಿದೆ.

ಕೂಡಲೇ ವ್ಯಕ್ತಿಯನ್ನು ಷೇರು ಮಾರುಕಟ್ಟೆಗೆ ಸಂಬಂಧಿಸಿದ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಲಾಗಿತ್ತು. ಅಲ್ಲಿ ಷೇರುಗಳ ಕುರಿತು ಮಾಹಿತಿ ನೀಡಲಾಗಿತ್ತು ಎನ್ನಲಾಗಿದೆ. ಬಳಿಕ ಶೇ 200ರ ಲಾಭಾಂಶದ ಆಮಿಷವೊಡ್ಡಿ ವಂಚಕರು ಹಂತ ಹಂತವಾಗಿ 38,41,570 ಹಣ ಹಾಕಿಸಿಕೊಂಡಿದ್ದಾರೆ. ಕಡೆಗೆ ಲಾಭಾಂಶವೂ ಇಲ್ಲದೇ, ಹೂಡಿಕೆ ಮಾಡಿದ ಹಣವನ್ನೂ ಹಿಂದಕ್ಕೆ ಪಡೆಯಲಾಗದೆ ವ್ಯಕ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

### ವಾಹನಗಳ ಸಂಚಾರಕ್ಕೆ ವೇಗ ಮಿತಿ ಅಳವಡಿಸಿ: ಡಿವೈಎಸ್ಪಿ ಬಲ್ಲಪ್ಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಸವನಬಾಗೇವಾಡಿ

ಪಟ್ಟಣದಲ್ಲಿ ವಾಹನಗಳ ಅತಿ ವೇಗ ಸಂಚಾರ ನಿಯಂತ್ರಿಸಲು ಹಾಗೂ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಾಹನಗಳ ವೇಗ ಮಿತಿ ನಿಗದಿ ಪಡಿಸುವಂತೆ ವಿವೇಕ ಬ್ರಿಗೇಡ್ ಸಂಘಟನೆಯಿಂದ ಡಿವೈಎಸ್ಪಿ ಬಲ್ಲಪ್ಪ ನಂದಗಾವಿ ಅವರಿಗೆ ಮನವಿ ಸಲ್ಲಿಸಲಾಯಿತು. ಬಸವನಬಾಗೇವಾಡಿ ಪಟ್ಟಣದಲ್ಲಿ ಜನಸಂದಣಿ, ವಾಹನಗಳ ಸಂಚಾರ ಹೆಚ್ಚಾಗಿದೆ. ವಿಶೇಷವಾಗಿ ವೃದ್ಧರು. ಮಹಿಳೆಯರು ಹಾಗೂ ಮಕ್ಕಳು ನಡೆದಾಡುವ ಸ್ಥಳಗಳಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತಿದ್ದು, ನಿತ್ಯ ಅಪಘಾತಗಳು ಸಾಮಾನ್ಯವಾಗಿವೆ. ಹಾಗಾಗಿ ಪಟ್ಟಣ ವ್ಯಾಪ್ತಿಯಲ್ಲಿ ಬರುವ ತಹಶೀಲ್ದಾರ್ ಕಚೇರಿಯಿಂದ ವಿಜಯಪುರ ರಸ್ತೆಯಲ್ಲಿರುವ ಬಸವೇಶ್ವರ ಮಹಾವಿದ್ಯಾಲಯದ ವರೆಗೆ ಮತ್ತು ಮಹಾತ್ಮ ಬಸವೇಶ್ವರ ವೃತ್ತದಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ವಾಹನಗಳ ಚಾಲನೆ ಮಿತಿ ಗಂಟೆಗೆ 40 ಕಿ.ಮೀ. ಅಳವಡಿಸಬೇಕು. ಹೆಚ್ಚಿನ ಜನದಟ್ಟಣೆ ಪ್ರದೇಶಗಳಾದ ಬಸವೇಶ್ವರ ದೇವಾಲಯ, ಬಸ್ ನಿಲ್ದಾಣ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ತಾಲ್ಲೂಕು ಸರ್ಕಾರಿ ಆಸ್ಪತ್ರೆ, ಅರಳಿಕಟ್ಟಿ ಹಾಗೂ ಬಸವ ಭವನ ಹತ್ತಿರ ಜೀಬ್ರಾ ಕ್ರಾಸ್‌ಗಳನ್ನು ಹಾಕಿಸಿ ಅಪಘಾತಗಳನ್ನು ತಡೆಗಟ್ಟಬೇಕೆಂದು ಮನವಿಯಲ್ಲಿ ಕೋರಲಾಗಿದೆ.

## ಪಿಪಿಪಿ ವಿರೋಧಿ ಹೋರಾಟಗಾರರಿಗೆ ಜಾಮೀನು

• ಉದಯವಾಹಿನಿ, ವಿಜಯಪುರ

ವಿಜಯಪುರದಲ್ಲಿ ರಾಜ್ಯ ಸರ್ಕಾರವು ಉದ್ದೇಶಿಸಿದ್ದ ಖಾಸಗಿ-ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ)ದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ ವಿರೋಧಿಸಿ, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ನಡೆದ ಹೋರಾಟದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಪಾಲಾಗಿರುವ ಆರು ಜನ ಹೋರಾಟಗಾರರಿಗೆ ಮಂಗಳವಾರ ಜಿಲ್ಲಾ ಸೆಷನ್ಸ್ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಜನವರಿ 1ರಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರ ಗೃಹ ಕಚೇರಿಗೆ ಮುತ್ತಿಗೆ ಹಾಕಲು ಹೋರಾಟಗಾರರು ಯತ್ನಿಸಿದಾಗ ನಡೆದ ತಳ್ಳಾಟದಲ್ಲಿ ಪೊಲೀಸರ ಮೇಲೆ ಹಲ್ಲೆ ಮಾಡಿದ ಆರೋಪದ ಮೇರೆಗೆ ಹೋರಾಟಗಾರರಾದ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಬಿ.ಭಗವಾನ್‌ರೆಡ್ಡಿ, ಭೋಗೇಶ ಸೋಲಾಪುರ, ಸಿದ್ದರಾಮ ಹಳ್ಳೂರ ಹಾಗೂ ಹುಳಶ್ಯಾಳದ ಸಂಗನ ಬಸವ ಸ್ವಾಮೀಜಿ ಅವರು ಬಂಧಿತರಾಗಿ ಜೈಲು ಪಾಲಾಗಿದ್ದರು.

ಇದೇ ಪ್ರಕರಣದಲ್ಲಿ ಇನ್ನೂ 21 ಜನ ಹೋರಾಟಗಾರರ ವಿರುದ್ಧ ಕೊಲೆ ಯತ್ನ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ. ಜೀವ ಬೆದರಿಕೆ ಕೇಸು ದಾಖಲಾಗಿತ್ತು. ಹೋರಾಟಗಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ ಜಿಲ್ಲಾ ಪೊಲೀಸ್ ಹಾಗೂ ಸರ್ಕಾರದ ವಿರುದ್ಧ ವ್ಯಾಪಕ ವಿರೋಧ ಟೀಕೆ ವ್ಯಕ್ತವಾಗಿತ್ತು.




### ಕೈಬಿಟ್ಟಿರುವುದಾಗಿ ಘೋಷಣೆ

ಪಿಪಿಪಿ ವಿರೋಧಿ ಹೋರಾಟಕ್ಕೆ ಮಣಿದ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ವಿಜಯಪುರಕ್ಕೆ ಜನವರಿ 9ರಂದು ಭೇಟಿ ನೀಡಿ, ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರು ಮಾಡುವುದಾಗಿ, ಪಿಪಿಪಿ ಕೈಬಿಟ್ಟಿರುವುದಾಗಿ ಘೋಷಣೆ ಮಾಡಿ ಹೋಗಿದ್ದಾರೆ.

> ಜಾಮೀನು ನೀಡಿದ ಆದೇಶ ಪ್ರತಿ ಮಂಗಳವಾರ ಲಭಿಸದ ಕಾರಣ ಬಿಡುಗಡೆ ಸಾಧ್ಯವಾಗಿಲ್ಲ. ಜನವರಿ 14ರಂದು ಹೋರಾಟಗಾರರ ಬಿಡುಗಡೆಯಾಗುವ ಸಾಧ್ಯತೆ ಇದ್ದು, ಅಂದು ದರ್ಗಾ ಜೈಲಿನಿಂದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ವರೆಗೆ ಮೆರವಣಿಗೆ ಮಾಡಿ, ವಿಜಯೋತ್ಸವ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.
>
> - ಎಚ್.ಟಿ.ಭರತ್‌ಕುಮಾರ್ ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ ಸದಸ್ಯ

## ಪ್ರಯಾಣಿಕರ ಉಪಯೋಗಕ್ಕೆ ಬಾರದ ಬಸ್ ನಿಲ್ದಾಣ

• ಉದಯವಾಹಿನಿ, ಕಮಲನಗರ

ಪ್ರಯಾಣಿಕರ ಅನುಕೂಲಕ್ಕಾಗಿ ಸುಮಾರು ಹದಿನೆಂಟು ವರ್ಷಗಳ ಹಿಂದೆ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಿದೆ. ಆದರೆ ಬಸ್ ನಿಲ್ದಾಣಕ್ಕೆ ಬಸ್‌ಗಳು, ಪ್ರಯಾಣಿಕರು ಬಾರದೆ ಇರುವುದರಿಂದ ಕಟ್ಟಡ ಹಾಳು ಬಿದ್ದಿದೆ.

ಕಮಲನಗರ ಪಟ್ಟಣದ ಮದನೂರ್ ಮುಖ್ಯ ರಸ್ತೆಯಲ್ಲಿ ನಿರ್ಮಿಸಲಾದ ಸುಸಜ್ಜಿತ ಬಸ್ ನಿಲ್ದಾಣಕ್ಕೆ ಬಸ್‌ಗಳು ಹೋಗುವುದಿಲ್ಲ. ನೂತನ ತಾಲ್ಲೂಕು ಕೇಂದ್ರ ರಚನೆಯಾಗಿ ಎಂಟು ವರ್ಷ ಕಳೆದರೂ, ಬೆಳೆಯುತ್ತಿರುವ ಪಟ್ಟಣಕ್ಕೆ ಬಸ್ ನಿಲ್ದಾಣ ನಿರ್ಮಾಣವಾದರಷ್ಟೇ ಸಾಲದು. ಬಸ್‌ಗಳ ಸಂಚಾರಕ್ಕೆ ಸಮರ್ಪಕ ವ್ಯವಸ್ಥೆ ಮೂಲ ಸೌಕರ್ಯಗಳು ಇರಬೇಕು. ಪಾಳು ಬಿದ್ದಿರುವ ಬಸ್ ನಿಲ್ದಾಣವನ್ನು ಈಗ ಅಭಿವೃದ್ಧಿಪಡಿಸಿ ಸಾರ್ವಜನಿಕರ ಬಳಕೆಗೆ ಅವಕಾಶ ಕಲ್ಪಿಸಬೇಕಿರುವ ಅನಿವಾರ್ಯತೆ ಇದೆ.

ಸರಿಯಾದ ನಿರ್ವಹಣೆ ಇಲ್ಲದೇ ಇರುವುದರಿಂದ ಬಸ್ ನಿಲ್ದಾಣ ಕುಡುಕರ ತಾಣವಾಗಿದೆ. ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ, ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಬಸ್ ನಿಲ್ದಾಣದ ಆವರಣದಲ್ಲಿ ಗಿಡ-ಗಂಟಿಗಳು ಬೆಳೆದಿವೆ. ಪುಂಡ ಪೋಕರಿಗಳು ಕಟ್ಟಡದ ಕಿಟಕಿಗಳ ಗಾಜು ಒಡೆದು ಹಾಳು ಮಾಡಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ತಾಲ್ಲೂಕು ಕೇಂದ್ರದ ಬಸ್ ನಿಲ್ದಾಣದಲ್ಲಿ ಬಸ್‌ಗಳು ನಿಲ್ಲದಿರುವುದು ಹಾಗೂ ಪ್ರಯಾಣಿಕರು ಬಾರದೆ ಇರುವುದರಿಂದ ಈ ನಿಲ್ದಾಣವು ಅನೈತಿಕ ತಾಣವಾಗಿ ಮಾರ್ಪಟ್ಟಿದೆ. ಕಟ್ಟಡದ ಮೂಲೆಗಳಲ್ಲಿ ಸರಾಯಿ ಬಾಟಲಿ ಪುಂಡ ಪೋಕರಿಗಳ ಮೋಜು ಮಸ್ತಿಯ ತಾಣವಾಗಿದೆ. ಕೂಡಲೇ ಸಾರಿಗೆ ಇಲಾಖೆ ಅಧಿಕಾರಿಗಳು ಗಮನಹರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

**ಹಾಳು ಕೊಂಪೆಯಾದ ಶೌಚಾಲಯ :** ಬಸ್ ನಿಲ್ದಾಣದ ಆವರಣದಲ್ಲಿರುವ ಶೌಚಾಲಯ ಹಾಳು ಕೊಂಪೆಯಾಗಿದೆ. ಯಾರೋ ಕಿಡಿಗೇಡಿಗಳು ಶೌಚಾಲಯದ ಬಾಗಿಲು, ಕಿಟಕಿಗಳು ಮುರಿದು ಹಾಕಿದ್ದಾರೆ. ಸುತ್ತಲೂ ಗಿಡ-ಗಂಟಿಗಳು ಬೆಳೆದು ಉಪಯೋಗಕ್ಕೆ ಬಾರದಂತಾಗಿದೆ.




ಉದಯವಾಹಿನಿ ಚಿತ್ರ

## ವಿಬಿ-ಜಿ ರಾಮ್ ಜಿ ಯೋಜನೆ; ಕಾಂಗ್ರೆಸ್ ಆರೋಪ ಸುಳ್ಳು: ಶಾಸಕ

• ಉದಯವಾಹಿನಿ, ಗದಗ

ಗ್ರಾಮೀಣ ಜನರ ಜೀವನೋಪಾಯಕ್ಕೆ ಭದ್ರತೆ ನೀಡಲು ಮತ್ತು ಸುಸ್ಥಿರ ಆಸ್ತಿ ಸೃಷ್ಟಿಸಲು ಕೇಂದ್ರ ಸರ್ಕಾರವು ಹಳೆಯ ನರೇಗಾ ಯೋಜನೆಯಲ್ಲಿನ ಲೋಪದೋಷ ಸರಿಪಡಿಸಿ, ವಿಬಿ-ಜಿ ರಾಮ್‌ಜಿ ಯೋಜನೆ ಜಾರಿಗೆ ತಂದಿದೆ. ಕೇಂದ್ರ ಸರ್ಕಾರದ ಈ ಯೋಜನೆಯು ವಿಕಸಿತ ಭಾರತದೆಡೆಗೆ ದೇಶದ ದಿಟ್ಟ ಹೆಜ್ಜೆಯಾಗಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು. ಈ ಹಿಂದೆ ನರೇಗಾ ಯೋಜನೆಯ ಹಣ ವಿಳಂಬವಾಗುತ್ತಿತ್ತು. ಕಾಯ್ದೆ ತಿದ್ದುಪಡಿ ಆದ ನಂತರ ವಿಳಂಬವಾಗುವುದಿಲ್ಲ ಎಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ರಾಜ್ಯದ ಕಾಂಗ್ರೆಸ್ ಸರ್ಕಾರವು ತನ್ನ ಖಜಾನೆ ಖಾಲಿಯಾದ ಹಿನ್ನೆಲೆಯಲ್ಲಿ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರವು ಅನುದಾನದ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಈ ಹೊಸ ಕಾಯ್ದೆಯಿಂದ ರಾಜ್ಯಗಳಿಗೆ ಹೆಚ್ಚುವರಿ ಲಾಭ ಸಿಗಲಿದೆ. ಸಿದ್ದರಾಮಯ್ಯ ತಮ್ಮ ಸರ್ಕಾರದ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಈ ಕಾಯ್ದೆ ತಿದ್ದುಪಡಿ ಮುಂದಿಟ್ಟುಕೊಂಡು ಹೋರಾಟ ಮಾಡುತ್ತೇವೆ ಎನ್ನುತ್ತಿದ್ದಾರೆ. ಇದು ಜನರ ಗಮನ ಬೇರೆಡೆ ಸೆಳೆಯುವ ತಂತ್ರವಾಗಿದೆ ಎಂದು ಹೇಳಿದರು. ಬಿಜೆಪಿ ವತಿಯಿಂದ



ಜಿಲ್ಲಾ ಸಮ್ಮೇಳನ, ತಾಲ್ಲೂಕು, ಗ್ರಾಮ ಮಟ್ಟದ ಸಭೆ ನಡೆಸಿ ಯೋಜನೆ ಕುರಿತು ಜನರಿಗೆ ಹಾಗೂ ಕೃಷಿಕರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ನರೇಗಾ ಯೋಜನೆಯ ಲೋಪದೋಷ ಗುರುತಿಸಿ ವಿಕಸಿತ ಭಾರತ ಕಾಯ್ದೆ ಜಾರಿಗೆ ತರಲಾಗಿದೆ. ನರೇಗಾದಲ್ಲಿ ಆಗುತ್ತಿದ್ದ ಭ್ರಷ್ಟಾಚಾರ ತಡೆಯಲು ಅನುಕೂಲವಾಗಲಿದೆ' ಎಂದು ತಿಳಿಸಿದರು. 'ಪಂಚಾಯತ್ ರಾಜ್ ವ್ಯವಸ್ಥೆಯ ಅಧಿಕಾರ ಮೊಟಕುಗೊಳಿಸಲಾಗುತ್ತದೆ ಎಂದು ಕಾಂಗ್ರೆಸ್ ಆರೋಪ ಮಾಡುತ್ತಿದೆ. ಇದು ಸುಳ್ಳು. ಕಾಂಗ್ರೆಸ್ ಪಕ್ಷವು ಯೋಜನೆಯ ಹೆಸರು ಬದಲಾಯಿಸಿದ್ದಕ್ಕೆ ವಿರೋಧಿಸುತ್ತಿದೆ. ಈ ಹಿಂದೆ ಈ ಯೋಜನೆಯ ಹೆಸರು ಎನ್‌ಆರ್‌ಇಜಿ ಎಂದು ಹೆಸರಿಸಲಾಗಿತ್ತು. ತದನಂತರ ಕಾಂಗ್ರೆಸ್ ಪಕ್ಷವು ಜವಹರಲಾಲ್ ರೋಜ್‌ಗಾರ ಯೋಜನೆ ಎಂದು ಬದಲಿಸಿತು. ನಂತರ ಮಹಾತ್ಮಾಗಾಂಧಿ ನರೇಗಾ ಯೋಜನೆ ಎಂದು ಬದಲಾಯಿಸಿತು. ಹೀಗೆ ಕಾಂಗ್ರೆಸ್ ಪಕ್ಷ ಹೆಸರು ಬದಲಾಯಿಸುತ್ತ ಬಂದಿದೆ' ಎಂದರು.

# ಶೇ.91% ಕಾರ್ಮಿಕರಿಗೆ ಇ-ಕೆವೈಸಿ ವಿತರಣೆ ಯಶಸ್ವಿ

## ಬಳ್ಳಾರಿ ಜಿಲ್ಲೆಯಲ್ಲಿ ಮನರೇಗಾ ಅಕ್ರಮ ಕಡಿವಾಣಕ್ಕೆ ಇ-ಕೆವೈಸಿ ಅಸ್ತ್ರ, 5 ತಾಲ್ಲೂಕುಗಳಲ್ಲಿ ಇ-ಕೆವೈಸಿಗೆ 2,4,652 ಕಾರ್ಮಿಕರು ಬಾಕಿ

• ಉದಯವಾಹಿನಿ, ಬಳ್ಳಾರಿ

ಗ್ರಾಮೀಣ ಭಾಗದಲ್ಲಿ ವಲಸೆ, ನಿರುದ್ಯೋಗ ತಪ್ಪಿಸಿ ಸ್ಥಳೀಯ ಮಟ್ಟದಲ್ಲಿಯೇ ಉದ್ಯೋಗ ಒದಗಿಸುವಲ್ಲಿ ಗಮನ ಸೆಳೆದಿರುವ ಮನರೇಗಾದಲ್ಲಿ ಬೆಳಕಿಗೆ ಬರುತ್ತಿರುವ ಅಕ್ರಮ ತಡೆಗಟ್ಟಲು ಸರಕಾರ ಇ-ಕೆವೈಸಿ ಅಸ್ತ್ರ ಪ್ರಯೋಗಕ್ಕೆ ಮುಂದಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಮನರೇಗಾ ಕೂಲಿ ಕಾರ್ಮಿಕರ ಇ-ಕೆವೈಸಿ ಮಾಡಿಸುವ ಕಾರ್ಯ ಭರದಿಂದ ಸಾಗಿದೆ. ಜಿಲ್ಲೆಯ ಐದು ತಾಲ್ಲೂಕುಗಳ 100 ಗ್ರಾಪಂ ವ್ಯಾಪ್ತಿಯಲ್ಲಿ ಮನರೇಗಾ ಯೋಜನೆ ಅಡಿ ಒಟ್ಟು 5,06,099 ಕಾರ್ಮಿಕರು ನೋಂದಣಿಯಾಗಿದ್ದು, ಇದರಲ್ಲಿ 2,89,826 ಕಾರ್ಮಿಕರು ಸಕ್ರಿಯವಾಗಿ ಖಾತರಿ ಯೋಜನೆಯಡಿ ತೊಡಗಿಸಿಕೊಂಡಿದ್ದಾರೆ. ಸ್ಥಳೀಯರಿಗೆ ಉದ್ಯೋಗ ನೀಡುವುದರೊಂದಿಗೆ, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರಿಯಾಗಿರುವ ಮನರೇಗಾ ಅಕ್ರಮಗಳ ಆರೋಪಕ್ಕೆ ಹೊರತಾಗಿಲ್ಲ.

ಜಾಬ್ ಕಾರ್ಡ್ ಹೊಂದಿರುವವರ ಬದಲಾಗಿ ಬೇರೆಯವರು ಹಾಜರಾಗಿ ಹಣ ಪಡೆಯುವುದು, ಕೆಲಸಕ್ಕೆ ಹಾಜರಾಗದಿದ್ದರೂ ಅವರ ಹೆಸರಿನಲ್ಲಿ ಹಾಜರಾತಿ ತೋರಿಸುವುದು ಸೇರಿ ನಾನಾ ಅಕ್ರಮಗಳಿಗೆ ಕಡಿವಾಣ ಹಾಕಲು ಕೇಂದ್ರ ಸರಕಾರದಿಂದ ಪ್ರತಿಯೊಬ್ಬ ಕಾರ್ಮಿಕರ ಭಾವ ಚಿತ್ರದೊಂದಿಗೆ ಇ-ಕೆವೈಸಿ ಮಾಡಿಸಲು ಮುಂದಾಗಿದೆ. ಜಿಲ್ಲೆಯಲ್ಲಿ ಈಗಾಗಲೇ ಸಕ್ರಿಯ ಕೂಲಿ ಕಾರ್ಮಿಕರ ಪೈಕಿ ಶೇ.91ರಷ್ಟು ಪ್ರಗತಿ ಸಾಧಿಸಲಾಗಿದೆ.


ಉದಯವಾಹಿನಿ ಚಿತ್ರ

ಮನರೇಗಾ ಅಕ್ರಮಗಳ ಆರೋಪ

> ಜಿಲ್ಲೆಯಲ್ಲಿ ಮನರೇಗಾ ಜಾಬ್ ಕಾರ್ಡ್ ಹೊಂದಿರುವ ಎಲ್ಲಾ ಕಾರ್ಮಿಕರ ಇ-ಕೆವೈಸಿ ಮಾಡಿಸಲಾಗುತ್ತಿದೆ. ಈಗಾಗಲೇ ಶೇ.91ರಷ್ಟು ಪ್ರಗತಿ ಸಾಧಿಸಲಾಗಿದೆ. ಇದರಿಂದ ಮನರೇಗಾದಲ್ಲಿ ಕೇಳಿ ಬರುತ್ತಿದ್ದ ಅಕ್ರಮಗಳಿಗೆ ತಡೆ ನೀಡಿದಂತಾಗಲಿದೆ. ಪಾರದರ್ಶಕ ಕೆಲಸಕ್ಕೆ ಸಹಕಾರಿಯಾಗಲಿದೆ. ಬಾಕಿ ಉಳಿದ ಕಾರ್ಮಿಕರ ಇ-ಕೆವೈಸಿಗೆ ಕ್ರಮ ಕೈಗೊಂಡಿದ್ದು, ಇದರಲ್ಲಿ ಕೆಲವರು ವಲಸೆ, ಮರಣ ಸೇರಿ ನಾನಾ ಕಾರಣದಿಂದ ದೂರ ಉಳಿದಿದ್ದಾರೆ.
>
> - ಮಹ್ಮದ್ ಹ್ಯಾರಿಸ್ ಸುಮೇರಾ, ಸಿಇಒ, ಜಿಪಂ,

### ಖಾತರಿ ಉದ್ಯೋಗಕ್ಕೆ ಬೇಡಿಕೆ

ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಈ ಬಾರಿ 2ನೇ ಬೆಳೆಗೆ ನೀರಿಲ್ಲದಂತಾಗಿ ಕೃಷಿ ಚಟುವಟಿಕೆಗಳು ಮಂಕಾಗಿವೆ. ಇದರಿಂದ ಗ್ರಾಮೀಣ ಭಾಗದ ಜನ ಉದ್ಯೋಗ ಹರಸಿ ನಗರದತ್ತ ವಲಸೆ ತೆರಳುತ್ತಿದ್ದು, ಸ್ಥಳೀಯ ಮಟ್ಟದಲ್ಲಿಯೇ ಉದ್ಯೋಗ ಖಾತರಿಯಡಿ ಉದ್ಯೋಗ ಒದಗಿಸಲು ಹೆಚ್ಚಿನ ಬೇಡಿಕೆ ಉಂಟಾಗುತ್ತಿದೆ. ಹೀಗಾಗಿ 2026-27ನೇ ಸಾಲಿನಲ್ಲಿ ಏಪ್ರಿಲ್‌ನಿಂದಲೇ ಜನತೆಗೆ ಉದ್ಯೋಗ ಒದಗಿಸಲು ಈಗಿನಿಂದಲೇ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಲು ಜಿಪಂ ಅಗತ್ಯ ಸಿದ್ಧತೆ ಕೈಗೊಳ್ಳುತ್ತಿದೆ.

**ಯಾವ ತಾಲ್ಲೂಕಿನಲ್ಲಿ ಎಷ್ಟು ಪ್ರಗತಿ?:** ಮನರೇಗಾದಡಿ ಒಟ್ಟು ನೋಂದಣಿಯಾದ 5,06,099 ಕಾರ್ಮಿಕರಲ್ಲಿ 3,92,005 ಕಾರ್ಮಿಕರ ಆಧಾರ್ ಸಂಖ್ಯೆ ಜೋಡಣೆ ಮಾಡಲಾಗಿದ್ದು, 2,98,372 ಕಾರ್ಮಿಕರ ಇ-ಕೆವೈಸಿ ಮಾಡಲಾಗಿದೆ. ಇದರಲ್ಲಿ ಸಕ್ರಿಯ 2,89,826 ಕಾರ್ಮಿಕರಿದ್ದು, 2,65,173 ಇ-ಕೆವೈಸಿಗೆ ಒಳಗಾಗಿದ್ದಾರೆ. ಕಂಪ್ಲಿ 33,717, ಕುರುಗೋಡು 39,960, ಸಂಡೂರು 51,012, ಸಿರುಗುಪ್ಪ 74,756 ಹಾಗೂ ಬಳ್ಳಾರಿ 65,728 ಕಾರ್ಮಿಕರ ಇ-ಕೆವೈಸಿ ಪೂರ್ಣಗೊಳಿಸಿ ಶೇ.91ರಷ್ಟು ಪ್ರಗತಿ ಸಾಧಿಸಲಾಗಿದೆ. ಇನ್ನೂ 24,652 ಕಾರ್ಮಿಕರು ಬಾಕಿಯಿದ್ದು, ವಲಸೆ, ಮರಣ ಸೇರಿ ನಾನಾ ಕಾರಣಗಳಿಂದಾಗಿ ಇ-ಕೆವೈಸಿಯಿಂದ ದೂರ ಉಳಿದಿದ್ದಾರೆ.

**ಇ-ಕೆವೈಸಿಯಿಂದ ಏನು ಪ್ರಯೋಜನ?:** ಮನರೇಗಾದಲ್ಲಿ ನೋಂದಣಿಯಾದ ಕಾರ್ಮಿಕರ ಜಾಬ್ ಕಾರ್ಡ್‌ಗಳಿಗೆ ಈಗಾಗಲೇ ಆಧಾರ್ ಕಾರ್ಡ್ ಸಂಖ್ಯೆ ಜೋಡಣೆಯಾಗಿದೆ. ಆದರೂ, ಅಕ್ರಮಗಳಿಗೆ ಕಡಿವಾಣ ಇಲ್ಲದಂತಾಗಿದೆ. ಹೀಗಾಗಿ, ಇ-ಕೆವೈಸಿಯಿಂದ ಜಾಬ್ ಕಾರ್ಡ್ ಹೊಂದಿರುವ ಕಾರ್ಮಿಕರ ಎಲ್ಲಾ ಸದಸ್ಯರ ಭಾವಚಿತ್ರವನ್ನು ಆಯಾ ಸಂಖ್ಯೆಗೆ ಜೋಡಿಸಲಾಗುತ್ತಿದೆ. ಇದರಿಂದ ಖಾತರಿ ಯೋಜನೆಯಡಿ ಕೆಲಸಕ್ಕೆ ಹಾಜರಾಗುವ ಕಾರ್ಮಿಕರ ಹಾಜರಾತಿಯನ್ನು ಫೋಟೋ ಸಮೇತ ತಾಳೆ ಮಾಡಲು ಸಹಕಾರಿಯಾಗಲಿದೆ. ಉದ್ಯೋಗ ಖಾತರಿಯಡಿ ಕರ್ತವ್ಯಕ್ಕೆ ಹಾಜರಾಗುವ ಕಾರ್ಮಿಕರಿಗೆ ಮಾತ್ರ ಹಣ ಸಂದಾಯವಾಗಲಿದೆ. ಒಬ್ಬರ ಹೆಸರಿನಲ್ಲಿ ಮತ್ತೊಬ್ಬರು ಹಾಜರಾಗುವುದನ್ನು ಸಂಪೂರ್ಣ ತಡೆಗಟ್ಟಲು ಸಹಕಾರಿಯಾಗಲಿದೆ. ಕಲಬುರಗಿ ಜಿಲ್ಲೆಯಿಂದ ಜನರು ಗುಳೆ ಹೋಗುವುದನ್ನು ತಪ್ಪಿಸಲು ನೆರವಾಗುವುದೇ ನರೇಗಾ?.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ವಿಶ್ರಾಂತಿ ತೆಗೆದುಕೊಳ್ಳಿ, ಕೆಲಸದ ನಡುವೆ ಸಾಧ್ಯವಾದಷ್ಟೂ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಕೋಪ ಅಲ್ಪಾವಧಿ ಹಾಗೂ ಅದು ನಿಮ್ಮನ್ನು ತೊಂದರೆಯಲ್ಲಿ ಸಿಲುಕಿಸಬಹುದೆಂದು ಅರ್ಥ ಮಾಡಿಕೊಳ್ಳುವ ಸಮಯ.

**ವೃಷಭ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಊಹೆಗಳು ಲಾಭ ತರುತ್ತವೆ. ಕುಟುಂಬದ ಸದಸ್ಯರು ನಿಮ್ಮ ಜೀವನದಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುತ್ತಾರೆ. ಪ್ರಣಯಕ್ಕೆ ಒಳ್ಳೆಯ ದಿನ. ದಿಟ್ಟ ಕ್ರಮಗಳು ಮತ್ತು ನಿರ್ಧಾರಗಳು ಅನುಕೂಲಕರ ಲಾಭಗಳನ್ನು ತರುತ್ತದೆ.

**ಮಿಥುನ** ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ – ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ, ಮುದ್ದಾಡುವಿಕೆ, ಮುಗ್ಧ ಮುಗುಳ್ನಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು. ನಿಮ್ಮ ರೆಸ್ಯೂಮ್ ಕಳುಹಿಸಲು ಅಥವಾ ಸಂದರ್ಶನಕ್ಕೆ ಹಾಜರಾಗಲು ಒಳ್ಳೆಯ ದಿನ.

**ಕರ್ಕಾಟಕ** ಸಂಜೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ. ಡೇಟ್ ಕಾರ್ಯಕ್ರಮ ವಿಫಲವಾಗಬಹುದಾದ್ದರಿಂದ ನಿರಾಶೆಯಾಗಬಹುದು.

**ಸಿಂಹ** ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ದೀರ್ಘ ಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ. ಮಕ್ಕಳು ಅಧ್ಯಯನದಲ್ಲಿ ಅವರ ನಿರಾಸಕ್ತಿಯಿಂದಾಗಿ ಶಾಲೆಯಲ್ಲಿ ನಿರಾಸೆ ಉಂಟುಮಾಡಬಹುದು.

**ಕನ್ಯಾ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ಇತರರಲ್ಲಿ ಅನಗತ್ಯವಾಗಿ ದೋಷಗಳನ್ನು ಹುಡುಕುವ ಬುದ್ಧಿಗೆ ಸಂಬಂಧಿಕರಿಂದ ಟೀಕೆ ಎದುರಾಗಬಹುದು. ಇದು ಕೇವಲ ಸಮಯ ವ್ಯರ್ಥ ಮಾಡುವಿಕೆ ಎಂದು ಅರ್ಥ ಮಾಡಿಕೊಳ್ಳಬೇಕು.

**ತುಲಾ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ.

**ವೃಶ್ಚಿಕ** ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯ ಇರುತ್ತದೆ ಆದರೆ ಹಿಂದಿನ ದಿನಗಳಲ್ಲಿ ಮಾಡಲಾಗಿರುವ ಅನಗತ್ಯ ಖರ್ಚುಗಳ ಕಾರಣದಿಂದಾಗಿ ಅವರ ಹತ್ತಿರ ಸಾಕಷ್ಟು ಹಣ ಇರುವುದಿಲ್ಲ. ಸ್ನೇಹಿತರ ಸಮಸ್ಯೆಗಳು ನಿಮಗೆ ಕೆಟ್ಟದೆನಿಸುವಂತೆ ಮಾಡಬಹುದು.

**ಧನಸ್ಸು** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ ಹಾಗೂ ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ – ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ.

**ಮಕರ** ಆಶಾವಾದಿಗಳಾಗಿರಿ, ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು, ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ.

**ಕುಂಭ** ನೀವು ಚೈತನ್ಯದಿಂದ ತುಂಬಿರುತ್ತೀರಿ, ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು. ಮನೆಯ ಕೆಲಸ ಸುಸ್ತು ಮಾಡುತ್ತದೆ ಮತ್ತು ನಿಮ್ಮನ್ನು ಮಾನಸಿಕ ಒತ್ತಡದಲ್ಲಿರಿಸುತ್ತದೆ.

**ಮೀನ** ನೀವು ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ – ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ, ಮುದ್ದಾಡುವಿಕೆ, ಮುಗ್ಧ ಮುಗುಳ್ನಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು. ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲವನ್ನು ಕೇಳಬಹುದು.

### ಯುವ ಪೀಳಿಗೆ ರಾಯಣ್ಣನ ದೇಶಾಭಿಮಾನ ಬೆಳಸಿಕೊಳ್ಳಬೇಕು: ಶಾಸಕ ಮಹಾಂತೇಶ ಕೌಜಲಗಿ

# ಸಂಗೊಳ್ಳಿ ರಾಯಣ್ಣನ ಕೀರ್ತಿ ಇಡೀ ದೇಶಕ್ಕೆ ಚಿರಪರಿಚಿತ

• ಉದಯವಾಹಿನಿ ಬೆಳಗಾವಿ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಕೀರ್ತಿ ಇಡೀ ದೇಶಕ್ಕೆ ಚಿರಪರಿಚಿತ ಆಗಿದೆ. ಯುವ ಪೀಳಿಗೆ ದೇಶಾಭಿಮಾನ ಬೆಳಸಿಕೊಳ್ಳಬೇಕು ಎಂಬ ಉದ್ದೇಶದಿಂದ ಸಂಗೊಳ್ಳಿ ರಾಯಣ್ಣನ ಹೋರಾಟ ಪರಿಚಯಿಸುವ ನಿಟ್ಟಿನಲ್ಲಿ, ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇಂದಿನ ಪೀಳಿಗೆ ಶೂರ ಸಂಗೊಳ್ಳಿ ರಾಯಣ್ಣ ದೇಶ ಪ್ರೇಮ ಬೆಳಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರು ಹಾಗೂ ಬೈಲಹೊಂಗಲ ಶಾಸಕರಾದ ಮಹಾಂತೇಶ ಕೌಜಲಗಿ ಅವರು ತಿಳಿಸಿದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸಂಗೊಳ್ಳಿ ಶಾಲಾ ಆವರಣದಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ -2026 ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯಿತ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಾಹುಲ್ ಶಿಂಧೆ ಮಾತನಾಡಿ ಸಂಗೊಳ್ಳಿ ರಾಯಣ್ಣ ಉತ್ಸವ ರಾಜ್ಯ ಸರ್ಕಾರ ಪ್ರತಿ ವರ್ಷ ಅದ್ದೂರಿಯಾಗಿ ಆಚರಿಸುತ್ತಿದೆ. ನಂದಗಡನಲ್ಲಿ ವೀರಭೂಮಿ ಸಂಗೊಳ್ಳಿ ರಾಯಣ್ಣ ಅವರ ವಸ್ತು ಸಂಗ್ರಹಾಲಯ ನಿರ್ಮಾಣ ಮಾಡಲಾಗಿದೆ. ಮುಂದಿನ ಪೀಳಿಗೆಗೆ ರಾಯಣ್ಣನ ದಿಟ್ಟತನ, ದೇಶ ಪ್ರೇಮ ತಿಳಿಸುವ ನಿಟ್ಟಿನಲ್ಲಿ ವೀರಭೂಮಿ ಮ್ಯೂಸಿಯಂ, ಸಂಗೊಳ್ಳಿಯಲ್ಲಿ ರಾಕ್ ಗಾರ್ಡನ್ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದರು. ಸಂಗೊಳ್ಳಿಯ ಶ್ರೀ ಗುರು ಸಿದ್ಧಲಿಂಗೇಶ್ವರ ಸಂಸ್ಥಾನ ಹಿರೇಮಠದ ಶ್ರೀ ಷ.ಬ್ರ.ಗುರುಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ, ಕಿತ್ತೂರಿನ ರಾಜಗುರು ಸಂಸ್ಥಾನ ಕಲ್ಮಠದ ಶ್ರೀ ಮ.ನಿ.ಪ್ರ.ಸ್ವ. ಮಡಿವಾಳ ರಾಜಯೋಗೀಂದ್ರ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಬೈಲಹೊಂಗಲ ಉಪ ವಿಭಾಗಾಧಿಕಾರಿ ಪ್ರವೀಣ ಜೈನ, ಪೊಲೀಸ್ ಉಪ ಅಧೀಕ್ಷಕಾರದ ವೀರಯ್ಯ ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಗ್ರಾಮ ಪಂಚಾಯತಿ ಅಧ್ಯಕ್ಷೆ ರೂಪಾ ಚಚಡಿ, ಬೈಲಹೊಂಗಲ ತಹಶೀಲ್ದಾರ್ ಹನುಮಂತ ಶಿರಹಟ್ಟಿ, ಕಿತ್ತೂರು ತಹಶೀಲ್ದಾರ್ ಕಲ್ಲನಗೌಡ ಪಾಟೀಲ, ಸವದತ್ತಿ ತಹಶೀಲ್ದಾರ್ ಮಲ್ಲಿಕಾರ್ಜುನ್ ಹೆಗ್ಗನ್ನವರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

> ಸಂಗೊಳ್ಳಿಯಲ್ಲಿ ಈಗಾಗಲೇ ರಾಯಣ್ಣನ ಹೆಸರಿನಲ್ಲಿ ಸೈನಿಕ ಶಾಲೆ ನಿರ್ಮಾಣ ಮಾಡಲಾಗಿದೆ. ದೇಶ್ಯಾದಂತ್ಯ ವಿದ್ಯಾರ್ಥಿಗಳು ಬೇರೆ ಬೇರೆ ರಾಜ್ಯದಿಂದ ಶಾಲೆಗೆ ಪ್ರವೇಶ ಪಡೆಯುತ್ತಿದ್ದಾರೆ. ಇದರಿಂದ ರಾಜ್ಯಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೆ ಅವರ ಹೆಸರು ಪರಿಚಯಿಸಲಾಗಿದೆ ಎಂದು ಹೇಳಿದರು. ಸಂಗೊಳ್ಳಿಯ ರಾಕ್ ಗಾರ್ಡನ್ ವೀಕ್ಷಣೆಗೆ ಪ್ರತಿದಿನ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳು, ನೋಡುಗರು ಬರುತ್ತಿದ್ದಾರೆ. ರಾಯಣ್ಣ ಜೀವನ ಚರಿತ್ರೆ ಪರಿಚಯಿಸುತ್ತಿರುವುದು ಇದರ ಮೂಲ ಉದ್ದೇಶ. ಮುಂಬರುವ ದಿನಗಳಲ್ಲಿ ಸಂಗೊಳ್ಳಿಯಲ್ಲಿ ಮ್ಯೂಸಿಕಲ್ ಮೌಂಟ್ ನಿರ್ಮಾಣ ಮಾಡಲಾಗುವುದು.
>
> – ಮಹಾಂತೇಶ ಕೌಜಲಗಿ, ಶಾಸಕ

> ಬೆಳಗಾವಿ ಜಿಲ್ಲೆ ಉತ್ಸವಗಳ ನಾಡು. ದೇಶಕ್ಕೆ ಹೋರಾಡಿದ ಮಹನೀಯರ ಪರಿಚಯ ಯುವ ಪೀಳಿಗೆಗೆ ಸಾರುವುದು ಉತ್ಸವಗಳ ಆಚರಿಸುವ ಉದ್ದೇಶವಾಗಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ಮಾನ ಹೋರಾಟಗಾರರಾದ ರಾಯಣ್ಣ, ರಾಣಿ ಚನ್ನಮ್ಮನಂತಹ ಮಹನೀಯರ ದೇಶಪ್ರೇಮ ಪ್ರತಿಯೊಬ್ಬರು ಬೆಳಸಿಕೊಳ್ಳಬೇಕು.
>
> –ಬಾಬಾಸಾಹೇಬ್ ಪಾಟೀಲ, ಕಿತ್ತೂರು ಶಾಸಕ

## ದಾನಕ್ಕಿಂತ ಹೆಚ್ಚಿನ ಭೂಮಿ ಒತ್ತುವರಿ ಆರೋಪ- ಶಾಲೆಗೆ ಬೀಗ

• ಉದಯವಾಹಿನಿ, ಬ್ಯಾಡಗಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮಲ್ಲೂರು ಗ್ರಾಮದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗೆ ದಾನ ನೀಡಿದ್ದ ಭೂಮಿಗಿಂತಲೂ ಹೆಚ್ಚು ಒತ್ತುವರಿ ಮಾಡಿರುವ ಭೂಮಿಯನ್ನು ವಾಪಸ್ ಕೊಡುವಂತೆ ಆಗ್ರಹಿಸಿ ಭೂಮಾಲೀಕರೊಬ್ಬರು ಶಾಲೆಗೆ ಬೀಗ ಹಾಕಿದ ಘಟನೆ ನಡೆಯಿತು. ಇದರಿಂದ ಆತಂಕಗೊಂಡ ಸಿಬ್ಬಂದಿ ಹಾಗೂ ಮಕ್ಕಳು ಎರಡು ಗಂಟೆಗೂ ಹೆಚ್ಚು ಹೊತ್ತು ಬಿಸಿಲಿನಲ್ಲಿಯೇ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ದಾನಕ್ಕಿಂತ ಹೆಚ್ಚಿನ ಭೂಕಬಳಿಕೆ ನಡೆದು ನನಗೆ ನಮ್ಮ ಕುಟುಂಬಕ್ಕೆ ಅನ್ಯಾಯವಾಗಿದೆ ಎಂದು ಭೂಮಾಲೀಕ ವೀರಪ್ಪ ಕುಲಕರ್ಣಿ ಆರೋಪಿಸಿದರು.

2005ರಲ್ಲಿ ಶಂಕ್ರಪ್ಪ ಕುಲಕರ್ಣಿ ಸರ್ಕಾರಿ ಉರ್ದು ಶಾಲೆಗೆ 5 ಗುಂಟೆ ಜಾಗೆಯನ್ನು ದಾನವಾಗಿ ನೀಡಿದ್ದರು. ಆದರೆ 15 ಗುಂಟೆ ಜಾಗೆಯನ್ನು ಅತಿಕ್ರಮಣ ಮಾಡಿ ಅನ್ಯಾಯ ಮಾಡಿದ್ದಾರೆ ಎಂದು ದಾನಿ ಶಂಕ್ರಪ್ಪ ಅವರ ಪುತ್ರರು ಆರೋಪಿಸಿದ್ದಾರೆ.

**ಪ್ರಕರಣ ನ್ಯಾಯಾಲಯದಲ್ಲಿ:** ಹೆಚ್ಚು ಜಾಗೆಯನ್ನು ಒತ್ತುವರಿ ಮಾಡಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಳೆದ 10ವರ್ಷಗಳ ಹಿಂದೆ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದೆ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಶಾಲೆಗೆ ತಹಶೀಲ್ದಾರ ಚಂದ್ರಶೇಖರ ನಾಯಕ ಮತ್ತು ಬಿಇಒ ಎಸ್.ಜಿ.ಕೋಟಿ ಸ್ಥಳಕ್ಕೆ ಆಗಮಿಸಿ ಬೀಗ ತೆಗೆಯುವಂತೆ ಮನವಿ ಮಾಡಿದ್ದಾರೆ. ಗ್ರಾಮಸ್ಥರ ಹಾಗೂ ಪೊಲೀಸರ ಮಧ್ಯಸ್ಥಿಕೆಯಲ್ಲಿ ಸಂಧಾನ ನಡೆಸಲಾಯಿತು ಎಂಬ ಮಾಹಿತಿ ಲಭ್ಯವಾಗಿದೆ.

## ಜ. 31ರಂದು ಹುಕ್ಕೇರಿಯಲ್ಲಿ ವಿಶಾಲ ಹಿಂದೂ ಸಮ್ಮೇಳನ

• ಉದಯವಾಹಿನಿ, ಹುಕ್ಕೇರಿ

ಪಟ್ಟಣದಲ್ಲಿ ಜ.31 ರಂದು ಮಧ್ಯಾಹ್ನ 2 ಗಂಟೆಗೆ ವಿಶ್ವರಾಜ ಭವನದಲ್ಲಿ 'ವಿಶಾಲ ಹಿಂದೂ ಸಮ್ಮೇಳನ' ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ನಿರ್ದೇಶಕ ಪೃಥ್ವಿ ಕತ್ತಿ ಹೇಳಿದರು. ಸೂಕ್ತವಾದುದನ್ನೇ ಆರಂಭಿಸಿ, ಸೂಕ್ತ ಮಾರ್ಗದಲ್ಲೇ ಇರಿ. ಸಂಘಟನಾ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಅಡವಿ ಸಿದ್ದೇಶ್ವರ ಮಠದಿಂದ ಶೋಭಾ ಯಾತ್ರೆ ಮತ್ತು ಕುಂಭ ಮೇಳದ ಮೆರವಣಿಗೆ ಹಳೆ, ಹೊಸ ಬಸ್ ನಿಲ್ದಾಣ ಬಳಸಿಕೊಂಡು ಬೈಪಾಸ್ ರಸ್ತೆಯ ಮೂಲಕ ವಿಶ್ವರಾಜ ಭವನ ತಲುಪುವುದು. ಸಭೆಯಾಗಿ ಮಾರ್ಪಟ್ಟ ಬಳಿಕ ಮುಖ್ಯ ಸಮಾರಂಭ ಜರುಗುವುದು. ಮೆರವಣಿಗೆಯಲ್ಲಿ ಸ್ಥಳೀಯ ಜನಪದ ಕಲಾವಿದರು, ವಾದ್ಯಮೇಳದವರು, ಡೊಳ್ಳು ಕುಣಿತದವರು ಸೇರಿದಂತೆ ಎಲ್ಲಾ ಸಮುದಾಯದ ಜನರು ಪಾಲ್ಗೊಳ್ಳುವರು ಎಂದರು.

ಹಿರಿಯ ವಕೀಲರಾದ ಆರ್.ವಿ.ಜೋಶಿ, ಪಿ.ಎಸ್. ಮುತಾಲಿಕ, ಮುಖಂಡರಾದ ಮಹಾವೀರ ನಿಲಜಗಿ, ಸತ್ಯಪ್ಪ ನಾಯಿಕ, ಗುರುರಾಜ ಕುಲಕರ್ಣಿ, ಕಲಗೌಡ ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯ ಬಳಿಕ ಆಗಮಿಸಿದ ಎಲ್ಲರಿಗೂ ಅಲ್ಪ ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದರು.

## ಮರಗಳ ಕಟಾವ್‌ಗೆ ನಿಯಮ ಸರಳಗೊಳ್ಳಲಿ

• ಉದಯವಾಹಿನಿ, ಹಾನಗಲ್


ಉದಯವಾಹಿನಿ ಚಿತ್ರ

**ರೈತ ಸಂಘದಿಂದ ಮನವಿ**

ಕೃಷಿ ಭೂಮಿಯಲ್ಲಿನ ಮರಗಳ ಕಟಾವಿಗೆ ಸರಳ ನಿಯಮಗಳನ್ನು ರೂಪಿಸಿ ರೈತರ ಗೋಳನ್ನು ತಪ್ಪಿಸಬೇಕು, ರೈತರ ಪಾಲಿಗೆ ಮುಳುವಾದ ಈ ಕಾನೂನು ಬದಲಾಗಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘದಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ರೈತನ ಸ್ವಂತ ಜಮೀನಿನಲ್ಲಿನ ಗಿಡಗಳನ್ನು ಕಟಾವು ಮಾಡಿ ಕೃಷಿ ಕಾರ್ಯಕ್ಕೆ ಅನುಕೂಲ ಮಾಡಿಕೊಳ್ಳಲು ಈಗಿರುವ ಅರಣ್ಯ ಇಲಾಖೆಯ ಕಾನೂನು ರೈತರನ್ನು ಉಸಿರುಗಟ್ಟಿಸುತ್ತಿದೆ.

ಕಟಾವಿಗೆ ಪರವಾನಿಗೆ ಪಡೆಯಲು ವರ್ಷಗಳೇ ಬೇಕು. ಪರವಾನಿಗೆ ಪಡೆದ ಮೇಲೂ ಅದನ್ನು ಸಾಗಣೆ ಮಾಡಲು ಮತ್ತೆ ಅರಣ್ಯ ಇಲಾಖೆಯ ಮರ್ಜಿ ಕಾಯಬೇಕು. ಇಲ್ಲಸಲ್ಲದ ಪ್ರಕ್ರಿಯೆಗಳನ್ನು ಹೇರಿ ರೈತನಿಗೆ ಕಣ್ಣೀರು ತರಿಸುತ್ತಿರುವ ಕಾನೂನುಗಳು ಬದಲಾಗಿ ಸರಳ ನಿಯಮಗಳಲ್ಲಿ ಕೃಷಿ ಭೂಮಿಯಲ್ಲಿ ಗಿಡಗಳ ಕಟಾವಿಗೆ ಅನುಮತಿ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೃಷಿ ಭೂಮಿ ಹಂಚಿಕೆಯಾಗಿ ಇಂದು ಕೃಷಿ ಕುಟುಂಬಗಳು ಚಿಕ್ಕದಾಗಿವೆ. ಇರುವ ಭೂಮಿಯಲ್ಲಿ ಕಾಡು ಮರಗಳು ಬೆಳೆದು ನಿಂತಿವೆ. ಇದರಿಂದ ಕೃಷಿಗೆ ಅನಾನುಕೂಲವಾಗಿದೆ. ಈ ಮರಗಳಡಿ ಬೆಳೆ ಬೆಳೆಯುತ್ತಿಲ್ಲ. ಕೃಷಿಗೂ ಅನಾನುಕೂಲ.

ಮರಗಳ ತೆರವಿಗೆ ಸರ್ಕಾರ, ಸಂಬಂಧಿಸಿದ ಇಲಾಖೆಗಳು ಹಳೆ ನಿಯಮಗಳನ್ನು ಬದಲಿಸಿ, ಕೃಷಿಕನಿಗೆ ಅನಾನುಕೂಲವಾಗುವುದನ್ನು ತಪ್ಪಿಸಿ ಸುಲಭವಾಗಿ ಒಂದೇ ವಾರದಲ್ಲಿ ಮರ ಕಟಾವಿಗೆ ಪರವಾನಿಗೆ ಕೊಡುವಂತಾಗಬೇಕು. ತನ್ನ ಕೃಷಿ ಜಮೀನಿನಲ್ಲಿ ಬೆಳೆದ ಮರಗಳನ್ನು ತೆರವುಗೊಳಿಸಲು ಮುಂದಾಗಿ ಅರಣ್ಯ, ಇತರ ಇಲಾಖೆಗಳ ಕೈ ಸಿಕ್ಕರೆ ರೈತನ ವಾಹನವೂ ಸೆರೆಯಾಗಿ ರೈತನೂ ಸೆರೆಯಾಗಿ ದಿವಾಳಿಯಾಗುವ ಸ್ಥಿತಿ ಇದೆ ಎಂದು ಮನವಿಯಲ್ಲಿ ಹೇಳಲಾಗಿದೆ.

## ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನೌಕರನ ಸಾವು

• ಉದಯವಾಹಿನಿ, ಸಂಕೇಶ್ವರ

ಇಲ್ಲಿನ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸುಣ್ಣ ಸಾಗಿಸುವ ಬೆಲ್ಟ್ ಮೇಲೆ ಬರುತಿದ್ದ ಸುಣ್ಣದ ಚೀಲಗಳನ್ನು ಹಿಡಿದಿಟ್ಟುಕೊಳ್ಳುವಾಗ ಬೆಲ್ಟ್‌ನಲ್ಲಿ ಬಿದ್ದು ದಿನಗೂಲಿ ಕಾರ್ಮಿಕ ಸಚಿನ ಬಸಪ್ಪಾ ದ್ಯಾಮನಿ(36) ಮೃತಪಟ್ಟಿದ್ದಾರೆ. ಇವರು ಇಲ್ಲಿಗೆ ಸಮೀಪದ ಅಮ್ಮಣಿಭಾವಿ ಗ್ರಾಮದವನು. ಈ ಕುರಿತು ಸಂಕೇಶ್ವರ ಪೊಲಿಸರು ಪ್ರಕರಣ ದಾಖಲಿಸಿದ್ದಾರೆ. ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಕಾರ್ಮಿಕ ಸಂಘದ ಅಧ್ಯಕ್ಷ ಮೋಹನ ಕೋಟಿವಾಲೆ ಆಗ್ರಹಿಸಿದ್ದಾರೆ.

## ಯೋಜನೆಯ ಉಪಯೋಗ ಪಡೆಯುವಂತೆ ಕರೆ


ಉದಯವಾಹಿನಿ ಚಿತ್ರ

> ವಿದ್ಯಾರ್ಥಿಗಳಿಗೆ ಆಯುಷ್ ಪದ್ಧತಿಗಳ ಬಗ್ಗೆ ವಿವರವಾಗಿ ಹಾಗೂ ಇಲಾಖೆ ಬಗ್ಗೆ ಮಾಹಿತಿಗಳನ್ನು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಚಿಕಿತ್ಸಾಲಯಗಳು, ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಯ ಬಗ್ಗೆ ಮಾಹಿತಿಯನ್ನು ತಿಳಿಸಿದ್ದೇನೆ.
>
> – ಡಾ.ಬೊಮ್ಮಣ್ಣ ಅಬ್ಬೇನಹಳ್ಳಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಡಳಿತ ವೈದ್ಯಾಧಿಕಾರಿ

• ಉದಯವಾಹಿನಿ, ಚಿತ್ರದುರ್ಗ

ಪರಿಶಿಷ್ಟ ಪಂಗಡ ವರ್ಗದ ಮುರಾರ್ಜಿ ದೇಸಾಯಿ ವಸತಿ ಶಾಲೆ ಚಳ್ಳಕೆರೆ ಇಲ್ಲಿ ಮಂಗಳವಾರ ವಿದ್ಯಾರ್ಥಿ ಚೇತನ ಆಯುಷ್ ಸೇವಾ ಕಾರ್ಯಕ್ರಮರ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀ ರೇವಣಸಿದ್ದೇಶ್ವರ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮವನ್ನು ಚಿತ್ರದುರ್ಗ ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ನಾಗಸಮುದ್ರ ಔಷಧಿ ಸಸ್ಯಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು ನಂತರ ಮಾತನಾಡಿದ ಅವರು ವಿದ್ಯಾರ್ಥಿ ಚೇತನ ಕಾರ್ಯಕ್ರಮದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತ ವಿದ್ಯಾರ್ಥಿ ಚೇತನ ಕಾರ್ಯಕ್ರಮವು ವಿದ್ಯಾರ್ಥಿಗಳ ಶಾರೀರಿಕ, ಮಾನಸಿಕ ಮತ್ತು ನೈತಿಕ ಆರೋಗ್ಯವನ್ನು ಸುಧಾರಿಸುವ ಉದ್ದೇಶದಿಂದ ಆಯುಷ್ ಇಲಾಖೆ ಮೂಲಕ ಜಾರಿಗೊಳಿಸಲಾಗಿರುವ ಒಂದು ಮಹತ್ವದ ಯೋಜನೆಯಾಗಿದ್ದು ಇದರಲ್ಲಿ ನೀಡುವ ಸೇವೆಗಳು ಮತ್ತು ದೊರೆಯಬಹುದಾದ ಇತರ ಸೇವೆಗಳ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ಪಡೆದು ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು ಎಂದರು ಇದೇ ಸಂದರ್ಭದಲ್ಲಿ ಆಯುಷ್ ಕೈಪಿಡಿ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಡಾ.ಚನ್ನಬಸವರಾಜ ಆರ್ ಡಿ ಪ್ರಾಸ್ತವಿಕ ನುಡಿಯಲ್ಲಿ ಇವರು ಮಾತನಾಡುತ್ತಾ ವಿದ್ಯಾರ್ಥಿ ಚೇತನ ಕಾರ್ಯಕ್ರಮದ ರೂಪರೇಷೆಗಳು, ಹಾಗೂ ಇದರಲ್ಲಿ ಇರುವ ಕಾರ್ಯಕ್ರಮಗಳ ಪಟ್ಟಿಯನ್ನು ತಿಳಿಸಿದರು.

ವಸತಿ ಶಾಲೆಯ ಪ್ರಾಂಶುಪಾಲರಾದ ರೇವಣಸಿದ್ದೇಶ್ವರ ಇವರು ಅಧ್ಯಕ್ಷೀಯ ಭಾಷಣದಲ್ಲಿ ಈ ಕಾರ್ಯಕ್ರಮ ಒಂದು ಉತ್ತಮವಾದ ಕಾರ್ಯಕ್ರಮವಾಗಿದ್ದು ವಿದ್ಯಾರ್ಥಿಗಳ ಸಂಪೂರ್ಣ ಉಪಯೋಗವನ್ನು ಪಡೆದುಕೊಂಡು ಆರೋಗ್ಯವಂತ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ತಿಳಿಸಿದರು. ನಿರೂಪಣೆ ಶ್ರೀ ಅನಿಲ್ ಉಪ ಪ್ರಾಂಶುಪಾಲರು ಪ್ರಾರ್ಥನೆ ಶ್ರೀ ಬಸವರಾಜ ಮತ್ತು ಮಕ್ಕಳಿಂದ ನೆರವೇರಿತು.

## ಪರೀಕ್ಷಾ ಸಮಯ ಬದಲಾವಣೆ; ಮರು ಪರೀಕ್ಷೆಗೆ ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಣೆಬೆನ್ನೂರು

**ಯಾವುದೇ ಮಾಹಿತಿ ತಿಳಿಸಿಲ್ಲ**

ಇಲ್ಲಿನ ಆರ್‌ಟಿಇಎಸ್ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಜ.12 ರಂದು ಮಧ್ಯಾಹ್ನ ಅವಧಿಗೆ ನಡೆಯಬೇಕಿದ್ದ 'ಸಮಗ್ರ ಅರ್ಥಶಾಸ್ತ್ರ ವಿಷಯದ ಪರೀಕ್ಷೆ ಬೆಳಿಗಿನ ಅವಧಿಗೆ ಪರೀಕ್ಷೆ ಮುಗಿದ್ದರಿಂದ ಪರೀಕ್ಷೆಯಿಂದ ವಂಚಿತರಾದ ನೂರಾರು ವಿದ್ಯಾರ್ಥಿಗಳು ಮತ್ತೊಂದು ಬಾರಿ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಿಗೆ ಮನವಿ ಸಲ್ಲಿಸಿದರು.

ಧಾರವಾಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಪರೀಕ್ಷೆಗಳ ವೇಳಾಪತ್ರಿಕೆಯ ಬದಲಾವಣೆಯಿಂದ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಸಿಗದ ಕಾರಣ ಬೆಳಗಿನ ಅವಧಿಯ ಪರೀಕ್ಷೆಯನ್ನು ಅವರ ಪರೀಕ್ಷಾ ಹಾಲ್‌ಟಿಕೆಟ್ ವೇಳಾಪಟ್ಟಿಯಂತೆ ಮಧ್ಯಾಹ್ನದ ಅವಧಿಗೆ ಪರೀಕ್ಷೆ ಬರೆಯಲು ಬಂದಿದ್ದಾರೆ.

ಹಾವೇರಿ ಜಿಲ್ಲೆಯ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಾಲ್ಲೂಕಿನ ಶಿಗ್ಗಾಂವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ರಾಣೆಬೆನ್ನೂರಿನ ಆರ್‌ಟಿಇಎಸ್ ಕಾಲೇಜಿನಲ್ಲಿ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಸಲಾಗುತ್ತಿದೆ. ಧಾರವಾಡ ವಿಶ್ವವಿದ್ಯಾಲಯದಿಂದ ಜ. 12ರಂದು ನಡೆದ ಸಮಗ್ರ ಅರ್ಥಶಾಸ್ತ್ರ ವಿಷಯದ ಪರೀಕ್ಷೆ ಸಮಯ ಬದಲಾಗಿದ್ದರಿಂದ ಹಾಲ್‌ಟಿಕೆಟ್‌ನಲ್ಲಿ ಸಮಯ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ನಮೂದಾಗಿದೆ. ಆದರೆ ಮಧ್ಯಾಹ್ನ ನಡೆಸಬೇಕಾದ ಪರೀಕ್ಷೆ ಬೆಳಿಗ್ಗೆ 9 ಗಂಟೆಗೆ ಆರಂಭವಾಗಿದೆ.

ಪರೀಕ್ಷೆ ಬರೆಯಲು ಮುಂದಾದ ವಿದ್ಯಾರ್ಥಿಗಳಿಗೆ ಸಮಯ ಬದಲಾವಣೆ ಮಾಡಿದ ಬಗ್ಗೆ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದವರಾಗಲಿ ಅಥವಾ ಪರೀಕ್ಷಾ ಕೇಂದ್ರದವರಾಗಲಿ ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿ ತಿಳಿಸಿಲ್ಲ. ಹಾಗಾಗಿ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

## ಹಿರೇಬಾಗೇವಾಡಿ ಬಳಿ ಬೀದಿ ನಾಯಿಗಳ ಶೆಡ್: ವಿರೋಧ

• ಉದಯವಾಹಿನಿ, ಹಿರೇಬಾಗೇವಾಡಿ


ಬೆಳಗಾವಿ ನಗರದ ಬೀದಿನಾಯಿಗಳನ್ನು ಬಿಡಲು, ಹಿರೇಬಾಗೇವಾಡಿ ಸಮೀಪದ ಮಲ್ಲಪ್ಪನ ಗುಡ್ಡದಲ್ಲಿ ಶೆಡ್ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಗ್ರಾಮಸ್ಥರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ನಿರ್ಜನ ಪ್ರದೇಶದಲ್ಲಿ ನಾಯಿಗಳನ್ನು ಬಿಡುವ ಬದಲು ಹಳ್ಳಿಗೆ ಕೂಗಳತೆಯಲ್ಲೇ ಶೆಡ್ ನಿರ್ಮಿಸುತ್ತಿರುವುದು ಸರಿಯಲ್ಲ ಎಂದು ಜನ ದೂರಿದ್ದಾರೆ. ಬೆಳಗಾವಿ ನಗರದಲ್ಲಿ ಈಗ ಬೀದಿ ನಾಯಿಗಳ ಸಂಖ್ಯೆ ವಿಪರೀತ ಹೆಚ್ಚಾಗಿದೆ.

ಇವುಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿ, ಒಂದೆಡೆ ಇರಿಸಿ ಪೋಷಣೆ ಮಾಡಲು ಪಾಲಿಕೆ ಮುಂದಾಗಬೇಕಿತ್ತು. ಆದರೆ, ಅದನ್ನು ಗ್ರಾಮೀಣ ಆಡಳಿತದ ತಲೆಯ ಮೇಲೆ ಹೇರಿದೆ. ಪರಿಣಾಮ ನಗರದ ಜನರ ಸಂಕಷ್ಟ ಈಗ ಹಿರೇಬಾಗೇವಾಡಿಗೆ ವರ್ಗವಾದಂತಾಗಿದೆ. ಮುಖ್ಯವಾಗಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಈ ಗುಡ್ಡದ ಪಕ್ಕದಲ್ಲೇ ನಿರ್ಮಾಣವಾಗಿದೆ. ಈ ವಿಶ್ವವಿದ್ಯಾಲಯ ಕಟ್ಟಡದಿಂದ ಕೆಲವೇ ದೂರದಲ್ಲಿ 2 ಎಕರೆ ಪ್ರದೇಶದಲ್ಲಿ ನಾಯಿಗಳ ಶೆಡ್ ನಿರ್ಮಿಸಲು ಸಿದ್ಧತೆ ನಡೆದಿದೆ.

# ಅಡಕೆ ಎಲೆಚುಕ್ಕಿ ರೋಗಕ್ಕಿಲ್ಲ ಪರಿಹಾರ; ಬೆಳೆಗಾರರು ಕಂಗಾಲ

### ಅಡಕೆ ಎಲೆಚುಕ್ಕಿ ರೋಗವನ್ನು ನೈಸರ್ಗಿಕ ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ಕೇಂದ್ರ, ರಾಜ್ಯ ಸರಕಾರ ವಿಫಲ

• ಉದಯವಾಹಿನಿ, ಶಿವಮೊಗ್ಗ


ಉದಯವಾಹಿನಿ ಚಿತ್ರ

**ಹೆಚ್ಚು ಪ್ರಮಾಣದಲ್ಲಿ ಬೆಳೆನಾಶ**

ಅಡಕೆ ಎಲೆಚುಕ್ಕಿ ರೋಗವನ್ನು ನೈಸರ್ಗಿಕ ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ಕೇಂದ್ರ, ರಾಜ್ಯ ಸರಕಾರ ಈವರೆಗೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಅಡಕೆ ಬೆಳೆಯುವ ದೇಶದ ಬಹುತೇಕ ಪ್ರದೇಶದಲ್ಲಿ ಎಲೆಚುಕ್ಕಿ ರೋಗ ವ್ಯಾಪಿಸಿದ್ದು, ರೈತರಿಗೆ ವಿಪರೀತ ನಷ್ಟ ಉಂಟಾಗಿದೆ. ರಾಜ್ಯದ ಮಲೆನಾಡು, ಕರಾವಳಿ ಪ್ರಾಂತ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿ ಅಡಕೆ ಗುರುತಾಗಿದೆ. ದೇಶದ ಒಟ್ಟು ಅಡಕೆ ಉತ್ಪಾದನೆ ಪ್ರಮಾಣದಲ್ಲಿ ರಾಜ್ಯದ ಪಾಲು ಶೇ.65 ರಷ್ಟಿದೆ. ಆರೇಳು ವರ್ಷದಿಂದ ಎಲೆಚುಕ್ಕಿ ರೋಗ ಉಲ್ಬಣಗೊಂಡ ಹಿನ್ನೆಲೆಯಲ್ಲಿ ಈ ವರ್ಷ ಅತೀ ಹೆಚ್ಚು ಪ್ರಮಾಣದಲ್ಲಿ ಬೆಳೆನಾಶವಾಗಿದೆ.

ಹವಾಮಾನ ವೈಪರೀತ್ಯದ ಪರಿಣಾಮ ಸುಮಾರು 7 ರೀತಿಯ ಪ್ರಬೇಧದ ಶಿಲೀಂಧ್ರಗಳು ಎಲೆಚುಕ್ಕಿ ರೋಗಕ್ಕೆ ಪ್ರಮುಖ ಕಾರಣ ಎಂದು ತಜ್ಞರು ಗುರುತಿಸಿದ್ದಾರೆ. ಅಧ್ಯಯನ ವರದಿಯಲ್ಲಿ ಹವಾಮಾನ ವೈಪರೀತ್ಯ ಎಂದು ಗುರುತಾದ ನಂತರ ಅಡಕೆ ಎಲೆಚುಕ್ಕಿ ರೋಗವನ್ನು ನೈಸರ್ಗಿಕ ರಾಷ್ಟ್ರೀಯ ವಿಪತ್ತು ವ್ಯಾಪ್ತಿಗೆ ಸೇರಿಸಲು ಸರಕಾರ ಹಿಂದೇಟು ಹಾಕಿರುವುದು ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಎಲೆಚುಕ್ಕಿ ರೋಗದ ಗಂಭೀರ ಪರಿಣಾಮ, ಬೆಳೆ ನಷ್ಟದ ಕುರಿತಂತೆ ಈ ವರೆಗೂ ಕೇಂದ್ರ, ರಾಜ್ಯ ಸರಕಾರಕ್ಕೆ ಅಧಿಕೃತ ಮಾಹಿತಿ ಸಲ್ಲಿಕೆಯಾಗಿಲ್ಲ. ಬೆಳೆಹಾನಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಸೂಕ್ತ ಪರಿಹಾರಧನ ಒದಗಿಸಲು ಮಾಹಿತಿ ಸಂಗ್ರಹಕ್ಕೆ ಸರಕಾರ ಆದೇಶ ನೀಡಬೇಕು ಎಂಬ ಆಗ್ರಹ ರೈತರಿಂದ ಕೇಳಿಬಂದಿದೆ.

ರೈತರು ಕೂಡ ಸ್ವಯಂ ಪ್ರೇರಿತರಾಗಿ ಬೆಳೆ ನಷ್ಟದ ಬಗ್ಗೆ ಸರಕಾರಕ್ಕೆ ಅರ್ಜಿ ಸಲ್ಲಿಸಿ ಮಾಹಿತಿ ನೀಡಿಲ್ಲ. ಹೀಗಾಗಿ, ಸರಕಾರಕ್ಕೆ ಎಲೆಚುಕ್ಕಿ ರೋಗ ಇದೆ ಎಂಬುದು ದಾಖಲೆಯಲ್ಲಿ ಒಂದಿಷ್ಟು ಮಾಹಿತಿ ಇದೆ ಹೊರತಾಗಿ ಬೆಳೆ ನಷ್ಟದ ಮಾಹಿತಿ ನಿಖರವಾಗಿಲ್ಲ. ಎಲೆಚುಕ್ಕಿ ರೋಗವನ್ನು ನೈಸರ್ಗಿಕ ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ ಸೂಕ್ತ ಕ್ರಮಕ್ಕೆ ಕೇಂದ್ರ, ರಾಜ್ಯ ಸರಕಾರ ಆದೇಶ ನೀಡಬೇಕು ಎಂಬ ಆಗ್ರಹ ರೈತರದ್ದಾಗಿದೆ.

> ಹವಾಮಾನ ವೈಪರೀತ್ಯದಿಂದಾಗಿ ಎಲೆಚುಕ್ಕಿ ವ್ಯಾಪಿಸುತ್ತಿದೆ ಎಂಬ ತಜ್ಞರ ಅಧ್ಯಯನವನ್ನು ಪರಿಗಣಿಸಿ ಕೇಂದ್ರ, ರಾಜ್ಯ ಸರಕಾರ ತಕ್ಷಣ ಎಲೆಚುಕ್ಕಿ ರೋಗವನ್ನು ನೈಸರ್ಗಿಕ ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು. ಇದರಡಿ ಅಡಕೆ ಬೆಳೆ ನಷ್ಟಕ್ಕೆ ಸರಕಾರಗಳು ರೈತರಿಗೆ ಪರಿಹಾರಧನ ಒದಗಿಸಲು ಕ್ರಮ ವಹಿಸಬೇಕು.
>
> – ಹಸಿರುಮನೆ ನಂದನ್, ಮಾಮ್‌ಕೋಸ್ ನಿರ್ದೇಶಕರು

**ಆರ್ಥಿಕ ನಷ್ಟ ಮಾಹಿತಿ ಇಲ್ಲ:** ನೈಸರ್ಗಿಕ ರಾಷ್ಟ್ರೀಯ ವಿಪತ್ತು ನಿಯಮಾವಳಿ ಅನ್ವಯ ಮಳೆ, ಗಾಳಿ, ಸಿಡಿಲಿನಿಂದ ಉಂಟಾಗುವ ಹಾನಿಗೆ ಸರಕಾರ ಒಂದಿಷ್ಟು ಪರಿಹಾರಧನ ನೀಡುತ್ತಿದೆ. ಕೇಂದ್ರ, ರಾಜ್ಯ ಸರಕಾರ ನೈಸರ್ಗಿಕ ರಾಷ್ಟ್ರೀಯ ವಿಪತ್ತು ಪರಿಹಾರಧನ ವಿತರಣೆಗಾಗಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹೆಸರಿನಲ್ಲಿ ಹೊಸ ನಿಯಮವನ್ನು 2024 ರಲ್ಲಿ ಅನುಷ್ಠಾನ ಮಾಡಿದೆ. ಪ್ರಕೃತಿ ವಿಕೋಪದಿಂದ ಸಾಗುವಳಿ ಕೃಷಿ ಭೂ ಪ್ರದೇಶದಲ್ಲಿ ಮರಳು ಸಂಗ್ರಹದಿಂದ ಹಾನಿಗೊಂಡರೆ, ಜಾನುವಾರುಗಳ ಸಾವಿಗೆ, ಕೊಟ್ಟಿಗೆ ಹಾನಿಗೆ ಪರಿಹಾರಧನ ಲಭ್ಯವಿದೆ.

**ಅಂದಾಜು ಸಮೀಕ್ಷೆ ಇಲ್ಲ**

ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ರೈತರು ವರ್ಷದಲ್ಲಿ ಮೂರ್ನಾಲ್ಕು ಬಾರಿ ತಜ್ಞರು ಶಿಫಾರಸು ಮಾಡಿದ ಔಷಧವನ್ನು ದುಬಾರಿ ವೆಚ್ಚದಲ್ಲಿ ಸಿಂಪಡಣೆ ಮಾಡಿದ್ದಾರೆ. ಆದರೂ ರೋಗ ನಿಯಂತ್ರಣಕ್ಕೆ ಬಾರದೆ ಮರದ ಜೀವಕ್ಕೂ ಕುತ್ತು ತಂದಿದ್ದು, ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಗೂ ಕಾರಣವಾಗಿದೆ. 2025ನೇ ಸಾಲಿನಲ್ಲಿ ಚುಕ್ಕಿರೋಗ ನಿರೀಕ್ಷೆಗೂ ಮೀರಿದ ರೀತಿಯಲ್ಲಿ ಉಲ್ಬಣಗೊಂಡಿದ್ದು ಆಗುಂಬೆ, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬೆಳೆ ಎಂಬುದು ರೈತರಿಗೆ ದೊರೆತಿಲ್ಲ. ಕಂದಾಯ, ತೋಟಗಾರಿಕೆ ಇಲಾಖೆ ಈವರೆಗೂ ಬೆಳೆ ನಷ್ಟದ ಅಂದಾಜು ಸಮೀಕ್ಷೆ ವರದಿಯನ್ನು ಸರಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಂಡಿಲ್ಲ.

ಭಾರತದಲ್ಲಿ 7.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 9.02 ಲಕ್ಷ ಟನ್ ಅಡಕೆ ಉತ್ಪಾದನೆಯನ್ನು ಗುರುತಿಸಲಾಗಿದೆ. ಆದರೆ, ಎಲೆಚುಕ್ಕಿ ರೋಗದಿಂದ ಆಗಿರುವ ಅಂದಾಜು ಬೆಳೆ ನಷ್ಟ ಪ್ರಮಾಣವನ್ನು, ರೈತರಿಗೆ ಆದ ಆರ್ಥಿಕ ನಷ್ಟದ ವಿವರವನ್ನು ಸರಕಾರ ಈವರೆಗೂ ಗುರುತಿಸುವ ಪ್ರಯತ್ನ ಮಾಡಿಲ್ಲ.

## ಸರ್ಕಾರಿ ನೌಕರನಿಗೆ 73.25 ಲಕ್ಷರೂ. ವಂಚನೆ

• ಉದಯವಾಹಿನಿ, ಬಾಗಲಕೋಟೆ

ಸರ್ಕಾರಿ ನೌಕರರೊಬ್ಬರಿಗೆ ಷೇರಿನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂಬ ಅಮಿಷ ತೋರಿಸಿ 73.25 ಲಕ್ಷ ವಂಚನೆ ಮಾಡಲಾಗಿದೆ. ಎಲೈಟ್ ಗೋಲ್ಡ್ ಸ್ಟಾಕ್ಸ್ ಟೀಮ್ ಎಂಬ ವಾಟ್ಸ್ ಆ್ಯಪ್ ಗ್ರೂಪಿಗೆ ಸರ್ಕಾರಿ ನೌಕರರನ್ನು ಸೇರಿಸಿಕೊಂಡು, ನಂತರ ಹಂತ. ಹಂತವಾಗಿ ಹಣ ಪಾವತಿಸಿಕೊಂಡು ವಂಚನೆ ಮಾಡಲಾಗಿದೆ. ತನಿಷ್ಕಾ ಖನ್ನಾ ಎಂಬ ಮಹಿಳೆಯು ವಾಟ್ಸ್ ಆ್ಯಪ್ ಮೂಲಕ ನೌಕರನನ್ನು ಸಂಪರ್ಕಿಸಿ, ತಂಡದಲ್ಲಿ ಷೇರು ಮಾರುಕಟ್ಟೆ ಮಾಹಿತಿದಾರಳಾಗಿದ್ದೇನೆ ಎಂದು ಪರಿಚಯಿಸಿಕೊಂಡಿದ್ದಾಳೆ.

ಅದನ್ನು ನಂಬಿದ ನೌಕರನು ತಂಗಿಯ ಬಳಿ 30 ಲಕ್ಷ ಪಡೆದುಕೊಂಡು ಆರೋಪಿಗಳು ಸೂಚಿಸಿದ ಬ್ಯಾಂಕ್ ಖಾತೆಗೆ ನಾಲ್ಕೇ ದಿನಗಳಲ್ಲಿ ಪಾವತಿಸಿದ್ದಾರೆ. ನಕಲಿ ಟ್ರೇಡಿಂಗ್ ಹೆಸರಿನಲ್ಲಿ ಬೇರೆ, ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ಹೂಡಿಕೆ ಮಾಡಿರುವ ಹಣವನ್ನು ಪಾವತಿಸಿದೇ ಮೋಸ ಮಾಡಿದ್ದಾರೆ. ಬಾಗಲಕೋಟೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ಅಂತಿಮ ಹೊಡೆತ ನೀಡಲು ಭಾರತಕ್ಕೆ ಅವಕಾಶ

## ಲಷ್ಕರ್-ಎ-ತೋಯ್ಬಾ ಸಂಘಟನೆಯಲ್ಲಿ ಕಾಣಿಸಿಕೊಂಡ ಬಿರುಕು


**ಇಸ್ಲಾಮಾಬಾದ್:** ಲಷ್ಕರ್-ಎ-ತೋಯ್ಬಾ ಸಂಘಟನೆ, ಪಾಕಿಸ್ತಾನವು ಮುದ್ದಾಗಿ ಬೆಳೆಸಿದ ಸಾಕುನಾಯಿ. ಪಾಕಿಸ್ತಾನದ ಬಾಹ್ಯ ಗುಪ್ತಚರ ಸಂಸ್ಥೆ ಐಎಸ್ಐ ಹೇಳಿದಾಗ ಭಾರತದ ಮೇಲೆ ಬೊಗಳುವ ಎಲ್ಇಟಿ, ಒಂದು ರೀತಿಯಲ್ಲಿ ಪಾಕಿಸ್ತಾನ ಸೇನೆಯ ಪ್ರಾಕ್ಸಿಯಾಗಿ ಕೆಲಸ ಮಾಡುತ್ತದೆ. ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು ಸಂಘಟನೆಲ್ಲಿ ಬಿರುಕು ಮೂಡಿಸಿದ್ದು, ಮಜಾಹೀದಿನ್‌ಗಳು ಪರಸ್ಪರ ಬಂದೂಕು ಗುರಿ ಇಟ್ಟಿದ್ದಾರೆ ಎಂಬ ಗುಪ್ತಚರ ಮಾಹಿತಿ ಲಭ್ಯವಾಗಿದೆ.



### ಲಷ್ಕರ್ ಗುರಿ ಬದಲಿಸಿದ ಪಾಕ್ ಸೇನೆ

ಐಎಸ್ಐ ಭಿನ್ನಾಭಿಪ್ರಾಯಗಳನ್ನು ನಿವಾರಿಸುವಲ್ಲಿ ಕೊಂಚ ಮಟ್ಟಿಗೆ ಯಶಸ್ಸು ಕಂಡಿದ್ದು, ಮರುಸಂಘಟನೆ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಆದರೆ ತಾಲಿಬಾನ್, ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ, ಬಲೂಚಿಸ್ತಾನ್ ರಾಷ್ಟ್ರೀಯತಾವಾದಿ ಸೈನ್ಯ ದ ವಿರುದ್ಧ, ಲಷ್ಕರ್-ಎ-ತೋಯ್ಬಾ ಸಂಘಟನೆಯನ್ನು ಬಳಸಿಕೊಳ್ಳುವ ಪಾಕಿಸ್ತನ ಸೇನೆ ಮತ್ತು ಐಎಸ್ಐ ನಿರ್ಧಾರವನ್ನು ಅನೇಕರು ಪ್ರಶ್ನಿಸಲಾರಂಭಿಸಿದ್ದಾರೆ. ಪಾಕ್ ಸೇನೆಯು ಲಷ್ಕರ್ ಸಂಘಟನೆಯನ್ನು ಚೀನಾ ಮತ್ತು ಪಾಶ್ಚಿಮಾತ್ಯರ ಅಗತ್ಯಗಳನ್ನು ಪೂರೈಸಲು ಬಳಸಿಕೊಳ್ಳುತ್ತಿದೆ ಎಂದು ಸಂಘಟನೆಯ ಅನೇಕ ಉನ್ನತ ನಾಯಕರು ಆರೋಪಿಸುತ್ತಿದ್ದಾರೆ.

ಹೌದು, ಲಷ್ಕರ್-ಎ-ತೋಯ್ಬಾ ಸಂಘಟನೆ ವಿಭಜನೆಯತ್ತ ಸಾಗುತ್ತಿದ್ದು, ತನ್ನ ಬಿಗ್ ಡ್ಯಾಡಿ ಐಎಸ್ಐ ನಿಯಂತ್ರಣಕ್ಕೂ ಸಿಗುತ್ತಿಲ್ಲ ಎಂದು ಭಾರತೀಯ ಗುಪ್ತಚರ ಸಂಸ್ಥೆಗಳು ಮಾಹಿತಿ ನೀಡಿವೆ. ಪಾಕಿಸ್ತಾನದಲ್ಲಿ ಸಂಘಟನೆಯ ಪರಿಸ್ಥಿತಿ ದಿನದಿಂದ ದಿನಕ್ಕೆ ಅಸ್ತವ್ಯಸ್ತಗೊಳ್ಳುತ್ತಿದ್ದು, ಐಎಸ್ಐ ಉಗ್ರ ಸಂಘಟನೆಯನ್ನು ಮತ್ತೆ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹರಸಾಹಸಪಡುತ್ತಿದೆ ಎಂದು ಹೇಳಲಾಗಿದೆ. ಈ ವರದಿ ಭಾರತಕ್ಕೆ ತನ್ನ ಕಾರ್ಯತಂತ್ರ ರೂಪಿಸಲು ಅತ್ಯಂತ ನೆರವಾಗಿದೆ.



ಮೊದಲಿನಿಂದಲೂ ಐಎಸ್ಐನ ನಿರ್ದೇಶನವನ್ನು ಅನುಸರಿಸುತ್ತಾ ಬಂದಿರುವ ಲಷ್ಕರ್, ಇದುವರೆಗೂ ಅದು ಹಾಕಿದ ಗೆರೆಯನ್ನು ದಾಟಿಲ್ಲ. ಆದರೀಗ ಸಂಘಟನೆಯಲ್ಲಿ ಆಂತರಿಕ ಸಮಸ್ಯೆಗಳು ಉದ್ಭವಿಸಲು ಪ್ರಾರಂಭಿಸಿವೆ. ಇತ್ತೀಚಿನ ತಿಂಗಳುಗಳಲ್ಲಿ ಸಂಘಟನೆ ತೆಗೆದುಕೊಳ್ಳುತ್ತಿರುವ ಕೆಲವು ನಿರ್ಧಾರಗಳ ಬಗ್ಗೆ, ಹಲವು ಉನ್ನತ ನಾಯಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ಗುಪ್ತಚರ ಬ್ಯೂರೋ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಲಷ್ಕರ್ ಭಾರತದ ವಿರುದ್ಧ ಬಾಂಗ್ಲಾವನ್ನು ಲಾಂಚ್ ಪ್ಯಾಡ್ ಆಗಿ ಬಳಸುವ ಪ್ಲ್ಯಾನ್ ನಡುವೆಯೇ ಪಾಕ್ ಜೊತೆಗೆ ತಿಕ್ಕಾಟ ಆರಂಭಿಸಿದೆ. ಭಾರತದ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಬಳಿಕ, ಎಲ್ಇಟಿ ಗಣನೀಯ ಪ್ರಮಾಣದ ಮೂಲಸೌಕರ್ಯವನ್ನು ಕಳೆದುಕೊಂಡಿದೆ.

ಅಂದಿನಿಂದ, ಮರುಸಂಘಟನೆ ಕಷ್ಟಕರವಾಗಿದ್ದು, ಅನೇಕರು ಐಎಸ್ಐ, ಪಾಕಿಸ್ತಾನ ಸೇನೆಯ ಮೇಲಿನ ನಂಬಿಕೆ ಕಳೆದುಕೊಂಡಿದ್ದಾರೆ. ಪಾಕ್ ಸೇನೆ ತಮ್ಮನ್ನು ಭಾರತೀಯ ಸೇನೆಯಿಂದ ರಕ್ಷಿಸದು ಎಂದು ಅನೇಕ ನಾಯಕರು ಬಹಿರಂಗವಾಗಿ ಹೇಳಲಾರಂಭಿಸಿದ್ದಾರೆ ಎಂದು ಭಾರತೀಯ ಗುಪ್ತಚರ ವರದಿಯಲ್ಲಿ ಉಲ್ಲೇಖಿಸಲಾಗಿದೆ.

### ತಾಲಿಬಾನ್ ವಿರುದ್ಧ ನಿಲ್ಲಲು ಲಷ್ಕರ್ ನಕಾರ

ಲಷ್ಕರ್-ಎ-ತೋಯ್ಬಾ ತಾಲಿಬಾನ್‌ಗೆ ತನ್ನ ಬೆಂಬಲವನ್ನು ಬಹಿರಂಗವಾಗಿ ಘೋಷಿಸಿದೆ. ಈಗ ಪಾಕಿಸ್ತಾನ ಸೇನೆ ಅಫ್ಘಾನಿಸ್ತಾನದ ವಿರುದ್ಧ ಹೋರಾಡುತ್ತಿರುವುದು, ಲಷ್ಕರ್ ನಾಯಕತ್ವವನ್ನು ಮತ್ತಷ್ಟು ಕೆರಳಿಸಿದೆ. ಈ ಅಸಮಾಧಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪಾಕ್ ಸೇನೆಯ ನಿರ್ಧಾರಗಳನ್ನು ಎಲ್ಇಟಿ ನಾಯಕರು ಬಹಿರಂಗವಾಗಿಯೇ ಪ್ರಶ್ನಿಸಲಾರಂಭಿಸಿದ್ದಾರೆ. ಆಡಳಿತ ವ್ಯವಸ್ಥೆಯು ತಮ್ಮಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ ಎಂದು ಅನೇಕ ನಾಯಕರು ಗುಡುಗಿದ್ದಾರೆ. ಪಾಕ್-ಅಫ್ಘಾನಿಸ್ತಾನ ಜಗಳ ಲಷ್ಕರ್‌ಗೆ ಅಪಥ್ಯವಾಗಿದೆ.

# ಆರ್ಕೆಸ್ಟ್ರಾ ಡ್ಯಾನ್ಸರ್ ಮೇಲೆ ಕಾಮುಕರಿಂದ ಸಾಮೂಹಿಕ ಅತ್ಯಾಚಾರ

**ಬಿಹಾರ:** ಒಂದು ವರ್ಷದ ಹಿಂದಷ್ಟೇ ಅಪಘಾತದಲ್ಲಿ ಪತಿಯನ್ನು ಕಳೆದುಕೊಂಡಿದ್ದ ಆರ್ಕೆಸ್ಟ್ರಾ ನೃತ್ಯಗಾರ್ತಿಯನ್ನು ಕಾಮುಕರು ಅಪಹರಿಸಿ ಅತ್ಯಾಚಾರವೆಸಗಿರುವ ಘಟನೆ ಬಿಹಾರದಲ್ಲಿ ನಡೆದಿದೆ. 24 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರವೆಸಗಲಾಗಿದೆ. ಕುಡಿದ ಮತ್ತಿನಲ್ಲಿದ್ದ ಆರೋಪಿಯೊಬ್ಬನ ಫೋನ್ ಬಳಸಿ ಯುವತಿ ಪೊಲೀಸರಿಗೆ ಕರೆ ಮಾಡಿ ರಕ್ಷಣೆ ಕೋರಿದ್ದಾಳೆ.ಇದರಿಂದಾಗಿ ಆಕೆಯ ರಕ್ಷಣೆ ಮತ್ತು ಆರು ಆರೋಪಿಗಳಲ್ಲಿ ಒಬ್ಬನ ಬಂಧಿಸಲಾಗಿದೆ. ರಾತ್ರಿ 9 ಗಂಟೆ ಸುಮಾರಿಗೆ ಕಾರಿನಲ್ಲಿ ಬಂದ ಇಬ್ಬರು ಪುರುಷರು ಆಕೆಯನ್ನು ಅಪಹರಿಸಿ ಸುಮಾರು 25 ಕಿ.ಮೀ ದೂರದ ಗೋಡೌನ್‌ಗೆ ಕರೆದೊಯ್ದಿದ್ದಾರೆ ಆಗಾಗಲೇ ಅಲ್ಲಿದ್ದ ಇತರೆ ನಾಲ್ವರು ಪುರುಷರು ಬಲವಂತವಾಗಿ ಮದ್ಯ ಸೇವಿಸಿ ನೃತ್ಯ ಮಾಡಿಸಿದ್ದಾರೆ ಎಂದು ಸಂತ್ರಸ್ತೆ ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಆರು ಪುರುಷರು ಒಬ್ಬರ ನಂತರ ಒಬ್ಬರು ಅತ್ಯಾಚಾರ ಎಸಗಿದ್ದಾರೆ. ಹಲ್ಲೆಯ ನಂತರ, ಐವರು ಪುರುಷರು ಆಕೆಯನ್ನು ಕೋಣೆಯೊಳಗೆ ಕೂಡಿಹಾಕಿ ಪರಾರಿಯಾಗಿದ್ದಾರೆ. ಆದರೆ, ಕುಡಿದ ಮತ್ತಿನಲ್ಲಿದ್ದ ವ್ಯಕ್ತಿಯೊಬ್ಬ ಒಳಗೆ ಮಲಗಿದ್ದ ಪರಿಸ್ಥಿತಿಯ ಲಾಭ ಪಡೆದುಕೊಂಡ ಮಹಿಳೆ, ಮಲಗಿದ್ದ ವ್ಯಕ್ತಿಯ ಫೋನ್ ಬಳಸಿ, ಮಧ್ಯರಾತ್ರಿ 12.15 ರ ಸುಮಾರಿಗೆ ತುರ್ತು ಸಂಖ್ಯೆ 112 ಗೆ ಕರೆ ಮಾಡಿ ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾಳೆ.

ತುರ್ತು ಕರೆ ಬಂದ ಕೂಡಲೇ ಪೊಲೀಸರು ಸ್ಥಳಕ್ಕೆ ತಲುಪಿದರು ಹೊರಗಿನಿಂದ ಬಾಗಿಲು ಲಾಕ್ ಮಾಡಲಾಗಿತ್ತು ಆಗ ಪೊಲೀಸ್ ಸಿಬ್ಬಂದಿ ಗೋಡೌನ್‌ಬಾಗಿಲು ಒಡೆಯಬೇಕಾಯಿತು. ಸಂತ್ರಸ್ತೆ ಒಳಗೆ ಗಂಭೀರ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮದ್ಯದ ಬಾಟಲಿಗಳು ಕೋಣೆಯಲ್ಲಿ ಹರಡಿಕೊಂಡಿದ್ದವು. ಅಲ್ಲಿ ಒಬ್ಬ ವ್ಯಕ್ತಿ ಕುಡಿದ ಮತ್ತಿನಲ್ಲಿ ಬಿದ್ದಿರುವುದು ಕಂಡುಬಂದಿದೆ. ಗಾಯಗೊಂಡ ಮಹಿಳೆಯನ್ನು ಪೂರ್ಣಿಯಾದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಲ್ಲಿ ಆಕೆಯ ಹೇಳಿಕೆಯನ್ನು ದಾಖಲಿಸಲಾಗಿದೆ. ಪ್ರಸ್ತುತ ಆಕೆಯ ವೈದ್ಯಕೀಯ ಪರೀಕ್ಷೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಆರೋಪಿಯನ್ನು ಸ್ಥಳೀಯ ನಿವಾಸಿ ಮೊಹಮ್ಮದ್ ಜುನೈದ್ (35) ಎಂದು ಗುರುತಿಸಲಾಗಿದ್ದು, ಅಪರಾಧಕ್ಕೆ ಬಳಸಲಾಗಿದೆ ಎನ್ನಲಾದ ಕಾರನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂತ್ರಸ್ತೆಯ ಹೇಳಿಕೆಯ ಆಧಾರದ ಮೇಲೆ ಎಫ್ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಂಧಿತ ಆರೋಪಿಗಳ ಹೊರತಾಗಿ, ಯುವತಿ ಇತರ ಇಬ್ಬರ ಹೆಸರನ್ನು ಹೆಸರಿಸಿದ್ದಾರೆ ಎಂದು ಪೊಲೀಸರು ಹೇಳಿದರು.ಆರೋಪಿಗಳ ತನಿಖೆ ಮತ್ತು ವಿಚಾರಣೆಯ ಸಮಯದಲ್ಲಿ, ಮಾನವ ಕಳ್ಳಸಾಗಣೆಗೆ ಸಂಬಂಧಿಸಿದ ಸಂಗತಿಗಳು ಸಹ ತಿಳಿದುಬಂದಿದೆ. ಸಂತ್ರಸ್ತೆಯ ಪತಿ ಒಂದು ವರ್ಷದ ಹಿಂದೆ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದರು ಮತ್ತು ಅವರು ಒಂಟಿಯಾಗಿ ವಾಸಿಸುತ್ತಿದ್ದಾರೆ.

## ಮಿನಿ ನ್ಯೂಸ್

### ಚಳಿಗೆ ತತ್ತರಿಸಿದ ದೆಹಲಿ ಜನ

**ನವದೆಹಲಿ:** ದೇಶದ ರಾಜಧಾನಿ ದೆಹಲಿಯಲ್ಲಿ ಕನಿಷ್ಠ ತಾಪಮಾನ 3 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದ್ದು, ಜನರು ನಡುಗಿದ್ದಾರೆ. ಕಳೆದ 3 ವರ್ಷಗಳಲ್ಲೇ ಮಂಗಳವಾರ ಬೆಳಿಗ್ಗೆ ಅತ್ಯಂತ ಶೀತದ ದಿನ ಎಂದು ದಾಖಲಾಗಿದ್ದು, ಕನಿಷ್ಠ ತಾಪಮಾನ 3 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ ಎಂದು ಭಾರತ ಹವಾಮಾನ ಇಲಾಖೆ ತಿಳಿಸಿದೆ. ಹವಾಮಾನ ಇಲಾಖೆಯ ಪ್ರಕಾರ, ಕಳೆದ ಜನವರಿ 16, 2023ರಂದು ರಾಜಧಾನಿಯಲ್ಲಿ ಕನಿಷ್ಠ 1.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಇದು ಈವರೆಗಿನ ದಾಖಲೆ. ನಗರದ ಸಫ್ದರ್‌ಗಂಜ್‌ನಲ್ಲಿ ಕನಿಷ್ಠ 3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 4.4 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗಿದೆ ಎಂದು ಐಎಂಡಿ ದತ್ತಾಂಶ ತೋರಿಸಿದೆ. ಪಾಲಂನಲ್ಲಿ ಕನಿಷ್ಠ 4 ಡಿಗ್ರಿ ಸೆಲ್ಸಿಯಸ್ ತಾಪಮಾನ, ಸಾಮಾನ್ಯಕ್ಕಿಂತ 3.3 ಡಿಗ್ರಿ ಸೆಲ್ಸಿಯಸ್, ಲೋಧಿ ರಸ್ತೆಯಲ್ಲಿ ಕನಿಷ್ಠ 3 ಡಿಗ್ರಿ ಸೆಲ್ಸಿಯಸ್ ತಾಪಮಾನ, ಸಾಮಾನ್ಯಕ್ಕಿಂತ ಮೂರು ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ 4.5 ರಿಂದ 6.4 ಡಿಗ್ರಿಗಳಷ್ಟು ಕಡಿಮೆಯಾದಾಗ ಶೀತ ತರಂಗ ಪರಿಸ್ಥಿತಿಗಳನ್ನು ಘೋಷಿಸಲಾಗುತ್ತದೆ. ಬುಧವಾರವೂ ದೆಹಲಿಯಲ್ಲಿ ಶೀತ ತರಂಗ ಪರಿಸ್ಥಿತಿಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ದತ್ತಾಂಶದ ಪ್ರಕಾರ, ದೆಹಲಿಯ ಗಾಳಿಯ ಗುಣಮಟ್ಟವು ಅತ್ಯಂತ ಕಳಪೆ ವರ್ಗಕ್ಕೆ ಹದಗೆಟ್ಟಿದ್ದು, ವಾಯು ಗುಣಮಟ್ಟ ಸೂಚ್ಯಂಕ 337ಕ್ಕೆ ಇಳಿದಿದೆ. ಆನಂದ್ ವಿಹಾರ್ ಅತ್ಯಂತ ಕೆಟ್ಟ ಗಾಳಿಯ ಗುಣಮಟ್ಟವನ್ನು 411 ರ ವಾಯು ಗುಣಮಟ್ಟವನ್ನು ದಾಖಲಿಸಿದ್ದು, ಇದು ಗಂಭೀರ ವರ್ಗಕ್ಕೆ ಇಳಿದಿದೆ. ಶೂನ್ಯ, 50 ರ ನಡುವಿನ ಅನ್ನು ಉತ್ತಮ, 51 ರಿಂದ 100 ತೃಪ್ತಿದಾಯಕ, 101 ರಿಂದ 200 ಮಧ್ಯಮ, 201 ರಿಂದ 300 ಕಳಪೆ, 301 ರಿಂದ 400 ತುಂಬಾ ಕಳಪೆ, 401 ರಿಂದ 500 ತೀವ್ರ ಎಂದು ಪರಿಗಣಿಸಲಾಗುತ್ತದೆ.

### ದೇಶೀ ಬಾಂಬ್ ನುಂಗಿ ಆನೆ ಮರಿ ಸಾವು

**ಈರೋಡ್:** ತಮಿಳುನಾಡಿನ ಸತ್ಯಮಂಗಲಂ ಹುಲಿ ಅಭಯಾರಣ್ಯದಲ್ಲಿ ದೇಶಿ ನಿರ್ಮಿತ ಬಾಂಬ್ ನುಂಗಿ ಆನೆ ಮರಿ ಸಾವನ್ನಪ್ಪಿದೆ. ಈ ಸಂಬಂಧ ರೈತನೊಬ್ಬನನ್ನು ಬಂಧಿಸಲಾಗಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ದಿನಗಳ ಹಿಂದೆ ಗುಥಿಯಾಲತ್ತೂರ್ ಮೀಸಲು ಅರಣ್ಯಕ್ಕೆ ಗಸ್ತು ತಿರುಗುತ್ತಿದ್ದ ಅರಣ್ಯ ಸಿಬ್ಬಂದಿ ಎರಡು ವರ್ಷದ ಮರಿ ಮೃತಪಟ್ಟಿರುವುದನ್ನು ಕಂಡು ಅರಣ್ಯ ಪಶುವೈದ್ಯರಿಗೆ ಮಾಹಿತಿ ನೀಡಿದರು. ಆನೆಯ ಸೊಂಡಿಲು, ಬಾಯಿಯಲ್ಲಿ ರಕ್ತಸ್ರಾವದ ಗಾಯಗಳು ಕಂಡುಬಂದಿವೆ ಎಂದು ಅವರು ಹೇಳಿದರು. ಪಶುವೈದ್ಯರು ಶವಪರೀಕ್ಷೆ ನಡೆಸಿ ದೇಶಿ ನಿರ್ಮಿತ ಬಾಂಬ್ ಸೇವಿಸಿದ ನಂತರ ಆನೆ ಸಾವನ್ನಪ್ಪಿದೆ ಎಂದು ಘೋಷಿಸಲಾಗಿದ್ದು, ಆನೆಗಳು ಹೊಲಗಳಿಗೆ ಪ್ರವೇಶಿಸದಂತೆ ತಡೆಯಲು ಬೇಟೆಗಾರ ಅಥವಾ ರೈತ ಬಾಂಬ್ ಎಸೆದಿರಬೇಕು ಎಂದು ಅರಣ್ಯ ಅಧಿಕಾರಿಗಳು ಶಂಕಿಸಿದ್ದಾರೆ. ತನಿಖೆ ವೇಳೆ ಆ ಪ್ರದೇಶದ ರೈತ ಕಾಳಿಮುತ್ತು (43) ಅವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಮರಿ ಆನೆ ಮೃತದೇಹವನ್ನು ಅದೇ ಪ್ರದೇಶದಲ್ಲಿ ಹೂಳಲಾಗಿದೆ

### ಚುನಾವಣೆಗೂ ಮುನ್ನ ಮದ್ಯ, ಗಾಂಜಾ, ಅಕ್ರಮ ಶಸ್ತ್ರಾಸ್ತ್ರ ಪತ್ತೆ

**ನಾಂದೇಡ್:** ನಗರಾಡಳಿತ ಚುನಾವಣೆಗೂ ಮುನ್ನ ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿ ಜಾರಿ ಸಂಸ್ಥೆಗಳು ಭಾರಿ ಪ್ರಮಾಣದ ಮದ್ಯ, ಗಾಂಜಾ ಮತ್ತು ಕೆಲವು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾನೂನು ನಿಬಂಧನೆಗಳ ಅಡಿಯಲ್ಲಿ ಸುಮಾರು 929 ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ, ಗಡಿಪಾರು ಮಾಡಲಾಗಿದೆ ಎಂದು ಅವರು ಹೇಳಿದರು.

ನಾಂದೇಡ್ ಸೇರಿದಂತೆ ರಾಜ್ಯದ 29 ಪುರಸಭೆಗಳಿಗೆ ಜನವರಿ 15 ರಂದು ಚುನಾವಣೆ ನಿಗದಿಯಾಗಿದೆ. ಸ್ಥಳೀಯ ನಾಗರಿಕಾಡಳಿತ ಸಂಸ್ಥೆಯ ಚುನಾವಣಾ ನೀತಿ ಸಂಹಿತೆ ಜಾರಿ ತಂಡಗಳು, ರಾಜ್ಯ ಅಬಕಾರಿ ಇಲಾಖೆಯ ಸಹಯೋಗದೊಂದಿಗೆ, ಡಿ. 15 ರಿಂದ ಜ. 11 ರ ನಡುವೆ ದೇಶೀಯ ಮತ್ತು ವಿದೇಶಿ ಮದ್ಯದ ಅಕ್ರಮ ಮಾರಾಟದ ವಿರುದ್ಧ ಸರಣಿ ದಾಳಿಗಳನ್ನು ನಡೆಸಿವೆ. ನಾಂದೇಡ್ ಜಿಲ್ಲೆಯಲ್ಲಿ 441.24 ಲೀಟರ್ ಮದ್ಯ, 2.2 ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಐದು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಕ್ರಮ ಶಸ್ತ್ರಾಸ್ತ್ರಗಳ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ಪೊಲೀಸರು ಒಂದು ಪಿಸ್ತೂಲ್, ಒಂದು ಜೀವಂತ ಗುಂಡು, ನಾಲ್ಕು ಕಠಾರಿಗಳು, ಏಳು ಕತ್ತಿಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅವರು ಹೇಳಿದರು

# ಅಣ್ಣಾಮಲೈ ಅವರನ್ನು ರಸ್‌ಮಲೈಗೆ ಹೋಲಿಸಿದ ಠಾಕ್ರೆ ಬ್ರದರ್ಸ್

**ಮುಂಬೈ:** ಬಿಜೆಪಿ ನಾಯಕ, ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ವಿರುದ್ಧ ಠಾಕ್ರೆ ಸಹೋದರರು ಉರಿದು ಬಿದ್ದಿದ್ದು ಅವರನ್ನು ರಸ್‌ಮಲೈ ಎಂದು ಟೀಕಿಸಿದ್ದಾರೆ. ವಾಣಿಜ್ಯ ರಾಜಧಾನಿ ಮುಂಬೈ ಮುನ್ಸಿಫಲ್‌ನಲ್ಲಿ ಉತ್ತಮ ಆಡಳಿತ ಬೇಕಾದರೆ ತ್ರಿವಳಿ ಇಂಜಿನ್ ಅಗತ್ಯವಿದೆ. ಹೀಗಾಗಿ ಮುಂಬೈಕರ್‌ಗಳು ಬಿಜೆಪಿ ನೇತೃತ್ವದ ಒಕ್ಕೂಟಕ್ಕೆ ಮತ ನೀಡುವಂತೆ ಅಣ್ಣಾಮಲೈ ಕೇಳಿಕೊಂಡಿದ್ದರು.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯದಲ್ಲಿ ದೇವೇಂದ್ರ ಫಡ್ನವೀಸ್, ಬಿಎಂಸಿಯಲ್ಲಿ ಬಿಜೆಪಿ ಮೇಯರ್ ಇದ್ದರೆ ಉತ್ತಮ. ಮುಂಬೈ ಮಹಾರಾಷ್ಟ್ರ ನಗರವಲ್ಲ ಆದು ಅಂತರರಾಷ್ಟ್ರೀಯ ನಗರ. ಈ ನಗರದ ಬಜೆಟ್ 75,000 ಕೋಟಿ ರೂ. ಚೆನ್ನೈನ ಬಜೆಟ್ 8,000 ಕೋಟಿ ರೂ., ಆದರೆ ಬೆಂಗಳೂರಿನ ಬಜೆಟ್ 19,000 ಕೋಟಿ ರೂ. ಆದ್ದರಿಂದ ಹಣಕಾಸು ನಿರ್ವಹಿಸಲು, ಅಭಿವೃದ್ಧಿಯನ್ನು ನಿರ್ವಹಿಸಲು ಆಡಳಿತದಲ್ಲಿ ಉತ್ತಮ ಜನರು ಬೇಕು ಎಂದು ಅವರು ಹೇಳಿದ್ದರು. ಬಿಎಂಸಿ ಚುನಾವಣೆಗೆ ಮತ್ತೆ ಒಂದಾಗಿರುವ ಠಾಕ್ರೆ ಸಹೋದರರಾದ ಉದ್ಧವ್ ಮತ್ತು ರಾಜ್ ಅವರುಗಳು ಅಣ್ಣಾಮಲೈ ಅವರ ಹೇಳಿಕೆಗಳನ್ನು ಟೀಕಿಸಿದರು. ಉದ್ಧವ್ ಅವರು ಬಿಜೆಪಿಯ ಗುಪ್ತ




ಕಾರ್ಯಸೂಚಿಯನ್ನು ಬಹಿರಂಗಪಡಿಸಿದ್ದಾರೆ ಎಂದು ಹೇಳಿದರೆ, ರಾಜ್ ಅಣ್ಣಾಮಲೈ ಅವರನ್ನು ರಸ್‌ಮಲೈ ಎಂದು ಟೀಕಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಚೆನ್ನೈನಲ್ಲಿ ಪ್ರತಿಕ್ರಿಯಿಸಿರುವ ಅಣ್ಣಾಮಲೈ ನನ್ನನ್ನು ಬೆದರಿಸಲು ರಾಜ್ ಠಾಕ್ರೆ ಯಾರು ಎಂದು ಕೇಳಿದರು. ನಾನು ರೈತನ ಮಗನಾಗಲು ಹೆಮ್ಮೆಪಡುತ್ತೇನೆ. ಅವರು ನನ್ನನ್ನು ನಿಂದಿಸಲು ಸಭೆಗಳನ್ನು ಆಯೋಜಿಸಿದ್ದಾರೆ. ನಾನು ಅಷ್ಟು ಮುಖ್ಯನಾಗಿದ್ದೇನೆಯೇ ಎಂದು ನನಗೆ ತಿಳಿದಿರಲಿಲ್ಲ ಎಂದಿದ್ದಾರೆ.

ನಾನು ಮುಂಬೈಗೆ ಬಂದರೆ ನನ್ನ ಕಾಲುಗಳನ್ನು ಕತ್ತರಿಸುತ್ತೇನೆ ಎಂದು ಕೆಲವರು ಬರೆದಿದ್ದಾರೆ. ನಾನು ಮುಂಬೈಗೆ ಬರುತ್ತೇನೆ ನನ್ನ ಕಾಲುಗಳನ್ನು ಕತ್ತರಿಸಲು ಪ್ರಯತ್ನಿಸಿ. ಅಂತಹ ಬೆದರಿಕೆಗಳಿಗೆ ನಾನು ಹೆದರಿದ್ದರೆ, ನಾನು ನನ್ನ ಹಳ್ಳಿಯಲ್ಲಿಯೇ ಇರುತ್ತಿದ್ದೆ ಎಂದು ಅವರು ಹೇಳಿದರು. ಕಾಮರಾಜ್ ಭಾರತದ ಶ್ರೇಷ್ಠ ನಾಯಕರಲ್ಲಿ ಒಬ್ಬರು ಎಂದು ನಾನು ಹೇಳಿದರೆ.

ಇನ್ನು ಮುಂದೆ ತಮಿಳರಲ್ಲವೇ? ಮುಂಬೈ ವಿಶ್ವ ದರ್ಜೆಯ ನಗರ ಎಂದು ನಾನು ಹೇಳಿದರೆ, ಮಹಾರಾಷ್ಟ್ರೀಯರು ಅದನ್ನು ನಿರ್ಮಿಸಲಿಲ್ಲವೇ? ಈ ಜನರು ಕೇವಲ ಅಜ್ಞಾನಿಗಳು ಎಂದು ಅಣ್ಣಾಮಲೈ ಹೇಳಿದ್ದಾರೆ. ಶಿವಸೇನೆ (ಯುಬಿಟಿ)ಯ ಮುಖವಾಣಿ ಸಾಮ್ನಾ ಈಗ ಅಣ್ಣಾಮಲೈ ತಮಿಳರಿಗೂ ದೇಶದ್ರೋಹಿ ಎಂದು ಸಂಪಾದಕೀಯ ಬರೆದಿದೆ. ಮಹಾರಾಷ್ಟ್ರ ಮತ್ತು ತಮಿಳುನಾಡು ಹಿಂದಿ ಹೇರಿಕೆಯ ವಿರುದ್ಧ ಹಗಲಿಗೆ ಹೆಗಲು ಕೊಟ್ಟು ಹೋರಾಡಿವೆ ಎಂದು ಸಂಪಾದಕೀಯವೊಂದು ಹೇಳಿದೆ.ಮಹಾರಾಷ್ಟ್ರದ ಬಿಜೆಪಿ ನಾಯಕರನ್ನು ಗುರಿಯಾಗಿಸಿಕೊಂಡು, ಬಿಜೆಪಿ ಅಣ್ಣಾಮಲೈ ಮತ್ತು ಕೃಪಾಶಂಕರ್ ಸಿಂಗ್ ಅವರ ಹೇಳಿಕೆಗಳನ್ನು ಖಂಡಿಸಲು ಸಾಧ್ಯವಾಗದಿದ್ದರೆ, ಅವರನ್ನು ಏಕೆ ದುರ್ಬಲರೆಂದು ಕರೆಯಬಾರದು? ಎಂದು ಕೇಳಿದೆ. ಮುಂಬೈನ ಮುಂದಿನ ಮೇಯರ್ ಹಿಂದಿ ಭಾಷಿಕರಾಗಿರುತ್ತಾರೆ ಎಂದು ಬಿಜೆಪಿ ನಾಯಕ ಕೃಪಾಶಂಕರ್ ಸಿಂಗ್ ಈ ಹಿಂದೆ ಹೇಳಿದ್ದರು, ಇದು ವಿವಾದಕ್ಕೆ ಕಾರಣವಾಗಿತ್ತು.

# ಪೊಲೀಸ್ ಕಸ್ಟಡಿಯಲ್ಲಿದ್ದ ಅವಾಮಿ ಲೀಗ್ ಪಕ್ಷದ ಹಿಂದೂ ಮುಖಂಡ ಸಾವು

**ಢಾಕಾ:** ಬಾಂಗ್ಲಾದೇಶದಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದ ಶೇಖ್ ಹಸೀನಾರ ಅವಾಮಿ ಲೀಗ್ ಪಕ್ಷದ ಹಿಂದೂ ನಾಯಕ ಪ್ರಳಯ್ ಚಾಕಿ ಸಾವನ್ನಪ್ಪಿದ್ದಾರೆ. ಬಂಧನಕ್ಕೊಳಗಾಗಿದ್ದ ಚಾಕಿ ಅವರಿಗೆ ಜೈಲು ಅಧಿಕಾರಿಗಳು ವೈದ್ಯಕೀಯ ಆರೈಕೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಅವರ ಕುಟುಂಬಸ್ಥರು ಆರೋಪಿಸಿದ್ದಾರೆ. ಗಾಯಕರೂ ಆಗಿದ್ದ 60 ವರ್ಷದ ಪ್ರಳಯ್ ಚಾಕಿ, ಅವಾಮಿ ಲೀಗ್‌ನ ಪಬ್ನಾ ಜಿಲ್ಲಾ ಘಟಕದ ಸಾಂಸ್ಕೃತಿಕ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದರು, ಜೈಲು ಕಸ್ಟಡಿಯಲ್ಲಿದ್ದಾಗ ರಾಜ್‌ಶಾಹಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ ಎಂದು ಬಾಂಗ್ಲಾದೇಶದ ದಿನಪತ್ರಿಕೆ ದಿ ಡೈಲಿ ಸ್ಟಾರ್ ವರದಿ ಮಾಡಿದೆ.



ಪಬ್ನಾ ಜೈಲಿನ ಸೂಪರಿಂಟೆಂಡೆಂಟ್‌ಎಂಡಿ ಒಮೋರ್ ಫಾರೂಕ್ ಮಾತನಾಡಿ, ಚಾಕಿ ಮಧುಮೇಹ, ಹೃದ್ರೋಗ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಈ ಕಾರಣದಿಂದಾಗಿ, ಜೈಲು ವೈದ್ಯರು ಮೊದಲು ಅವರನ್ನು ಪಬ್ನಾ ಸದರ್ ಆಸ್ಪತ್ರೆಗೆ ಕಳುಹಿಸಲಾಗಿತ್ತು, ಮತ್ತು ಅಲ್ಲಿಂದ ಶುಕ್ರವಾರ ರಾತ್ರಿ ಅವರನ್ನು ರಾಜಶಾಹಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಪಬ್ನಾ ಜಿಲ್ಲಾ ಜೈಲಿನ ಸೂಪರಿಂಟೆಂಡೆಂಟ್ ಓಮೋರ್‌ಫಾರೂಕ್ ತಿಳಿಸಿದ್ದಾರೆ. ಅವರು ರಾತ್ರಿ 9 ಗಂಟೆಯ ನಂತರ ರಾಜಶಾಹಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಮೃತಪಟ್ಟಿದ್ದಾರೆ ಎಂದು ಫಾರೂಕ್ ಹೇಳಿದರು. ಪ್ರಸಿದ್ಧ ಗಾಯಕ, ಸಂಗೀತ ನಿರ್ದೇಶಕರಾಗಿದ್ದರು. ಅವರು ಪಬ್ನಾದ ಶ್ರೀ ಶ್ರೀ ರಾಮ ಕೃಷ್ಣ ಸೇವಾಶ್ರಮದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

ಆ ಸಮಯದಲ್ಲಿ ಯಾವುದೇ ಪ್ರಕರಣದಲ್ಲಿ ಹೆಸರಿಲ್ಲದಿದ್ದರೂ ಅವರ ತಂದೆಯನ್ನು ಬಂಧಿಸಲಾಗಿದೆ ಎಂದು ಅವರ ಮಗ ಸೋನಿ ಚಾಕಿ ಆರೋಪಿಸಿದ್ದಾರೆ.

ಆಗಸ್ಟ್ 4 ರ ಹಿಂಸಾಚಾರಕ್ಕೆ ಸಂಬಂಧಿಸಿದ ಸ್ಫೋಟಕ ಪ್ರಕರಣದಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ನಂತರ ತೋರಿಸಲಾಗಿದೆ ನನ್ನ ತಂದೆ ಬಹಳ ದಿನಗಳಿಂದ ಮಧುಮೇಹ ಮತ್ತು ಹೃದಯ ಕಾಯಿಲೆಯಿಂದ ಬಳಲುತ್ತಿದ್ದರು.


ಜೈಲಿನಲ್ಲಿ ಅವರ ಸ್ಥಿತಿ ಹದಗೆಟ್ಟಿತು, ಆದರೆ ಅಧಿಕಾರಿಗಳು ನಮಗೆ ಅಧಿಕೃತವಾಗಿ ಮಾಹಿತಿ ನೀಡಲಿಲ್ಲ ಎಂದು ಸೋನಿ ಆರೋಪಿಸಿದ್ದಾರೆ. ಇತರರು ತಿಳಿಸಿದ ನಂತರ ನಾವು ಆಸ್ಪತ್ರೆಗೆ ಹೋದೆವು, ಆದರೆ ಅವರಿಗೆ ಸರಿಯಾದ ಚಿಕಿತ್ಸೆ ಸಿಗಲಿಲ್ಲ, ಅದು ಅವರ ಸಾವಿಗೆ ಕಾರಣವಾಯಿತು ಎಂದಿದ್ದಾರೆ.

# ಇರಾನ್ ಜೊತೆ ವ್ಯಾಪಾರ ಮಾಡುವ ದೇಶಗಳ ಮೇಲೆ ಶೇ.25 ರಷ್ಟು ದಂಡ ; ಟ್ರಂಪ್

**ವಾಷಿಂಗ್ಟನ್:** ಇರಾನ್ ಜೊತೆ ವ್ಯಾಪಾರ ಮಾಡುವ ದೇಶಗಳ ಮೇಲೆ ಶೇ. 25ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇರಾನ್ ಮೇಲಿನ ದಾಳಿಯಲ್ಲಿ ಇಲ್ಲಿಯವರೆಗೆ 600 ಮಂದಿ ಮೃತಪಟ್ಟಿದ್ದು ಸಾವಿರಾರು ಮಂದಿಯನ್ನು ಬಂಧಿಸಲಾಗಿದೆ. ಪ್ರತಿಭಟನೆ ತೀವ್ರಗೊಳ್ಳುತ್ತಿರುವ ಸಮಯದಲ್ಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ತಮ್ಮ ಟ್ರೂತ್ ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್, ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ನೊಂದಿಗೆ ವಾಣಿಜ್ಯ ಸಂಬಂಧವನ್ನು ಕಾಯ್ದುಕೊಳ್ಳುವ ದೇಶಗಳು ಅಮೆರಿಕದೊಂದಿಗೆ ನಡೆಸುವ ಯಾವುದೇ ವ್ಯಾಪಾರದ ಮೇಲೆ ಈ ಕ್ಷಣದಿಂದಲೇ ಶೇ.25 ರ ಸುಂಕ ಜಾರಿಗೆ ಬರಲಿದೆ ಎಂದಿದ್ದಾರೆ.

ಅಮೆರಿಕ ನಿರ್ಧಾರದಿಂದ ಭಾರತ ಸೇರಿದಂತೆ ಚೀನಾ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಟರ್ಕಿಯ ಮೇಲೂ ಪರಿಣಾಮ ಬೀರಲಿದೆ. ಭಾರತದ ಮೇಲೆ ಪರಿಣಾಮ ಏನು? ಚೀನಾವನ್ನು ಇರಾನ್‌ನ ಅತಿದೊಡ್ಡ ವ್ಯಾಪಾರ ಪಾಲುದಾರ ಎಂದು ಪರಿಗಣಿಸಲಾಗಿದ್ದರೂ ಭಾರತ ಹೆಚ್ಚಿನ ಪ್ರಮಾಣದಲ್ಲಿ ವಸ್ತುಗಳನ್ನು ರಫ್ತು ಮಾಡುತ್ತಿದೆ. ಇರಾನ್‌ಗೆ ಭಾರತದ ಪ್ರಮುಖ ರಫ್ತುಗಳಲ್ಲಿ ಸಾವಯವ




ರಾಸಾಯನಿಕಗಳು, ಬಾಸ್ಮತಿ ಅಕ್ಕಿ, ಚಹಾ, ಸಕ್ಕರೆ, ಔಷಧಗಳು, ಹಣ್ಣುಗಳು, ಬೇಳೆಕಾಳುಗಳು, ಮಾಂಸ ಉತ್ಪನ್ನಗಳು ಸೇರಿವೆ. ಪ್ರಮುಖ ಆಮದುಗಳಲ್ಲಿ ಮೆಥನಾಲ್, ಪೆಟ್ರೋಲಿಯಂ ಬಿಟುಮೆನ್, ದ್ರವೀಕೃತ ಪ್ರೋಪೇನ್, ಸೇಬುಗಳು, ಖರ್ಜೂರ ಮತ್ತು ರಾಸಾಯನಿಕಗಳು ಸೇರಿವೆ.

### 440 ಮಿಲಿಯನ್ ಡಾಲರ್ ರೂ. ಸರಕುಗಳನ್ನು ಆಮದು

ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಪ್ರಕಾರ, ಭಾರತವು 2024-25ರ ಆರ್ಥಿಕ ವರ್ಷದಲ್ಲಿ ಇರಾನ್‌ಗೆ 1.24 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡಿದರೆ 440 ಮಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ. ಒಟ್ಟು ವ್ಯಾಪಾರವು 1.68 ಶತಕೋಟಿ ಡಾಲರ್ ಅಂದರೆ ಸರಿಸುಮಾರು 14 ರಿಂದ 15 ಸಾವಿರ ಕೋಟಿ ರೂ. ಎಂದು ಅಂದಾಜಿಸಲಾಗಿದೆ.

# ಸಾಲ ನಿಯಂತ್ರಕ ಪರಿಹಾರ ಕ್ರಮ ಜಾರಿಗೆ ಆಗ್ರಹ

**ಕೋಲ್ಕತ್ತಾ:** ಕುಟೀರ, ಸಣ್ಣ ಕೈಗಾರಿಕೆಗಳ ಸಂಘಗಳ ಒಕ್ಕೂಟ 2026-27ರ ಕೇಂದ್ರ ಬಜೆಟ್‌ನಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ತೆರಿಗೆ, ಸಾಲ ಮತ್ತು ನಿಯಂತ್ರಕ ಪರಿಹಾರ ಕ್ರಮಗಳನ್ನು ಜಾರಿಗೊಳಿಸುವಂತೆ ಕೇಂದ್ರವನ್ನು ಒತ್ತಾಯಿಸಿದೆ. ದೇಶಾದ್ಯಂತ ಉದ್ಯಮಿಗಳು, ಎಂಎಸ್ಇ ಗುಂಪುಗಳ ವಿವಿಧ ಸಂಘಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಶಿಫಾರಸುಗಳನ್ನು ರೂಪಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಬರೆದ ಇತ್ತೀಚಿನ ಬಜೆಟ್ ಪೂರ್ವ ಪತ್ರದಲ್ಲಿ, ಎಫ್‌ಎಸಿಎಸ್ಐ ಅಧ್ಯಕ್ಷ ಎಚ್ ಕೆ ಗುಹಾ ಹೇಳಿದ್ದಾರೆ. ಪ್ರಮುಖ ಬೇಡಿಕೆಗಳಲ್ಲಿ, ಎಂಎಸ್‌ಎಂಇ ಸಚಿವಾಲಯದ ಅಡಿಯಲ್ಲಿ ಸಣ್ಣ, ಸೂಕ್ಷ್ಮ ಉದ್ಯಮಗಳಿಗೆ ವಿಶೇಷ ಮಂಡಳಿಯನ್ನು ರಚಿಸುವುದು, ಜಿಎಸ್‌ಟಿ ಆಡಳಿತದಲ್ಲಿ ಹೆಚ್ಚಿನ ವಿನಾಯಿತಿ ಮಿತಿ, ಸಣ್ಣ ಘಟಕಗಳಿಗೆ




ಒಂದೇ, ಸರಳೀಕೃತ ಜಿಎಸ್‌ಟಿ ರಿಟರ್ನ್ ಅನ್ನು ಕೈಗಾರಿಕಾ ಸಂಸ್ಥೆ ಕೋರಿದೆ. ಎಫ್‌ಎಸಿಎಸ್ಐ 6-7 ಪ್ರತಿಶತದಷ್ಟು ಬಡ್ಡಿ ಮಿತಿಯಲ್ಲಿ ಎಂಎಸ್ಇಗಳಿಗೆ 1 ಕೋಟಿ ರೂ. ಗಳವರೆಗೆ ಶಾಸನಬದ್ಧ ಮೇಲಾಧಾರ-ಮುಕ್ತ ಸಾಲವನ್ನು ನೀಡುವುದು, ಜೊತೆಗೆ ಆರ್ಥಿಕ ಒತ್ತಡದ ಅವಧಿಯಲ್ಲಿ ಬಡ್ಡಿ ಸಬ್ವೆನ್ಷನ್, ಬ್ಯಾಂಕಿಂಗ್ ಮಾನದಂಡಗಳನ್ನು ಅನುಸರಿಸುವ ಘಟಕಗಳಿಗೆ ಕಾರ್ಯನಿರತ ಬಂಡವಾಳ ಮಿತಿಗಳನ್ನು ಸ್ವಯಂ ಚಾಲಿತವಾಗಿ ನವೀಕರಿಸುವುದು ಸಹ ಕೋರಿದೆ.ದ್ರವ್ಯತೆ ಕಾಳಜಿಯನ್ನು ಎತ್ತಿ ತೋರಿಸುತ್ತಾ, ಒಕ್ಕೂಟವು 15 ದಿನಗಳಲ್ಲಿ ಮರುಪಾವತಿಯನ್ನು ಒತ್ತಾಯಿಸಿತು, ಸರ್ಕಾರದಿಂದ ವಿಳಂಬಕ್ಕೆ ಶಾಸನಬದ್ಧ ಬಡ್ಡಿ ಯೊಂದಿಗೆ, ರಿಟರ್ನ್ಸ್, ಕಾರ್ಮಿಕ, ಸ್ಥಳೀಯ ಕಾನೂನುಗಳಿಗೆ ಸಂಬಂಧಿಸಿದ ಕಾರ್ಯ ವಿಧಾನದ ಲೋಪಗಳನ್ನು ಸಂಪೂರ್ಣವಾಗಿ ಅಪರಾಧಮುಕ್ತಗೊಳಿಸಿತು. ರಫ್ತು-ಆಧಾರಿತ ಘಟಕಗಳಿಗೆ, ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಗಳಿಕೆ ಸಾಲ ನೀಡುವ ಗುರಿಗಳನ್ನು ಹೆಚ್ಚಿಸುವುದರ ಜೊತೆಗೆ, ಹಠಾತ್ ಸುಂಕ ಹೆಚ್ಚಳದಿಂದ ಪ್ರಭಾವಿತರಾದ ಸಣ್ಣ ರಫ್ತುದಾರರಿಗೆ ಪರಿಹಾರ ನೀಡಲು ರಫ್ತು ಅಪಾಯ ಸಮೀಕರಣ ನಿಧಿಯನ್ನು ರಚಿಸುವ ಪ್ರಸ್ತಾಪವನ್ನು ಮುಂದಿಟ್ಟಿತು.

ನವೀಕರಿಸಬಹುದಾದ ಇಂಧನ ಸ್ಥಾಪನೆಗಳು, ವಿದ್ಯುತ್ ಶುಲ್ಕಗಳು, ಸ್ಥಳೀಯ ಸುಂಕಗಳ ಮೇಲೆ ಸಬ್ಸಿಡಿಗಳನ್ನು ವಿಸ್ತರಿಸಲು, ರಾಜ್ಯ ಅಭಿವೃದ್ಧಿ ನಿಗಮಗಳು ನಡೆಸುವ ಕೈಗಾರಿಕಾ ಎಸ್ಟೇಟ್‌ಗಳಲ್ಲಿರುವ ಘಟಕಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರಗಳೊಂದಿಗೆ ನಿಕಟ ಸಮನ್ವಯದ ಅಗತ್ಯವನ್ನು ಒತ್ತಿಹೇಳಿತು ಈ ಕ್ರಮಗಳು ಭಾರತದಲ್ಲಿ ಬೆಳವಣಿಗೆಗೆ ಗಮನಾರ್ಹವಾದ ಸಹಾಯಕವಾಗುತ್ತವೆ ಎಂದು ಗುಹಾ ಹೇಳಿದರು.

# 1 ಲಕ್ಷ ಅಮೆರಿಕ ವೀಸಾ ರದ್ದು; ಭಾರತೀಯ ವಿದ್ಯಾರ್ಥಿಗಳು, ಉದ್ಯೋಗಸ್ಥರ ಮೇಲೆ ಪರಿಣಾಮ

**ವಾಷಿಂಗ್ಟನ್:** ಕಳೆದ ವರ್ಷ (2025) ಅಮೆರಿಕ ಸರ್ಕಾರವು 1 ಲಕ್ಷಕ್ಕೂ ಹೆಚ್ಚು ವೀಸಾಗಳನ್ನು ರದ್ದುಪಡಿಸಿರುವುದಾಗಿ ಫಾಕ್ಸ್ ನ್ಯೂಸ್ ವರದಿ ಮಾಡಿದೆ. ಅಮೆರಿಕದ ಕಾನೂನು ಉಲ್ಲಂಘಿಸಿದವರು ಹಾಗೂ ಅಪರಾಧ ದಾಖಲೆಗಳನ್ನು ಹೊಂದಿರುವ 1 ಲಕ್ಷಕ್ಕೂ ಹೆಚ್ಚು ವಿದೇಶಿಗರ ವೀಸಾಗಳನ್ನು ರದ್ದುಪಡಿಸಲಾಗಿದೆ. ಅಮೆರಿಕ ನೀಡಿರುವ ಅಧಿಕೃತ ಮಾಹಿತಿ ಪ್ರಕಾರ, ಈ ವೀಸಾಗಳ ಪೈಕಿ 8,000 ವಿದ್ಯಾರ್ಥಿ ವೀಸಾಗಳು, 2,500 ವಿಶೇಷ ಉದ್ಯೋಗ ವೀಸಾಗಳು ಸೇರಿವೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ. ದೇಶದ ಭದ್ರತೆ ಬಲಪಡಿಸುವುದು ಹಾಗೂ ವಲಸೆ ನಿಯಂತ್ರಣ ಭಾಗವಾಗಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ವೀಸಾ ಪಡೆದು ದೇಶ ಪ್ರವೇಶಿಸಿದ ನಂತರವೂ ಅವರ ಮೇಲೆ ನಿಗಾವಹಿಸಲಾಗುತ್ತದೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.



ಅಮೆರಿಕಕ್ಕೆ ಪ್ರಯಾಣಿಸುವ, ಅಧ್ಯಯನ ಮಾಡುವ ಮತ್ತು ಕೆಲಸ ಮಾಡುವ ವಿದೇಶಿಗರ ಪೈಕಿ ಭಾರತೀಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಕಟ್ಟುನಿಟ್ಟಿನ ಕ್ರಮಗಳಿಂದ ನೇರವಾಗಿ ಭಾರತೀಯರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕದಲ್ಲಿರುವ ವಿದೇಶಿ ವಿದ್ಯಾರ್ಥಿಗಳ ಪೈಕಿ ಭಾರತೀಯರ ಸಂಖ್ಯೆ ಅಧಿಕವಾಗಿರುವ ಈ ಸಂದರ್ಭದಲ್ಲೇ ಈ ವೀಸಾ ರದ್ದತಿ ನಡೆದಿದೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಚೀನಾ ವಿದ್ಯಾರ್ಥಿಗಳಿಗಿಂತ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ವೀಸಾ ರದ್ದತಿ ಪರಿಣಾಮ ಭಾರತೀಯ ವಿದ್ಯಾರ್ಥಿಗಳಿಗೆ ನೀಡಲಾಗುವ ವೀಸಾಗಳ ಸಂಖ್ಯೆ ಗಣನೀಯವಾಗಿ ಕುಸಿತಗೊಂಡಿದೆ. ಇಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ವೃತ್ತಿಪರರು ವೀಸಾ ನೀತಿ ಬದಲಾವಣೆಗಳ ಪರಿಣಾಮ ಎದುರಿಸುತ್ತಿದ್ದಾರೆ.

# ತಮಿಳುನಾಡಿನ ಚುನಾವಣಾ ಅಖಾಡಕ್ಕೆ ಧುಮುಕಲಿರುವ ಕೈ ನಾಯಕ

## ತಮಿಳುನಾಡಿನತ್ತ ಕಾಂಗ್ರೆಸ್ಸಿನ 'ಜನ ನಾಯಗನ್' – ಡಿಎಂಕೆ ಜೊತೆ ಹಳಸಿದ ಸಂಬಂಧದ ನಡುವೆ ಫಲ ಕೊಟ್ಟೀತೇ ರಾಹುಲ್ ಪ್ರಚಾರ?

**ನವದೆಹಲಿ:** ಇತ್ತೀಚೆಗೆ ನಡೆದಿದ್ದ ಜನನಾಯಕನ ಅವತಾರ ತಾಳಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಈಗ ತಮಿಳುನಾಡಿನತ್ತ ಮುಖ ಮಾಡಿದ್ದಾರೆ. ಅದಕ್ಕೆ ಕಾರಣ.. ಚುನಾವಣೆ. ಬಿಹಾರದಲ್ಲೂ ಅವರು ಕಳೆದ ವರ್ಷಾಂತ್ಯದಲ್ಲಿ ನಡೆದ ಚುನಾವಗೆ ಸುಮಾರು 2-3 ತಿಂಗಳು ಮುನ್ನ ಭಾರೀ ಸಂಚಲನ ಮೂಡಿಸಿದ್ದರು. ಮತದಾರರ ಗುರುತಿನ ಚೀಟಿಯ ವಿಶೇಷ ಪರಿಷ್ಕರಣೆ ವಿರುದ್ಧ ದನಿಯೆತ್ತಿದ್ದರು. ದೊಡ್ಡಮಟ್ಟದಲ್ಲಿ ಪ್ರತಿಭಟನೆಯನ್ನೂ ಮಾಡಿದ್ದರು.

ತಮಿಳುನಾಡಿನ ಕಾಂಗ್ರೆಸ್ ಸುಮಾರು 2 ನಿಮಿಷಗಳ ಕ್ಲಿಪ್ ಬಿಡುಗಡೆ ಮಾಡಿದೆ. ಆ ಕ್ಲಿಪ್‌ನಲ್ಲಿ ರಾಹುಲ್ ಗಾಂಧಿಯವರು, ರೈತರು, ಹಿರಿಯ ನಾಗರಿಕರು, ಆಟೋ ಚಾಲಕರು, ಶಾಲಾ ಮಕ್ಕಳೊಂದಿಗೆ ಮಾತುಕತೆ ನಡೆಸಿದ್ದಾರೆ. ಜೊತೆಗೆ, ಅವರೊಂದಿಗೆ ಸೆಲ್ಫಿಗಳನ್ನು ಕ್ಲಿಕ್ಕಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ, ಸಮಾಜದ ಕೆಳವರ್ಗದ ಜನರ ಜೊತೆಗೆ ಹೆಚ್ಚು ಬೆರೆಯುವ ಮೂಲಕ ಅವರ ದನಿಯಾಗಲು ಪ್ರಯತ್ನಿಸುತ್ತಿದ್ದಾರೆ. ವಿಡಿಯೋದ ಕಡೆಯಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿಯವರು ಬಡವರಿಗೆ ಉಚಿತ ಧಾನ್ಯದ ಮೂಟೆಗಳನ್ನು ವಿತರಿಸುತ್ತಿರುವ ವಿಡಿಯೋ ಕೂಡ ಬಂದು ಹೋಗುತ್ತದೆ. ಈ ವಿಡಿಯೋದ ಬ್ಯಾಕ್ ಗ್ರೌಂಡ್‌ನಲ್ಲಿ ಇಂಗ್ಲೀಷ್ ರ್‍ಯಾಪ್ ಮ್ಯೂಸಿಕ್, ಅದಕ್ಕೆ ತಮಿಳು ಸಾಹಿತ್ಯವನ್ನು ಅಳವಡಿಸಿರುವ ಹಾಡೊಂದು ಗುನುಗುತ್ತದೆ. ಇದರಿಂದ ರಾಹುಲ್‌ಗಾಂಧಿಯವರ ಇಮೇಜನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ.ವಿಡಿಯೋದ ಹಿನ್ನೆಲೆಯಲ್ಲಿ ಗುನುಗುವ ಹಾಡಿನಲ್ಲಿ ಅವರ ಮಾತಿನಲ್ಲಿ ಏಕತೆ, ಅವರ ರೀತಿಯಲ್ಲಿ ಪ್ರೀತಿ, ಮೊದಲು ಮಾನವೀಯತೆ, ನಾವು ಆಡುವುದು ಹೀಗೆ... ಬಡವನ ನೋವಿನಿಂದ ಹಿಡಿದು ದೇಶದ ಕೂಗಿನವರೆಗೆ, ಅವನು



2 ನಿಮಿಷಗಳ ಕ್ಲಿಪ್ ಬಿಡುಗಡೆ

ಕೇಳುತ್ತಾನೆ, ಅವನು ನಿಲ್ಲುತ್ತಾನೆ, ಅವನು ಎಂದಿಗೂ ನಡೆಯುವುದಿಲ್ಲ ಎಂದು ಸಾಹಿತ್ಯ ಹೇಳುತ್ತದೆ. ಸರಿ, ಮತದಾರರನ್ನು ಸೆಳೆಯಲು ಇಷ್ಟೆಲ್ಲಾ ಪ್ರಯತ್ನ ಮಾಡುವ ಕಾಂಗ್ರೆಸ್ಸಿಗೆ ಈ ಚುನಾವಣೆಯಲ್ಲಿ ಯಶಸ್ಸು ಸಿಕ್ಕೀತೇ? ರಾಹುಲ್ ಗಾಂಧಿಯವರ ಈ ಬಾರಿಯ ತಮಿಳುನಾಡಿನ ಪರ್ಯಟನೆ ಕಾಂಗ್ರೆಸ್ಸಿಗೆ ವರವಾದೀತೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಡಿಎಂಕೆ ಪಕ್ಷ, ಕಾಂಗ್ರೆಸ್ - ಈ ಎರಡೂ ಇಂಡಿಯಾ ಮೈತ್ರಿಕೂಟದ ಪಕ್ಷಗಳೇ. ಹಾಗಿರುವಾಗ ತಮಿಳುನಾಡಿನಲ್ಲಿ ಒಟ್ಟಿಗೆ ಕೈ ಜೋಡಿಸಿ ಸ್ಪರ್ಧಿಸಲಿವೆ ಎಂದು ಎಲ್ಲರೂ ಅಂದುಕೊಳ್ಳಬಹುದು. ಆದರೆ, ರಾಹುಲ್ ಗಾಂಧಿಯ ಕುರಿತಾಗಿ ತಯಾರಿಸಲಾಗಿರುವ ಮೇಲೆ ತಿಳಿಸಲಾದ ತಮಿಳು ವಿಡಿಯೋವನ್ನು ನೋಡಿದರೆ ಕಾಂಗ್ರೆಸ್ ಈ ಚುನಾವಣೆಯಲ್ಲಿ ಡಿಎಂಕೆಯನ್ನು ಬದಿಗೆ ಸರಿಸಿ ತಾನು ಸ್ವತಂತ್ರವಾಗಿಯೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆಯೇನೋ ಎಂದೆನಿಸುತ್ತದೆ. ಚುನಾವಣೆ ಹತ್ತಿರವಿರುವಾಗ ಕೇವಲ ರಾಹುಲ್ ಗಾಂಧಿಯವರೊಬ್ಬರನ್ನೇ ಪ್ರೊಜೆಕ್ಟ್ ಮಾಡಲು ಪ್ರಯತ್ನಿಸಲಾಗಿದೆ. ಇದಕ್ಕೆ ಪೂರಕವಾಗಿ, ಸೋಮವಾರವಷ್ಟೇ ಹೇಳಿಕೆ ನೀಡಿರುವ ಡಿಎಂಕೆ ನಾಯಕ, ತಮಿಳುನಾಡಿನ ಸಚಿವ ಐ. ಪೆರಿಯಸಾಮಿ, ಮುಂದೆ ಡಿಎಂಕೆ ಅಧಿಕಾರಕ್ಕೆ ಬಂದರೆ ಡಿಎಂಕೆ-ಕಾಂಗ್ರೆಸ್ ಮೈತ್ರಿಯಲ್ಲಿ ಸರ್ಕಾರ ರಚಿಸಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಈ ವಿಚಾರದಲ್ಲಿ ತಮಿಳುನಾಡಿನ ಸಿಎಂ ಹಾಗೂ ಡಿಎಂಕೆ ನಾಯಕ ಎಂ.ಕೆ. ಸ್ಟಾಲಿನ್ ಅವರು ಖಚಿತತೆಯನ್ನು ಹೊಂದಿರುವುದಾಗಿ ಹೇಳಿದ್ದಾರೆ. ಇದೆಲ್ಲವೂ ಡಿಎಂಕೆ - ಕಾಂಗ್ರೆಸ್ ನಡುವೆ ಹೊಂದಾಣಿಕೆ ಸರಿಯಿಲ್ಲ ಎಂದು ತಿಳಿಸುತ್ತಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ.ಯನ್ನು ಸೋಲಿಸಲು ಇರುವ ಒಂದೇ ಅಸ್ತ್ರವೆಂದರೆ, ಸ್ಥಳೀಯ ಪಕ್ಷಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದೊಂದೇ ದಾರಿ ಎಂದು 'ಇಂಡಿಯಾ' ಮೈತ್ರಿಕೂಟ ರಚಿಸಿದ ಕಾಂಗ್ರೆಸ್ ಈಗ ಸ್ಥಳೀಯ ಪಕ್ಷಗಳೊಂದಿಗೆ ಸಮನ್ವಯತೆ ಏಕೆ ಸಾಧಿಸುತ್ತಿಲ್ಲ? ಇದೇ ಮುಂದಿರುವ ಪ್ರಶ್ನೆ. ಅದಕ್ಕೆ ತಮಿಳುನಾಡು ಚುನಾವಣೆ ಒಂದು ಉದಾಹರಣೆಯಷ್ಟೇ.

### ಸದ್ಯದಲ್ಲೇ ಪ್ರಚಾರ ಆರಂಭ

ಬಿಹಾರದ ಚುನಾವಣೆಯ ನಂತರ ತಮಿಳುನಾಡಿನ ಕಡೆಗೆ ಮುಖ ಮಾಡಿದ ರಾಹುಲ್ ಗಾಂಧಿ. ಮುಂಬರುವ ತಮಿಳುನಾಡು ಚುನಾವಣೆ ಹಿನ್ನೆಲೆಯಲ್ಲಿ ಸದ್ಯದಲ್ಲೇ ಪ್ರಚಾರ ಆರಂಭ. ತಮಿಳುನಾಡಿನ ಕಾಂಗ್ರೆಸ್ ನಿಂದ ಎರಡು ನಿಮಿಷದ ವಿಡಿಯೋ ಬಿಡುಗಡೆ. ವಿಡಿಯೋದಲ್ಲಿ ಜನಸಾಮಾನ್ಯರ, ಶಾಲಾ ಮಕ್ಕಳ ಜೊತೆಗೆ ಮಾತನಾಡಿರುವ ರಾಹುಲ್ ಗಾಂಧಿ. ಆದರೆ, ಬಿಹಾರದಲ್ಲಿ ರಾಹುಲ್ ಗಾಂಧಿಯವರ ಮತದಾರರ ಸೆಳೆಯುವ ಕಸರತ್ತು ಫಲ ನೀಡದಿದೆಯೇ? ಕಾಂಗ್ರೆಸ್ - ಡಿಎಂಕೆ ನಡುವಿನ ಮುನಿಸು ಸರಿಹೋಗಲಿದೆಯೇ?

### ಬಿಹಾರದಲ್ಲೂ ಹೀಗೇ ಆಗಿತ್ತು

'ಇಂಡಿಯಾ' ಮೈತ್ರಿಕೂಟದ ಬ್ಯಾನರ್ ಅಡಿಯಲ್ಲಿ ಅಲ್ಲಿ ಎಡಪಕ್ಷಗಳು, ಲಾಲೂ ಪ್ರಸಾದ್ ಯಾದವ್ ಅವರ ಆರ್.ಜೆ.ಡಿ. ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದರೂ, ಸರಿಯಾದ ಸಮನ್ವಯತೆ ಇಲ್ಲದಿದ್ದಕ್ಕೆ ಹಾಗೂ ಇಷ್ಟೆಲ್ಲ ಸಮಸ್ಯೆಗಳಿಂದಾಗಿ ಅಲ್ಲಿ ರಾಹುಲ್ ಗಾಂಧಿ ನಡೆಸಿದ್ದೆಲ್ಲಾ ಫಲ ನೀಡಲಿಲ್ಲ. ಈಗ, ತಮಿಳುನಾಡಿನ ಸರದಿ. ಅಲ್ಲಿಯೂ ಮೈತ್ರಿಕೂಟದೊಂದಿಗೆ ಹೊಂದಾಣಿಕೆ ಸರಿಯಿಲ್ಲ ಎಂಬುದು ಈಗಾಗಲೇ ಚುನಾವಣೆಗೂ ಮೊದಲೇ ತಮಿಳುನಾಡಿನ ಜನರಿಗೆ ಗೊತ್ತಾಗುವಂತೆ ಬಹಿರಂಗವಾಗಿಯೇ ಹೇಳಿಕೆಗಳು ಬರುತ್ತಿವೆ.

ಕಿಚ್ಚ! ಮಗಳ ಬಗ್ಗೆ ಪ್ರೀತಿಯ ಮಾತು


# ನಮ್ಮನೆಯಲ್ಲಿ ನಂದೇನೂ ನಡೆಯಲ್ಲ



ಕಿಚ್ಚ ಸುದೀಪ್ ಮೊನ್ನೆ ಸೂಪರ್ ಸಂಡೆ ಅಲ್ಲಿ ಒಂದು ಮಾತು ಹೇಳಿದರು. ಇದನ್ನ ಹೇಳಲಿಕ್ಕೆ ಕಾರಣವೂ ಇದೆ. ದೊಡ್ಮನೆಯಿಂದ ಎಲಿಮಿನೇಟ್ ಆದ ರಾಶಿಕಾ ಶೆಟ್ಟಿ ವೇದಿಕೆಗೆ ಬಂದರು. ಅದ್ಯಾರನ್ನೂ ಅವರು ಹುಡುಕುತ್ತಲೇ ಇದ್ದರು. ಆಗಲೇ ಸುದೀಪ್ ಹೇಳ್ತಾರೆ. ನೀವು ಹುಡುಕುತ್ತಿರೋರು ಬಂದಿಲ್ಲ. ಆದರೂ ನೀವು ಯಾರನ್ನ ಹುಡುಕ್ತೀರಾ ಅಂತ ಕಾಲೆಳೆಯುತ್ತಾರೆ. ಆಗಲೇ ಅಪ್ಪ ಮತ್ತು ಅಮ್ಮನನ್ನ ಹುಡುಕ್ತಾ ಇದ್ದೇನೆ ಅಂತಲೇ ರಾಶಿಕಾ ಹೇಳ್ತಾರೆ. ಹಾಗೆ ರಾಶಿಕಾ ಒಂದು ಮಾತು ಹೇಳ್ತಾರೆ. ನಾನು ಅಪ್ಪನಿಗೆ ಹೆದರುತ್ತೇನೆ. ಅದು ಬಿಟ್ಟರೆ ಬಿಗ್ ಬಾಸ್ ಧ್ವನಿಗೆ ಭಯ ಪಡುತ್ತೇನೆ ಅಂತಲೇ ಹೇಳ್ತಾರೆ. ಅದಕ್ಕೆ ಪೂರಕ ಅನ್ನುವ ಹಾಗೆ ರಾಶಿಕಾ ತಂದೆನೂ ಹೇಳ್ತಾರೆ. ಹೌದು, ರಾಶಿಕಾ ನನಗೆ ಹೆದರುತ್ತಾಳೆ. ಹೀಗೆ ಹೇಳಿದ್ಮೇಲೆ ಕಿಚ್ಚ ಸುದೀಪ್ ಈ ವಿಚಾರವಾಗಿ ಒಂದಷ್ಟು ಹೇಳುತ್ತಾರೆ. ಈ ಒಂದು ವಿವರಣೆಗೆ ಸುದೀಪ್ ಮಾತನಾಡುತ್ತಾರೆ. ಮಕ್ಕಳನ್ನ ಹೆದರಿಸಲೇಬೇಕಾ ಅಂತಲೂ ಕೇಳ್ತಾರೆ. ಆದರೆ, ಕೊನೆಗೆ ಹಿಂದಿಯಲ್ಲಿ ಇನ್ನೂ ಒಂದು ಮಾತು ಕೂಡ ಹೇಳ್ತಾರೆ ನೋಡಿ. ಇದಾದ್ಮೇಲೆ ರಾಶಿಕಾ ತಂದೆಗೂ ಹೇಳ್ತಾರೆ. ನಿಮ್ಮ ಖುಷಿನೇ ನಮ್ಮ ಖುಷಿ ಅಂತ ಹೇಳ್ತಾರೆ. ಈ ರೀತಿ ಮಕ್ಕಳನ್ನ ಜಾಸ್ತಿ ಕಂಟ್ರೋಲ್ ಮಾಡಲೇಬಾರದು ಅನ್ನೋ ಅರ್ಥದಲ್ಲೂ ಸುದೀಪ್ ಹೇಳಿರೋದು ಇದೆ.

**ಮಗಳನ್ನ ಗೌರವಿಸೋ ಕಿಚ್ಚ:** ಕಿಚ್ಚ ಸುದೀಪ್ ತಮ್ಮ ಮಗಳನ್ನ ತುಂಬಾನೆ ಪ್ರೀತಿಸುತ್ತಾರೆ. ಫ್ರೆಂಡ್ ರೀತಿನೇ ನೋಡೋದು. ಅಷ್ಟೆ ಯಾಕೆ ಎಲ್ಲೂ ಮಗಳಿಗೆ ಏಕವಚನದಲ್ಲಿ ಮಾತನಾಡಿರೋದು ಇಲ್ವೇ ಇಲ್ಲ. ಸಾನ್ವಿ ಅವರು ಅಂತಲೇ ಹೇಳೋದು ಇದೆ.

# ರಾಜಾ ಸಾಬ್ ಗಳಿಕೆ, ಕಳಪೆ



ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಮೊದಲ ದಿನ ಸುಮಾರು 112 ಕೋಟಿಗೂ ಹೆಚ್ಚಿನ ಮೊತ್ತವನ್ನು ಗಳಿಕೆ ಮಾಡಿತ್ತು. ಆದರೆ ಮೊದಲ ದಿನ ಸಿನಿಮಾ ನೋಡಿದವರು ನೆಗೆಟಿವ್ ಅಭಿಪ್ರಾಯಗಳನ್ನು ಹಂಚಿಕೊಂಡರು. ಬಹಳ ಕ್ರಿಂಜ್ ಆದ ಕತೆ, ದೃಶ್ಯಗಳನ್ನು ಸಿನಿಮಾ ಹೊಂದಿದೆ ಎಂಬ ಅಭಿಪ್ರಾಯ ವ್ಯಕ್ತವಾಯ್ತು. ಇದೇ ಕಾರಣಕ್ಕೆ ಎರಡನೇ ದಿನದಿಂದಲೇ ಸಿನಿಮಾದ ಕಲೆಕ್ಷನ್ ಕುಸಿಯಲು ಆರಂಭಿಸಿತು. ಬಿಡುಗಡೆ ಆದ ಮೂರೇ ದಿನಕ್ಕೆ ಸಿನಿಮಾದ ಗಳಿಕೆಯಲ್ಲಿ 88% ಕುಸಿತ ಕಂಡಿದೆ. ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಸಿನಿಮಾ ಜನವರಿ 09ರಂದು ಬಿಡುಗಡೆ ಆಗಿತ್ತು. ಪ್ರಭಾಸ್ ಅವರ ಈ ಹಿಂದಿನ ಸಿನಿಮಾಗಳ ರೀತಿಯೇ ಬಿಡುಗಡೆ ಆದ ಮೊದಲ ದಿನ ಭಾರಿ ಗಳಿಕೆಯನ್ನು ಸಿನಿಮಾ ಮಾಡಿತ್ತು. ಮೊದಲ ದಿನ ವಿಶ್ವ ಬಾಕ್ಸ್ ಆಫೀಸ್‌ನಲ್ಲಿ ಸುಮಾರು 112 ಕೋಟಿಗೂ ಹೆಚ್ಚಿನ ಮೊತ್ತವನ್ನು ಸಿನಿಮಾ ಗಳಿಕೆ ಮಾಡಿತ್ತು. ಆದರೆ ಎರಡನೇ ದಿನದಿಂದಲೇ ಸಿನಿಮಾದ ಉರುಳುವಿಕೆ ಪ್ರಾರಂಭವಾಯ್ತು. ಸಿನಿಮಾ ನೋಡಿದವರು ನೆಗೆಟಿವ್ ಅಭಿಪ್ರಾಯಗಳನ್ನು ಹಂಚಿಕೊಂಡರು. ಬಹಳ ಕ್ರಿಂಜ್ ಆದ ಕತೆ, ದೃಶ್ಯಗಳನ್ನು ಸಿನಿಮಾ ಹೊಂದಿದೆ ಎಂಬ ಅಭಿಪ್ರಾಯ ವ್ಯಕ್ತವಾಯ್ತು. ಇದೇ ಕಾರಣಕ್ಕೆ ಎರಡನೇ ದಿನದಿಂದಲೇ ಸಿನಿಮಾದ ಕಲೆಕ್ಷನ್ ಕುಸಿಯಲು ಆರಂಭಿಸಿತು. ಬಿಡುಗಡೆ ಆದ ಮೂರೇ ದಿನಕ್ಕೆ ಸಿನಿಮಾದ ಗಳಿಕೆಯಲ್ಲಿ 88% ಕುಸಿತ ಕಂಡಿದೆ. ಮೊದಲ ದಿನ 112 ಕೋಟಿ ಗಳಿಕೆ ಮಾಡಿದ್ದ 'ದಿ ರಾಜಾ ಸಾಬ್' ಸಿನಿಮಾ ಮೂರು ದಿನದ ಬಳಿಕ ಸೋಮವಾರ ಗಳಿಸಿರುವುದು ಕೇವಲ 6 ಕೋಟಿ ರೂಪಾಯಿ.

ನಟಿ ಪಾರ್ವತಿ ಅಚ್ಚರಿ ಹೇಳಿಕೆ!

# ಗರ್ಭಿಣಿ ಆಗಲು ಆಸಕ್ತಿ ಇಲ್ಲ



ಬಹುಭಾಷಾ ನಟಿ ಪಾರ್ವತಿ ತಿರುವೋತ್ ಮಗು, ಗರ್ಭಧಾರಣೆ ಕುರಿತಿ ಅಚ್ಚರಿ ಹೇಳಿಕೆ ನೀಡಿ ಸಂಚಲನ ಸೃಷ್ಟಿಸಿದ್ದಾರೆ. ನಟಿ ಪಾರ್ವತಿ ತಿರುವೋತ್ ಮಗುವನ್ನು ದತ್ತು ಪಡೆಯುವ ತಮ್ಮ ಆಸೆಯನ್ನು ಬಹಿರಂಗಪಡಿಸಿದ್ದಾರೆ. ಬಾಲ್ಯದಲ್ಲಿ ತಾಯಿಯಾಗಲು ತುಂಬಾ ಆಸೆ ಇತ್ತು. ಮಗುವಿಗೆ ಹೆಸರನ್ನು ಕೂಡ ಆಗಲೇ ಯೋಚಿಸಿದ್ದೆ. ಆದರೆ ಈಗ ಗರ್ಭಿಣಿಯಾಗಲು ಆಸಕ್ತಿ ಇಲ್ಲ ಎಂದು ಪಾರ್ವತಿ ಹೇಳಿದ್ದಾರೆ. ಸಂದರ್ಶನದಲ್ಲಿ ಪಾರ್ವತಿ ಈ ಬಗ್ಗೆ ಮಾತನಾಡಿದ್ದಾರೆ. ತಾನು ತಾಯಿಯಾಗಲೆಂದೇ ಹುಟ್ಟಿದ್ದೇನೆ ಎಂದು ಒಮ್ಮೆ ಅನಿಸಿತ್ತು, ಆದರೆ ಅದೃಷ್ಟವಶಾತ್ ಆ ಆಲೋಚನೆಯಿಂದ ಹೊರಬರಲು ಸಾಧ್ಯವಾಯಿತು ಎಂದು ಪಾರ್ವತಿ ಹೇಳಿದರು. 'ನನ್ನ ಮಗುವಿಗಾಗಿ ನಾನು ಇಟ್ಟ ಹೆಸರನ್ನು ಟ್ಯಾಟೂ ಹಾಕಿಸಿಕೊಂಡಿದ್ದೇನೆ. ಏಳು ವರ್ಷದವಳಿದ್ದಾಗಲೇ ದತ್ತು ಪಡೆಯಬೇಕೆಂದು ನಾನು ನಿರ್ಧರಿಸಿದ್ದೆ. ಬಾಲಿವುಡ್ ನಟಿ ಸುಶ್ಮಿತಾ ಸೇನ್ ಅವರೇ ನನಗೆ ರೋಲ್ ಮಾಡೆಲ್ ಎಂದಿದ್ದಾರೆ. ಅವರ ಸಂದರ್ಶನ ನನ್ನ ಮೇಲೆ ಬಹಳ ಪ್ರಭಾವ ಬೀರಿದೆ. ಅಪ್ಪ-ಅಮ್ಮ ಆಗ ಅದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಈಗ ಟ್ಯಾಟೂ ಎಲ್ಲ ನೋಡಿದ ಮೇಲೆ ನನ್ನ ನಿರ್ಧಾರ ಗಂಭೀರವಾಗಿದೆ ಎಂದು ಅವರಿಗೆ ಅರ್ಥವಾಗಿದೆ ಎಂದು ಪಾರ್ವತಿ ತಿರುವೋತ್ ಹೇಳುತ್ತಾರೆ.

ಒಂದು ವೇಳೆ ನಾನು ತಾಯಿಯಾಗಲು ಸಿದ್ಧಳಾಗಬಹುದು. ಆದರೆ ಸದ್ಯಕ್ಕೆ ಮಗುವಿಗೆ ಜನ್ಮ ನೀಡುವ ವ್ಯಕ್ತಿಯಾಗಿ ನಾನು ನನ್ನನ್ನು ನೋಡುವುದಿಲ್ಲ. ನಾನು ಅಂಡಾಣು ಫ್ರೀಜ್ ಮಾಡಿಲ್ಲ. ನನ್ನ ದೇಹವನ್ನು ಆ ಪ್ರಕ್ರಿಯೆಗೆ ಒಳಪಡಿಸಲು ನಾನು ಬಯಸುವುದಿಲ್ಲ. ಎಲ್ಲರಿಗೂ ಅವರದೇ ಆದ ನಿರ್ಧಾರಗಳಿವೆ. ನನ್ನ ನಿರ್ಧಾರಗಳು ಹಲವು ಬಾರಿ ಬದಲಾಗಿವೆ. ಒಂದು ಹಂತದಲ್ಲಿ ನಾನು ತಾಯಿಯಾಗಬೇಕೆಂದು ಮಾತ್ರ ಬಯಸಿದ್ದೆ ಎಂದಿದ್ದಾರೆ. ತಾಯಿಯಾಗಬೇಕು ಅನ್ನೋ ಆಲೋಚನೆಯಿಂದ ಹೊರಬರಲು ಸಾಧ್ಯವಾದದ್ದಕ್ಕೆ ದೇವರಿಗೆ ಧನ್ಯವಾದ. ಈ ರೀತಿಯ ಆಲೋಚನೆಯ ಒಂದು ಸಣ್ಣ ಅಂಶವೂ ಈಗ ನನ್ನಲ್ಲಿಲ್ಲ. ಆದರೆ ಮಗುವನ್ನು ನೋಡಿಕೊಳ್ಳುವ, ಪ್ರೀತಿಸುವ ಮನಸ್ಸಿದೆ. ಅದು ನನಗೆ ನನ್ನ ನಾಯಿಯಿಂದ ಸಿಕ್ಕಿದೆ ಎಂದು ಪಾರ್ವತಿ ಹೇಳಿದ್ದಾರೆ.

ಸಿಬಿಎಫ್‌ಸಿಗೆ ದೂರು ಸಲ್ಲಿಕೆ

# ಟಾಕ್ಸಿಕ್‌ಗೆ ಮತ್ತೊಂದು ಏಟು



ಯಶ್ ನಟನೆಯ 'ಟಾಕ್ಸಿಕ್' ಸಿನಿಮಾದ ಟೀಸರ್ ಜನವರಿ 08 ರಂದು ಬಿಡುಗಡೆ ಆಗಿದೆ. ಟೀಸರ್‌ನಲ್ಲಿ ಲೈಂಗಿಕತೆಗೆ ಸಂಬಂಧಿಸಿದ ಕೆಲ ದೃಶ್ಯಗಳು ಇದ್ದು, ಇವು ಟೀಸರ್‌ನ ಬಗ್ಗೆ ಚರ್ಚೆ ಹೆಚ್ಚಾಗಲು ಕಾರಣವಾಗಿವೆ. ಈಗಾಗಲೇ 'ಟಾಕ್ಸಿಕ್' ಟೀಸರ್‌ನ ವಿರುದ್ಧ ಕೆಲ ದೂರುಗಳು ದಾಖಲಾಗಿದ್ದು, ಇದೀಗ ಸಿಬಿಎಫ್‌ಸಿ (ಸೆನ್ಸಾರ್ ಮಂಡಳಿ)ಗೆ ಸಹ ದೂರು ಸಲ್ಲಿಸಲಾಗಿದೆ. ಯಶ್ ನಟನೆಯ 'ಟಾಕ್ಸಿಕ್' ಸಿನಿಮಾದ ಟೀಸರ್ ಕೆಲವೇ ದಿನಗಳ ಹಿಂದಷ್ಟೆ ಬಿಡುಗಡೆ ಆಗಿದೆ. ಟೀಸರ್ ಬಗ್ಗೆ ನಾನಾ ರೀತಿಯ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಟೀಸರ್ ತುಂಬಾ ಹಾಟ್ ಆಯ್ತೆಂದು ಕೆಲವರು, ಅನವಶ್ಯಕ ಹಾಟ್ ದೃಶ್ಯ ಸೇರಿಸಲಾಗಿದೆ ಎಂದು ಮತ್ತೊಬ್ಬರು. ಇನ್ನು ಕೆಲವರು ಟೀಸರ್‌ನ ಪರವಾಗಿಯೂ ವಾದ ಮಂಡಿಸುತ್ತಿದ್ದಾರೆ. ಇದೆಲ್ಲದರ ಮಧ್ಯೆ, ಸಿನಿಮಾದ ವಿರುದ್ಧ ದೂರುಗಳು ದಾಖಲಾಗಲು ಆರಂಭವಾಗಿವೆ. ನಿನ್ನೆ 'ಟಾಕ್ಸಿಕ್' ಸಿನಿಮಾ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ದಾಖಲಾಗಿತ್ತು. ಮಕ್ಕಳ ಆಯೋಗವು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡಿದೆ. ಇದೀಗ ಸಿಬಿಎಫ್‌ಸಿ (ಸೆನ್ಸಾರ್ ಮಂಡಳಿ)ಗೆ ದೂರು ದಾಖಲಾಗಿದೆ. 'ಟಾಕ್ಸಿಕ್' ಸಿನಿಮಾದ ಟೀಸರ್‌ನಲ್ಲಿ ಅಶ್ಲೀಲ ಹಾಗೂ ನೈತಿಕತೆಗೆ ವ್ಯತಿರಿಕ್ತವಾದ ದೃಶ್ಯಗಳಿವೆ ಎಂದು ಆರೋಪಿಸಲಾಗಿದ್ದು, ಸಾಮಾಜಿಕ ಕಾರ್ಯಕರ್ತರ ದಿನೇಶ್ ಕಲ್ಲಹಳ್ಳಿ, ಸೆನ್ಸಾರ್ ಮಂಡಳಿಗೆ ಈ ಬಗ್ಗೆ ದೂರು ದಾಖಲಿಸಿದ್ದು, 'ಟಾಕ್ಸಿಕ್' ಸಿನಿಮಾಕ್ಕೆ ಪ್ರಮಾಣ ಪತ್ರ ನೀಡಬಾರದೆಂದು ಆಗ್ರಹಿಸಿದ್ದಾರೆ. ಟೀಸರ್‌ನಲ್ಲಿ ಲೈಂಗಿಕವಾಗಿ ಪ್ರಚೋದಿಸುವ ಹಾಗೂ ಅಶ್ಲೀಲ ದೃಶ್ಯಗಳಿವೆ, ಅವು ಅಪ್ರಾಪ್ತ ವಯಸ್ಕರ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ ಎಂದು ಕಳವಳ ವ್ಯಕ್ತಪಡಿಸಿರುವ ದಿನೇಶ್ ಕಲ್ಲಹಳ್ಳಿ, ಸಿನೆಮಾದ ಟೀಸರ್ ಸಾಮಾಜಿಕ ನೈತಿಕತೆಯ ಮಿತಿಯನ್ನು ಮೀರಿದೆ, ಆದ್ದರಿಂದ ಕೂಡಲೇ ಈ ದೃಶ್ಯಗಳನ್ನು ತೆಗೆದುಹಾಕಬೇಕು, ಚಿತ್ರದ ನಿರ್ದೇಶಕರು ಹಾಗೂ ನಿರ್ಮಾಪಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಹೇಳಿದೆ.

# ಕೊನೆಗೂ ಗೆದ್ದ ಚಿರಂಜೀವಿ



ಸತತ ಸೋಲು ಕಂಡಿದ್ದ ಮೆಗಾಸ್ಟಾರ್ ಚಿರಂಜೀವಿಗೆ ಈ ಸಂಕ್ರಾಂತಿ ಹಬ್ಬಕ್ಕೆ ಗೆಲುವು ಧಕ್ಕಿದಂತಿದೆ. ಚಿರಂಜೀವಿ ನಟಿಸಿದ್ದ ಹಾಸ್ಯ ಪ್ರಧಾನ ಆಕ್ಷನ್ ಸಿನಿಮಾ 'ಮನ ಶಂಕರ ವರ ಪ್ರಸಾದ್ ಗಾರು' ಮೊದಲ ದಿನ ನಿರೀಕ್ಷೆಗೂ ಮೀರಿದ ಕಲೆಕ್ಷನ್ ಮಾಡಿದೆ. ಸಿನಿಮಾ ಮೊದಲ ದಿನ ಗಳಿಸಿದ್ದೆಷ್ಟು ಮಾಹಿತಿ ಇಲ್ಲಿದೆ ನೋಡಿ... ಮೆಗಾಸ್ಟಾರ್ ಚಿರಂಜೀವಿ , ತೆಲುಗು ಚಿತ್ರರಂಗದ ಸೂಪರ್ ಸ್ಟಾರ್ ನಟ. ತೆಲುಗು ಚಿತ್ರರಂಗದ ಲಿಜೆಂಡ್‌ಗಳಲ್ಲಿ ಒಬ್ಬರು. ರಾಜಕೀಯಕ್ಕೆ ಹೋಗಿ ಚಿತ್ರರಂಗದಿಂದ ದೂರಾಗಿದ್ದ ಚಿರಂಜೀವಿ ಬಳಿಕ ರಾಜಕೀಯ ತೊರೆದು ಸಂಪೂರ್ಣವಾಗಿ ಮತ್ತೆ ಚಿತ್ರರಂಗಕ್ಕೆ ತೊಡಗಿಸಿಕೊಂಡರು. ಆದರೆ ಅವರಿಗೆ ದೊಡ್ಡ ಯಶಸ್ಸು ಸಿಕ್ಕಿರಲಿಲ್ಲ. 2019ರ ಬಳಿಕ ಚಿರಂಜೀವಿ ನಟಿಸಿದ ನಾಲ್ಕು ಸಿನಿಮಾಗಳಲ್ಲಿ ನಟಿಸಿದ್ದರು. ನಾಲ್ಕೂ ಸಿನಿಮಾಗಳು ಸೋತಿದ್ದವು. ಇದೀಗ ಕೊನೆಗೂ 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಮೂಲಕ ಗೆಲುವು ಸಾಧಿಸಿದ್ದಾರೆ ನಟ ಚಿರಂಜೀವಿ. ಅನಿಲ್ ರವಿಪುಡಿ ನಿರ್ದೇಶನದ 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಜನವರಿ 12 ರಂದು ಬಿಡುಗಡೆ ಆಗಿದ್ದು, ಮೊದಲ ದಿನ ಭರ್ಜರಿ ಗಳಿಕೆ ಮಾಡಿದೆ. ಸಿನಿಮಾ ನೋಡಿದ ಬಹುತೇಕ ಮಂದಿ ಸಿನಿಮಾದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. 'ಸಂಕ್ರಾಂತಿಗೆ ಬಿಡುಗಡೆ ಆದ ಪಕ್ಕಾ ಎಂಟರ್ಟೈನರ್' ಎಂದು ವಿಮರ್ಶಕರು ಸಹ ಕೊಂಡಾಡಿದ್ದಾರೆ. ಆ ಮೂಲಕ ಈ ಸಂಕ್ರಾಂತಿಗೆ ತೆಲುಗು ಚಿತ್ರರಂಗದಲ್ಲಿ ಹಿಟ್ ಸಿನಿಮಾ ಆಗುವ ಎಲ್ಲಾ ಲಕ್ಷಣಗಳನ್ನು ಚಿರಂಜೀವಿ ನಟನೆಯ 'ಮನ ಶಂಕರ ವರ ಪ್ರಸಾದ್' ಸಿನಿಮಾ ತೋರಿಸಿದೆ. 'ಮನ ಶಂಕರ ವರ ಪ್ರಸಾದ್ ಗಾರು' ಸಿನಿಮಾ ಮೊದಲ ದಿನ ಬಾಕ್ಸ್ ಆಫೀಸ್‌ನಲ್ಲಿ ಸುಮಾರು 38 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಇದು ಭಾರತದ ಬಾಕ್ಸ್ ಆಫೀಸ್ ಲೆಕ್ಕಾಚಾರವಾಗಿದೆ.

# ಅಭಿಮಾನಿಗಳಿಗೆ ಬಿಗ್ ಶಾಕ್!



ಆರ್‌ಸಿಬಿ ಅಭಿಮಾನಿಗಳಿಗೆ ಬಿಗ್ ಶಾಕ್!

ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯ ಸಮಯದಲ್ಲಿ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಪ್ರಾಣ ಕಳೆದುಕೊಂಡ ನಂತರ ಚಿನ್ನಸ್ವಾಮಿ ಕ್ರೀಡಾಂಗಣ ಸುರಕ್ಷಿತವಲ್ಲ ಎಂದು ಕರ್ನಾಟಕ ಸರ್ಕಾರ ಭಾವಿಸಿದೆ. ಹಾಗಾಗಿ ಈ ವರ್ಷದ ಪಂದ್ಯಗಳು ಸ್ಥಳಾಂತರಗೊಂಡಿವೆ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳಿಗೆ ಬೇಸರದ ಸುದ್ದಿ ಕೇಳಿಬಂದಿದೆ. ಮುಂಬರುವ ಐಪಿಎಲ್ 2026 ರ ಋತುವಿನಲ್ಲಿ ಆರ್‌ಸಿಬಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಮ್ಮ ತವರು ಪಂದ್ಯಗಳನ್ನು ಆಡುವುದಿಲ್ಲ. ಆರ್‌ಸಿಬಿ ತನ್ನ ತವರು ಪಂದ್ಯಗಳನ್ನು ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣ ಮತ್ತು ರಾಯ್ಪುರದ ಶಾಹಿದ್ ವೀರ್ ನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ಆಡಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ. ಆದರೆ ಆರ್‌ಸಿಬಿ ಫ್ರಾಂಚೈಸಿ ಇದನ್ನು ಇನ್ನೂ ಅಧಿಕೃತವಾಗಿ ಘೋಷಿಸಿಲ್ಲ. ಕಳೆದ ವರ್ಷ ಐಪಿಎಲ್ ವಿಜಯ ಯಾತ್ರೆಯ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಅಭಿಮಾನಿಗಳು ಸಾವನ್ನಪ್ಪಿದ್ದರಿಂದ ಚಿನ್ನಸ್ವಾಮಿಯಲ್ಲಿ ಯಾವುದೇ ಮಾದರಿಯ ಕ್ರಿಕೆಟ್ ಪಂದ್ಯಗಳನ್ನ ಆಯೋಜಿಸುವುದನ್ನ ರಾಜ್ಯ ಸರ್ಕಾರ ನಿಷೇಧಿಸಿದೆಆರ್‌ಸಿಬಿ ತಮ್ಮ ತವರು ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡುವುದಿಲ್ಲ. ತವರಿನ 7 ಪಂದ್ಯಗಳಲ್ಲಿ ಐದು ಪಂದ್ಯಗಳನ್ನು ನವಿ ಮುಂಬೈನಲ್ಲಿ ಮತ್ತು ಇನ್ನುಳಿದ 3 ಪಂದ್ಯಗಳನ್ನು ರಾಯ್ಪುರದಲ್ಲಿ ಆಡಲಾಗುವುದು. ಈ ಎರಡು ಮೈದಾನಗಳಲ್ಲಿ ವ್ಯವಸ್ಥೆ ಮಾಡಲು ಆರ್‌ಸಿಬಿ ಅಧಿಕಾರಿಗಳು ಈಗಾಗಲೇ ಸಂಬಂಧಿತ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ' ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ. ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯ ಸಮಯದಲ್ಲಿ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಪ್ರಾಣ ಕಳೆದುಕೊಂಡ ನಂತರ ಚಿನ್ನಸ್ವಾಮಿ ಕ್ರೀಡಾಂಗಣ ಸುರಕ್ಷಿತವಲ್ಲ ಎಂದು ಕರ್ನಾಟಕ ಸರ್ಕಾರ ಭಾವಿಸಿದೆ.

# ಹ್ಯಾರಿಸ್, ಮಂಧಾನ ಅಬ್ಬರ




2026ರ ವುಮೆನ್ಸ್ ಪ್ರೀಮಿಯರ್ ಲೀಗ್‌ನ 5ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡ ಯುಪಿ ವಾರಿಯರ್ಸ್ ವಿರುದ್ಧ ಏಕಪಕ್ಷೀಯ ಗೆಲುವು ದಾಖಲಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಆರ್‌ಸಿಬಿ 2026ರ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಿದೆ. ಯುಪಿ ವಾರಿಯರ್ಸ್ ವಿರುದ್ಧ ಸೋಮವಾರ ಡಿವೈ ಪಾಟೀಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಯುಪಿ ನೀಡಿದ್ದ 144 ರನ್‌ಗಳ ಸಾಧಾರಣ ಗುರಿಯನ್ನು ಆರ್‌ಸಿಬಿ ಕೇವಲ 1 ವಿಕೆಟ್ ನಷ್ಟಕ್ಕೆ ಕೇವಲ 12.1 ಓವರ್‌ಗಳಲ್ಲಿ ತಲುಪಿತು. ಯುಪಿ ಬೌಲರ್‌ಗಳನ್ನು ಬೆಂಡೆತ್ತಿದ್ದ ಆಸ್ಟ್ರೇಲಿಯಾದ ದೈತ್ಯ ಬ್ಯಾಟರ್ ಗ್ರೇಸ್ ಹ್ಯಾರಿಸ್ 85 ರನ್‌ಗಳ ಅರ್ಧಶತಕ ಸಿಡಿಸಿದರೆ, ನಾಯಕಿ ಮಂಧಾನ ಅಜೇಯ 47 ರನ್‌ಗಳಿಸಿ ಬೆಂಗಳೂರಿಗೆ ಸತತ 2ನೇ ಗೆಲುವು ತಂದುಕೊಟ್ಟರು. 144 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡ ಪವರ್ ಪ್ಲೇನಲ್ಲೇ 78 ರನ್ ಕಲೆ ಹಾಕಿತು. ಗ್ರೇಸ್ ಹ್ಯಾರಿಸ್ ಪವರ್ ಪ್ಲೇನಲ್ಲೇ ಕೇವಲ 22 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಮಂಧಾನ ಜೊತೆಗೆ ಮೊದಲ ವಿಕೆಟ್‌ಗೆ ಮುರಿಯದ 144 ರನ್‌ಗಳ ಜೊತೆಯಾಟ ನಡೆಸಿದ ಹ್ಯಾರಿಸ್ ಕೇವಲ 40 ಎಸೆತಗಳಲ್ಲಿ 10 ಬೌಂಡರಿ ಹಾಗೂ 5 ಸಿಕ್ಸರ್‌ಗಳ ಸಹಿತ 85 ರನ್‌ಗಳಿಸಿ ಗೆಲುವಿಗೆ ಕೇವಲ 7 ರನ್‌ಗಳಿದ್ದಾಗ ಶಿಖಾ ಪಾಂಡೆಗೆ ವಿಕೆಟ್ ಒಪ್ಪಿಸಿದರು. ಹ್ಯಾರಿಸ್‌ಗೆ ಸೂಕ್ತ ಸಾಥ್ ನೀಡಿದ ಮಂಧಾನ 32 ಎಸೆತಗಳಲ್ಲಿ 9 ಬೌಂಡರಿಗಳ ಸಹಿತ ಅಜೇಯ 47 ರನ್‌ಗಳಿಸಿದರು. ರಿಚಾ ಅಜೇಯ 4 ರನ್‌ಗಳಿಸಿದರು.




ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್ ಮಾಡಿದ್ದ ಯುಪಿ ವಾರಿಯರ್ಸ್ ತಂಡ 20 ಓವರ್ಗಳಲ್ಲಿ 5 ವಿಕೆಟ್ ಕಳೆದುಕೊಂಡು 143 ರನ್‌ಗಳ ಸಾಧಾರಣ ಗುರಿ ನೀಡಿತ್ತು. ಆರಂಭಿಕರಾದ ಹರ್ಲೀನ್ ಡಿಯೋಲ್ 14 ಎಸೆತಗಳಲ್ಲಿ 11, ನಾಯಕಿ ಮೆಗ್ ಲ್ಯಾನಿಂಗ್ 21 ಎಸೆತಗಳಲ್ಲಿ 14 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸ್ಫೋಟಕ ಬ್ಯಾಟರ್‌ಗಳಾದ ಫೀಬಿ ಲಿಚ್‌ಫಿಲ್ಡ್ 11 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 20 ರನ್‌ಗಳಿಸಿ ಶ್ರೇಯಾಂಕ ಪಾಟೀಲ್ಗೆ ವಿಕೆಟ್ ಒಪ್ಪಿಸಿದರು.

ನಂತರ ಬಂದ ಕಿರಣ್ ಪ್ರಭು ನವ್ಗಿರೆ ಕೇವಲ 5 ರನ್ ಹಾಗೂ ಶ್ವೇತಾ ಸೆಹ್ರಾವತ್ (0) ನಡೀನ್ ಡಿ ಕ್ಲರ್ಕ್‌ರ ಒಂದೇ ಓವರ್ ಸತತ 2 ಎಸೆತಗಳಲ್ಲಿ ಔಟ್ ಆಗಿ ಪೆವಿಲಿಯನ್ ಸೇರಿಕೊಂಡರು. 8.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 50 ರನ್‌ಗಳಿಸಿದ್ದ ಯುಪಿಗೆ ದೀಪ್ತಿ ಶರ್ಮಾ ಹಾಗೂ ಡಿಯಾಂಡ್ರ, ಡಾಟಿನ್ 93 ರನ್‌ಗಳ ಜೊತೆಯಾಟ ನೀಡಿದರು. ದೀಪ್ತಿ 35 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 45 ರನ್‌ಗಳಿಸಿದರೆ, ಡಾಟಿನ್ 37 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 40 ರನ್‌ಗಳಿಸಿದರು. ಆರ್‌ಸಿಬಿ ಪರ ಇಂಗ್ಲೆಂಡ್ ಸ್ಟಾರ್ ಬೌಲರ್ ಲಾರೆನ್ ಬೆಲ್ 4 ಓವರ್ ಎಸೆದು ಕೇವಲ 16 ರನ್ ಮಾತ್ರ ನೀಡಿ 1 ವಿಕೆಟ್ ಪಡೆದರೆ, ನಡೀನ್ ಡಿ ಕ್ಲರ್ಕ್ 4 ಓವರ್‌ಗಳಲ್ಲಿ 28 ರನ್ ನೀಡಿ 2 ವಿಕೆಟ್ ಪಡೆದು ಮಿಂಚಿದರು.

# ಎಲ್ಲಾ ಸ್ವರೂಪದ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ




ಅಲಿಸ್ಸಾ ಹೀಲಿ 295 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, ಅಲಿಸ್ಸಾ ಹೀಲಿ 300ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, 7000ಕ್ಕೂ ಹೆಚ್ಚು ರನ್‌ಗಳಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 7 ಶತಕ, ಟಿ20ಯಲ್ಲಿ ಒಂದು ಶತಕ ಸಿಡಿಸಿದ್ದಾರೆ. ಆಸ್ಟ್ರೇಲಿಯಾದ ನಾಯಕಿ ಅಲಿಸ್ಸಾ ಹೀಲಿ ದಿಢೀರ್ ನಿವೃತ್ತಿ ಘೋಷಿಸಿದ್ದಾರೆ. ಫೆಬ್ರವರಿ-ಮಾರ್ಚ್‌ನಲ್ಲಿ ಭಾರತದ ವಿರುದ್ಧದ ಮಲ್ಟಿ-ಫಾರ್ಮ್ಯಾಟ್ ತವರಿನ ಸರಣಿಯ ನಂತರ ಕ್ರಿಕೆಟ್‌ನ ಎಲ್ಲಾ ರೂಪಗಳಿಂದ ನಿವೃತ್ತಿ ಘೋಷಿಸಿದ್ದಾರೆ. ಹೀಲಿ ಭಾರತದ ವಿರುದ್ಧದ ಟಿ20 ಪಂದ್ಯಗಳಲ್ಲೂ ಭಾಗವಹಿಸುವುದಿಲ್ಲ, ಏಕೆಂದರೆ ಆಸ್ಟ್ರೇಲಿಯಾ ತಂಡ ಟಿ20 ವಿಶ್ವಕಪ್‌ಗೆ ಸಿದ್ಧತೆ ನಡೆಸುತ್ತಿದೆ. ಹಾಗಾಗಿ ಯುವ ಆಟಗಾರ್ತಿಯರಿಗೆ ಅವಕಾಶ ಸಿಗಬೇಕೆಂದು ತೀರ್ಮಾನಿಸಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಆದರೆ ಹೀಲಿ ಏಕದಿನ ಮತ್ತು ಪರ್ತ್‌ನಲ್ಲಿ ನಡೆಯುವ ಒಂದು ಡೇ ಅಂಡ್-ನೈಟ್ ಟೆಸ್ಟ್ ಪಂದ್ಯದಲ್ಲಿ ನಾಯಕತ್ವ ವಹಿಸಲಿದ್ದಾರೆ. ಹೀಲಿ 2010ರಲ್ಲಿ ತಮ್ಮ 19 ವಯಸ್ಸಿನಲ್ಲಿ ನ್ಯೂಜಿಲೆಂಡ್ ವಿರುದ್ಧ ಅಂತರರಾಷ್ಟ್ರೀಯ ಪಾದಾರ್ಪಣೆ ಮಾಡಿದ್ದರು. ಹೀಲಿ ತಮ್ಮ 15 ವರ್ಷಗಳ ಅಂತಾರಾಷ್ಟ್ರೀಯ ವೃತ್ತಿ ಜೀವನದಲ್ಲಿ 162 ಟಿ20, 126 ಒಡಿಐ ಮತ್ತು 11 ಟೆಸ್ಟ್ ಪಂದ್ಯಗಳನ್ನಾಡಿದ್ದಾರೆ. ವಿಕೆಟ್ ಕೀಪರ್ ಆಗಿ ಹೀಲಿ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಬ್ಯಾಟರ್‌ಗಳನ್ನ ಔಟ್ ಮಾಡಿರುವ ದಾಖಲೆ (126) ಹೊಂದಿದ್ದಾರೆ. ಅಲಿಸ್ಸಾ ಹೀಲಿ 295 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, ಅಲಿಸ್ಸಾ ಹೀಲಿ 300ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, 7000ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 7 ಶತಕ, ಟಿ20ಯಲ್ಲಿ ಒಂದು ಶತಕ ಸಿಡಿಸಿದ್ದಾರೆ. 2023ರಲ್ಲಿ ಮೆಗ್ ಲ್ಯಾನಿಂಗ್ ನಿವೃತ್ತಿಯ ನಂತರ ಹೀಲಿ ಆಸ್ಟ್ರೇಲಿಯಾದ ಪೂರ್ಣಕಾಲೀನ ನಾಯಕಿಯಾಗಿದ್ದರು. ಅವರ ನಾಯಕತ್ವದಲ್ಲಿ ಇಂಗ್ಲೆಂಡ್ ವಿರುದ್ಧ ಆಷಸ್ ಸರಣಿಯನ್ನು 16-0 ಅಂತರದಿಂದ ಗೆದ್ದಿತ್ತು. ಜೊತೆಗೆ 2024ರ ಮಹಿಳಾ ಟಿ20 ವಿಶ್ವಕಪ್ ಮತ್ತು 2025ರ ಮಹಿಳಾ ವಿಶ್ವಕಪ್‌ನಲ್ಲಿ ಸೆಮಿಫೈನಲ್ ತಲುಪಿತ್ತು. ಹೀಲಿ 8 ವಿಶ್ವಕಪ್ ಗೆದ್ದ ತಂಡದ ಸದಸ್ಯರಾಗಿದ್ದಾರೆ. ಇದರಲ್ಲಿ 6 ಟಿ20 ಮತ್ತು 2 ಏಕದಿನ ವಿಶ್ವಕಪ್ ಸೇರಿವೆ. ವಿಶ್ವಕಪ್ ಫೈನಲ್‌ನಲ್ಲಿ ಅತಿ ಹೆಚ್ಚು ವೈಯಕ್ತಿಕ ಸ್ಕೋರ್‌ನ ದಾಖಲೆ ಹೀಲಿ ಹೆಸರಿನಲ್ಲಿದೆ .

# 31 ವರ್ಷಕ್ಕೆ ಭಾರತೀಯ ಕ್ರಿಕೆಟ್‌ಗೆ ನಿವೃತ್ತಿ

ಜರ್ಸಿ ಹಾಕಿ ಆಡುವ ಹೆಮ್ಮೆ



ಕಾರಿಯಪ್ಪಾ ತಮ್ಮ ನಿವೃತ್ತಿ ಪೋಸ್ಟ್‌ನಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಮತ್ತು ಕ್ರಿಕೆಟ್ ಅಸೋಸಿಯೇಷನ್ ಆಫ್ ಮಿಜೋರಾಮ್‌ಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಕಾರಿಯಪ್ಪಾ ತಮ್ಮ ಪಯಣದಲ್ಲಿ ಸಹಾಯ ಮಾಡಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಕರ್ನಾಟಕ ಸ್ಪಿನ್ನರ್ ಕೆ.ಸಿ. ಕಾರಿಯಪ್ಪ ತಮ್ಮ ಸುದೀರ್ಘ ವೃತ್ತಿಜೀವನಕ್ಕೆ ವಿದಾಯ ಹೇಳಿದ್ದಾರೆ. ರಾಷ್ಟ್ರೀಯ ತಂಡಕ್ಕೆ ಆಡುವ ಕನಸನ್ನು ಈಡೇರಿಸಿಕೊಳ್ಳದೆ ಅವರು ಭಾರತೀಯ ಕ್ರಿಕೆಟ್‌ನಿಂದ ನಿವೃತ್ತರಾದರು. 31 ವರ್ಷದ ಲೆಗ್ ಸ್ಪಿನ್ನರ್ ಜನವರಿ 12, 2026ರಂದು ಬಿಸಿಸಿಐ ಕ್ರಿಕೆಟ್‌ನಿಂದ ನಿವೃತ್ತಿಯನ್ನು ಘೋಷಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಭಾವುಕ ಪೋಸ್ಟ್ ಮೂಲಕ ಅವರು ತಮ್ಮ ನಿವೃತ್ತಿಯನ್ನು ಅಧಿಕೃತಗೊಳಿಸಿದ್ದು, ರಸ್ತೆಗಳಲ್ಲಿ ಆರಂಭವಾದ ನನ್ನ ಪಯಣ ಸ್ಟೇಡಿಯಂಗಳ ಬೆಳಕು ಮತ್ತು ಜರ್ಸಿ ಹಾಕಿ ಆಡುವ ಹೆಮ್ಮೆಯವರೆಗೆ ಬೆಳೆಯಿತು. ನಾನು ಕನಸು ಕಂಡ ಕನಸನ್ನು ನಿಜ ಮಾಡಿದೆ. ನಾನು ಬಿಸಿಸಿಐ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸುತ್ತಿದ್ದೇನೆಂದು ತಿಳಿಸಿದ್ದಾರೆ. ಕಾರಿಯಪ್ಪಾ ತಮ್ಮ ನಿವೃತ್ತಿ ಪೋಸ್ಟ್‌ನಲ್ಲಿ ಕೆಎಸ್‌ಸಿಎ ಮತ್ತು ಕ್ರಿಕೆಟ್ ಅಸೋಸಿಯೇಷನ್ ಆಫ್ ಮಿಜೋರಾಮ್‌ಗೆ ಕೃತಜ್ಞತೆ ಸಲ್ಲಿಸಿದ್ದಾರೆ ಕಾರಿಯಪ್ಪಾ ತಮ್ಮ ಪಯಣದಲ್ಲಿ ಸಹಾಯ ಮಾಡಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಇಂದಿನಿಂದ ನಾನು ಭಾರತೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದುತ್ತಿದ್ದೇನೆ. ಈ ದೀರ್ಘ ಪ್ರಯಾಣ ನನಗೆ ಬಹಳಷ್ಟು ನೀಡಿದೆ. ಗೆಲುವುಗಳು ನನ್ನನ್ನು ನಗುವಂತೆ ಮಾಡಿದೆ. ಸೋಲುಗಳು ನನ್ನನ್ನು ಕಣ್ಣೀರುಡುವಂತೆಮಾಡಿವೆ. ಒಟ್ಟಾರೆಯಾಗಿ, ನಾನು ಬಹಳಷ್ಟು ಕಲಿತಿದ್ದೇನೆ. ಒಬ್ಬ ವ್ಯಕ್ತಿಯಾಗಿ ನಾನು ಬಹಳಷ್ಟು ಸುಧಾರಿಸಿದ್ದೇನೆ. ನನ್ನ ಮೇಲೆ ನಂಬಿಕೆ ಇರಿಸಿ ಪ್ರೋತ್ಸಾಹಿಸಿದ್ದಕ್ಕಾಗಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ಗೆ ನಾನು ಧನ್ಯವಾದ ಹೇಳುತ್ತೇನೆ. ನನ್ನನ್ನು ಬೆಂಬಲಿಸಿದ್ದಕ್ಕಾಗಿ ಮತ್ತು ನನ್ನನ್ನು ಕುಟುಂಬದ ಸದಸ್ಯರಂತೆ ನಡೆಸಿಕೊಂಡಿದ್ದಕ್ಕಾಗಿ ಮಿಜೋರಾಂ ಕ್ರಿಕೆಟ್ ಅಸೋಸಿಯೇಷನ್‌ಗೆ ನಾನು ಧನ್ಯವಾದ ಹೇಳುತ್ತೇನೆ ಎಂದು ಕಾರಿಯಪ್ಪ ತಿಳಿಸಿದ್ದಾರೆ. ಅವರು ಭಾರತೀಯ ಕ್ರಿಕೆಟ್‌ಗೆ ವಿದಾಯ ಹೇಳಿರುವುದರಿಂದ ವಿದೇಶಿ ಲೀಗ್‌ಗಳಲ್ಲಿ ಆಡುವ ಅವಕಾಶವನ್ನು ಹೊಂದಿದ್ದಾರೆ. ಕಾರಿಯಪ್ಪಾ ಅವರ ಐಪಿಎಲ್ ಪಯಣ 2015ರಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದಿಂದ ಆರಂಭವಾಯಿತು. ಕರ್ನಾಟಕ ಪ್ರೀಮಿಯರ್ ಲೀಗ್‌ನಲ್ಲಿ ಅವರ ಮಿಸ್ಟರಿ ಸ್ಪಿನ್ ಪ್ರದರ್ಶನದಿಂದಾಗಿ ಕೆಕೆಆರ್ ಅವರನ್ನು 2.4 ಕೋಟಿ ರೂಪಾಯಿಗೆ ಖರೀದಿಸಿತು. ಅವರ ದೇಶೀಯ ಕ್ರಿಕೆಟ್ ಅನುಭವ ಕಡಿಮೆಯಿದ್ದರೂ ಐಪಿಎಲ್‌ಗೆ ಆಯ್ಕೆಯಾದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966